# ದೇವನಾಣೆ

ವಾಗ್ದತ್ತ ಮಸೀಹ್ ಮತ್ತು ಮಹ್‌ದೀ
ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರ ಲಿಖಿತಗಳಿಂದ

ಸಂಪಾದನೆ:
ಬಶೀರುದ್ದೀನ್ ಅಲ್ಲಾದೀನ್
ಹೈದರಾಬಾದ್

**In the name of God, Most Gracious, Ever Merciful**

# DEVANAANE

## (Khuda ki Qasam)

In the history of mankind, is there any individual who made a claim, and lied with God as witness for his destruction, and yet lived to see his mission succeed? Mirza Ghulam Ahmad of Qadian, India, the Promised Messiah of the latter days, is one such person.

Finally, the Kannada translation of the Urdu book containing oaths, swearing in the name of God, has been accomplished under the title of "DEVANAANE". This book contains forty-seven such oaths the Promised Messiah has taken to prove his truthfulness that he has come as the Reformer of the Latter Days for whom all the major religions are waiting. In his books, he repeatedly states that, “I swear by God Who has sent me and to lie against Whom is the work of the accursed that He has sent me as the Promised Messiah.” He says, “I declare with full confidence and steadfastness that I am in the right and that with the Grace of Allah, I will emerge victorious in this struggle.”

How beautiful is his prayer, “O! Our God of Bounties, O! Our God. Who is Raheem (Merciful) of distress, grant all my prayers and grant us victory against our opponents with bright signs. It is YOU Alone Who has the real power and strength.” He Had to face insurmountable opposition, and he pleads with God as follows, “O, the One from whose sight nothing is hidden, if you see that I am disobedient and wicked, if You see that I am evil then crush this wicked one into FRAGMENTS. And please my enemies and shower your mercy upon their hearts. And fulfill all their desires by Your Grace. And shower FIRE on my house, become my ENEMY and destroy my mission.”

His mission was to unite mankind, draw them towards the creator, remove all the misconceptions of Islam and bring out its pristine beauties. God granted him great success and his community (Ahmadiyya Muslim Community) which was struggling, sacrificing and facing tribulation is now in over 200 countries with tens of millions of followers.

# ದೇವನಾಣೆ

صاف دل کو کثرت اعجاز کی حاجت نہیں
اک نشاں کافی ہے گر دل میں ہے خوف کردگار

**ನಿರ್ಮಲ ಹೃದಯಕ್ಕೆ ದೃಷ್ಟಾಂತಗಳ ಆಧಿಕ್ಯದ ಆವಶ್ಯಕತೆಯಿಲ್ಲ; ಹೃದಯದಲ್ಲಿ ದೇವಭಯವಿದ್ದರೆ ಕೇವಲ ಒಂದು ಕುರುಹು ಸಾಕು.**

# ದೇವನಾಣೆ

**ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮರ (ವಾಗ್ದತ್ತ ಮಸೀಹ್ ಮತ್ತು ಮಹ್‌ದೀ) ವಿವಿಧ ಗ್ರಂಥಗಳಿಂದ ಸಂಕಲಿಸಿದ ಉಲ್ಲೇಖಗಳು**

**ಸಂಪಾದನೆ:** ಬಶೀರುದ್ದೀನ್ ಅಲಾದೀನ್

# ದೇವನಾಣೆ (Devanaane)

Kannada translation of

## خدا کی قسم

***Khuda ki Qasam*** *(Urdu)*

(Extracts from the writings of
Hadhrat Mirza Ghulam Ahmad Sahib
The Promised Messiah and Imam Mahdi[as])


| | |
|---|---|
| Compiled by | Basheeruddin Alladin |
| Translated by | M.Ubeidullah, B.A., LL.B. |
| Revised by | Muhammad Yusuf, B.com.,<br>Moulavi Inamullah Mangaluru. |
| Type Setting | Moulavi Inamullah Mangaluru. |
| First Edition | 2018 |
| Copies | 1000 |
| Published by | Rashid Muhammad Alladin |
| Printed at | Codialbail Press,<br>Konchadi Post,<br>Mangaluru - 575008 |



ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮ್
ವಾಗ್ದತ್ತ ಮಹ್ದೀ ಮತ್ತು ಮಸೀಹ್

| ಕ್ರ.ಸಂ. | ಪರಿವಿಡಿ | ಪು.ಸಂ. |
|---|---|---|
| 1 | ನಿವೇದನೆ | 1 |
| 2 | ಮುನ್ನುಡಿ | 3 |
| 3 | ಪಂಥಾಹ್ವಾನ | 9 |
| 4 | ಆಇನಯೇ ಕಮಾಲಾತೆ ಇಸ್ಲಾಮ್ | 16 |
| 5 | ಹಖೀಖತುಲ್ ವಹ್ಯ್ | 18 |
| 6 | ಮೂರು ಸಾವಿರ ರೂಪಾಯಿಯ ಬಹುಮಾನ ಪ್ರಕಟಣೆ | 25 |
| 7 | ತಜಲ್ಲಿಯಾತೆ ಇಲಾಹಿಯ್ಯ | 26 |
| 8 | ಸಿರಾಜೆ ಮುನೀರ್ | 28 |
| 9 | ಬರಕಾತುದ್ದುಆ | 31 |
| 10 | ದಾಫಿಉಲ್ ಬಲಾ | 32 |
| 11 | ಸನಾತನ ಧರ್ಮ | 32 |
| 12 | ಅರ್ಬಈನ್ | 33 |
| 13 | ಅಂಜಾಮೆ ಆಥಮ್ | 34 |
| 14 | ಆಸ್ಮಾನೀ ಫೈಸಲ | 36 |
| 15 | ಹಮಾಮತುಲ್ ಬುಶ್ರಾ | 37 |
| 16 | ಸುರ್ಮ ಚಶ್ಮ ಆರ್ಯ | 38 |
| 17 | ಚಶ್ಮಯೆ ಮಸೀಹೀ | 39 |
| 18 | ನಸೀಮೆ ದಅ್‌ವತ್ | 40 |
| 19 | ನುಝೂಲುಲ್ ಮಸೀಹ್ | 41 |
| 20 | ಏಕ್ ಗ಼ಲತೀ ಕಾ ಇಝಾ಼ಲ | 42 |
| 21 | ಕರಾಮಾತುಸ್ಸಾಧಿಖೀನ್ | 43 |
| 22 | ತಿರ್‌ಯಾಖುಲ್ ಖುಲೂಬ್ | 44 |
| 23 | ತುಹ್‌ಫ ಗೋಲ್ಡವಿಯ | 46 |
| 24 | ಕಿತಾಬುಲ್ ಬರಿಯ್ಯ | 48 |
| 25 | ಅಲ್‌ಹಕಮ್ ಪತ್ರಿಕೆ | 49 |
| 26 | ಅಹ್ಮದಿಯಾ ತಅ್‌ಲೀಮೀ ಪಾಕೆಟ್ ಬುಕ್ | 50 |
| 27 | ಇಸ್ಲಾಮಿನ ವೈಭವಶಾಲಿ ಭವಿಷ್ಯತ್‌ಕಾಲ | 52 |
| 28 | ಸತ್ಯವಾದದ ಬಗ್ಗೆ ಪಂಥಾಹ್ವಾನ | 54 |
| 29 | ಮುಕ್ತ ಪಂಥಾಹ್ವಾನ | 55 |

بسم الله الرّحمٰن الرّحیم

نحمدہ و نصلی علی رسولہ الکریم     وعلی عبدہ المسیح الموعود

# ನಿವೇದನೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಬರೆದ ಉಲ್ಲೇಖಗಳನ್ನು ಅವರ ವಿವಿಧ ಗ್ರಂಥಗಳಿಂದ ಸಂಗ್ರಹಿಸಿ ಒಟ್ಟಿಗೆ ಪ್ರಕಟಿಸುತ್ತಿದ್ದೇನೆ. ಅಲ್‌ಹಮ್ದುಲಿಲ್ಲಾಹ್. ದೇವನ ಭಯವಿರುವವರು ಈ ಉಲ್ಲೇಖವನ್ನು ಓದಿ ಅವರ ಸತ್ಯತೆಯನ್ನು ಮನವರಿಕೆ ಮಾಡಿಕೊಳ್ಳುವಂತಾಗಲಿ. ಮಾನ್ಯ ಡಾಕ್ಟರ್ ಮುಹಮ್ಮದ್ ಹುಸೈನ್ ಸಾಜಿದ್ ಸಾಹಿಬ್ ಮತ್ತು ಮಾನ್ಯ ರಾಶಿದ್ ಮುಹಮ್ಮದ್ ಅಲಾದೀನ್ ಸಾಹಿಬರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ಅವರ ಅಮೂಲ್ಯ ಸಹಾಯದಿಂದ ಈ ಪುಸ್ತಕವನ್ನು ಪ್ರಕಟಿಸಲು ನನಗೆ ದೇವನು ಸೌಭಾಗ್ಯ ನೀಡಿದನು.جزاکم اللہ واحسن الجزاء ಜಝಾಕುಮುಲ್ಲಾಹು ಅಹ್‌ಸನಲ್ ಜಝಾ. (ಅವರಿಗೆ ಅಲ್ಲಾಹನು ಅತ್ಯುತ್ತಮ ಪ್ರತಿಫಲ ನೀಡಲಿ.) ಆದರೆ ದುಃಖಕರವಾದುದೇನೆಂದರೆ, ಈ ಪುಸ್ತಕ ಮುದ್ರಿಸಿ ಪ್ರಕಟಿಸುವ ಮೊದಲೇ ಡಾಕ್ಟರ್ ಮುಹಮ್ಮದ್ ಹುಸೈನ್ ಸಾಜಿದ್ ಸಾಹಿಬರು 1988 ಮೇ ದಿನಾಂಕ 25ರಂದು ನಿಧನ ಹೊಂದಿದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅಲ್ಲಾಹನು ಮೃತರಿಗೆ ಮಗ್‌ಫಿರತ್ ನೀಡಲಿ, ಅವರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಾಮೀಪ್ಯ ನೀಡಲಿ – ಆಮೀನ್. ಅವರ ಪತ್ನಿ ಸಿದ್ದೀಖ ಬೇಗಮ್ (ಸೇಠ್ ಅಲೀ ಮುಹಮ್ಮದ್ ಅಲ್ಲಾದೀನರ ಪುತ್ರಿ) ಮತ್ತು ಅವರ ಎಳೆಯರಾದ ನಿಷ್ಕಳಂಕ ಮಕ್ಕಳನ್ನು ಅಲ್ಲಾಹನು ಸಂರಕ್ಷಿಸಲಿ. ಆಮೀನ್.

ಡಾಕ್ಟರ್ ಸಾಹೇಬರ ತೀವ್ರ ಅಭಿಲಾಷೆ ಪ್ರಕಾರ ನಾನು ಈ ಪುಸ್ತಕವನ್ನು ದಿವಂಗತ ಡಾಕ್ಟರ್ ಖಲೀಲ್ ಅಹ್ಮದ್ ನಾಸಿರ್ ಸಾಹೇಬರ ನೆನಪಿಗೆ ಅರ್ಪಿಸುತ್ತೇನೆ. ಅವರನ್ನು ನಾನು ನನ್ನ ವಿದ್ಯಾರ್ಥಿ ಜೀವಿತಕಾಲದಿಂದಲೇ ಪರಿಚಯ ಹೊಂದಿದ್ದೆನು. ಅವರು ಸಾತ್ವಿಕರೂ ಇಸ್ಲಾಮ್ ಮತ್ತು ಅಹ್ಮದಿಯತಿನ ಪ್ರೇಮಿಯೂ ಆಗಿದ್ದರು. ಅಲ್ಲಾಹನು ದಿವಂಗತರಿಬ್ಬರಿಗೂ ಮಗ್‌ಫಿರತ್ ನೀಡಲಿ ಮತ್ತು ಅವರ ಸ್ಥಾನವನ್ನು ಅತ್ಯುನ್ನತಗೊಳಿಸಲಿ. ಕೊನೆಯದಾಗಿ, ಅಲ್ಲಾಹನು ನನ್ನ ಈ ಚಿಕ್ಕ ಪ್ರಯತ್ನವನ್ನು ಅಂಗೀಕರಿಸಲಿ, ಇನ್ನಷ್ಟು ಹೆಚ್ಚಿಗೆ ಧಾರ್ಮಿಕ ಸೇವೆ ಮಾಡುವ ಭಾಗ್ಯ ನೀಡಲಿ ಮತ್ತು ನನ್ನ ಅಂತಿಮ ಗತಿಯನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸಲು ವಿನಂತಿಸಿಕೊಳ್ಳುತ್ತೇನೆ. ಆಮೀನ್.

ಖಾದಿಯಾನಿನ ನಾಝಿರ್ ಸಾಹೇಬ್ ದಅ್‌ವತೋ ತಬ್ಲೀಗ್‌ರಿಗೂ ನಾನು ಕೃತಜ್ಞನಾಗಿದ್ದೇನೆ. ಅವರು ಈ ಪುಸ್ತಕಕ್ಕೆ ಮುನ್ನುಡಿ ಬರೆದು ಇದಕ್ಕೆ ಶೀರ್ಷಿಕೆ ಕೂಡ ಸೂಚಿಸಿದರು ಮತ್ತು ಪುಸ್ತಕ ಪ್ರಕಟಿಸಲು ಅನುಮತಿ ನೀಡಿದರು. جزاكم الله واحسن الجزاء (ಜಝಾಕುಮುಲ್ಲಾಹು ಅಹ್‌ಸನಲ್ ಜಝಾ.)

ಪ್ರಾರ್ಥನೆಗಳನ್ನು ಕೋರುವ

ಬಶೀರುದ್ದೀನ್ ಅಲಾದೀನ್

**ಸೆಕ್ರಟರಿ ತಬ್ಲೀಗೋ ತರ್‌ಬಿಯತ್**

**ಜಮಾಅತ್ ಅಹ್ಮದಿಯಾ ಸಿಕಂದರಾಬಾದ್.**

30/11/1988

# ಮುನ್ನುಡಿ

ಲೋಕದ ಅಂತಿಮ ಕಾಲಘಟ್ಟದಲ್ಲಿ ಹಝ್ರತ್ ಈಸಬ್ನು ಮರ್ಯಮ್[ಅ] ಆಕಾಶದಿಂದ ತನ್ನ ಭೌತಿಕ ದೇಹದೊಂದಿಗೆ ಇಳಿದು ಬಂದು ಹಾಗೂ ಮುಸ್ಲಿಮ್ ಸಮುದಾಯದಲ್ಲಿ ಹಝ್ರತ್ ಇಮಾಮ್ ಮಹ್ದೀ ಅಲೈಹಿಸ್ಸಲಾಮ್ ಪ್ರಕಟವಾಗಿ, ಇವರಿಬ್ಬರೂ ಜೊತೆಸೇರಿ ಇಸ್ಲಾಮ್ ಧರ್ಮ ಪ್ರಚಾರ ಮಾಡುವರು ಎಂಬುದಾಗಿದೆ ಮುಸ್ಲಿಮರ ನಂಬಿಕೆ. ಎಂದರೆ ಸಾಮಾನ್ಯ ಮುಸ್ಲಿಮರು ಲೋಕದ ಈ ಅಂತಿಮ ಕಾಲಘಟ್ಟದಲ್ಲಿ ಇಬ್ಬರು ಆಧ್ಯಾತ್ಮಿಕ ಮಹಾಪುರುಷರ ಆಗಮನವನ್ನು ಪ್ರತೀಕ್ಷಿಸುತ್ತಾ ಇದ್ದಾರೆ. ಆದರೆ ಹಝ್ರತ್ ಈಸಬ್ನು ಮರ್ಯಮ್[ಅ] رَسُولًا إِلَىٰ بَنِي إِسْرَائِيلَ **ರಸೂಲನ್ ಇಲಾ ಬನೀ ಇಸ್ರಾಈಲ್** – "ಇಸ್ರಾಈಲ್ ಸಂತತಿಗಳೆಡೆಗೆ ಒಬ್ಬ ಸಂದೇಶವಾಹಕ" ಆಗಿ **(ಪವಿತ್ರ ಖುರ್ಆನ್ 3:50)** ಕಳುಹಿಸಲ್ಪಟ್ಟವರಾಗಿದ್ದರು ಮತ್ತು ಅವರು ಅಂದಾಜು ಎರಡು ಸಾವಿರ ವರ್ಷಗಳ ಹಿಂದೆ ಇತರ ಎಲ್ಲ ಪ್ರವಾದಿಗಳ ಹಾಗೆಯೇ ಮೃತರಾಗಿರುವವರು ಎಂದು ಪವಿತ್ರ ಖುರ್ಆನ್ ಹಾಗೂ ಅಧಿಕೃತ ಆರು ಹದೀಸು ಗ್ರಂಥಗಳ ಮೂಲಕ ಸಾಬೀತಾಗುತ್ತದೆ. ಅವರು ತನ್ನ ಭೌತಿಕ ಶರೀರರೊಂದಿಗೆ ಆಕಾಶಕ್ಕೇರಿ ಹೋಗಲೂ ಇಲ್ಲ, ಅವರು ಅಲ್ಲಿ ಶರೀರ ಸಹಿತ ಜೀವಂತರಾಗಿಯೂ ಇಲ್ಲ ಮತ್ತು ಅವರು ತನ್ನ ಭೌತಿಕ ಶರೀರದೊಂದಿಗೆ ಭೂಮಿಗೆ ಇಳಿದು ಬರಲಿಕ್ಕೂ ಇಲ್ಲ.

ಆದರೆ ಇಸ್ಲಾಮ್ ಧರ್ಮವನ್ನು ಪುನಶ್ಚೇತನಗೊಳಿಸಲು ಮತ್ತು ಮುಸ್ಲಿಮ್ ಸಮುದಾಯದ ಸುಧಾರಣೆಗೆ ಮುಸ್ಲಿಮ್ ಸಮುದಾಯದಿಂದಲೇ ಒಬ್ಬ ಮಹಾಪುರುಷರು ಪ್ರಕಟವಾಗುವರು ಎಂದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸುಗಳಿಂದ ತಿಳಿದು ಬರುತ್ತದೆ. ಅವರನ್ನು ಇಸ್ಲಾಮಿನ ಸಾಂಕೇತಿಕ ಪದಗಳಲ್ಲಿ ಅಲ್ ಇಮಾಮುಲ್ ಮಹ್ದೀ ಎಂದು ಹೆಸರಿಸಲಾಗುತ್ತಿದೆ. ಅವರು ಆಧ್ಯಾತ್ಮಿಕವಾಗಿ ಹಝ್ರತ್ ಮಸೀಹಿಬ್ನು ಮರ್ಯಮರಿಗೆ ಹೋಲಿಕೆವುಳ್ಳವರಾಗುವರು. ಹದೀಸುಗಳಲ್ಲಿ ಹೀಗೆ ವರದಿಯಾಗಿವೆ:

(ಅ) وَلَا الْمَهْدِيُّ إِلَّا عِيْسَى ابْنِ مَرْيَمَ

**ವಲಲ್‌ಮಹ್‌ದಿಯ್ಯು ಇಲ್ಲಾ ಈಸಬ್ನು ಮರ್‌ಯಮ್.**

**(ಸುನನ್ ಇಬ್ನು ಮಾಜ; ಕಿತಾಬುಲ್ ಫಿತನ್ ಬಾಬ್ ಶಿದ್ದತುಝ್ಝಮಾನ್)**

يُوشِكُ مَنْ عَاشَ مِنْكُمْ أَنْ يَلْقَى عِيسَى ابْنَ مَرْيَمَ إِمَامًا مَهْدِيًّا حَكَمًا وَعَدْلًا (ಆ)

**ಯೂಶಿಖು ಮನ್ ಆಶ ಮಿನ್‌ಕುಮ್ ಅನ್‌ಯುಲ್‌ಖಾ ಈಸಬ್ನ ಮರ್‌ಯಮ ಇಮಾಮನ್ ಮಹ್‌ದಿಯ್ಯನ್ ಹಕಮನ್ ವ ಅದ್‌ಲನ್.**

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಕಿತಾಬು ಬಾಖೀ ಮುಸ್‌ನದುಲ್ ಮುಕ್‌ಸರೀನ್)**

ಇ. كَيْفَ أَنْتُمْ إِذَا نَزَلَ ابْنُ مَرْيَمَ فِيكُمْ وَإِمَامُكُمْ مِنْكُمْ

**ಕೈಫ ಅನ್‌ತುಮ್ ಇದ಼ಾ ನಝುಲಬ್‌ನು ಮರ್‌ಯಮ ಫೀಕುಮ್ ವ ಇಮಾಮುಕುಮ್ ಮಿನ್‌ಕುಮ್.**

**(ಸಹೀಹುಲ್ ಬುಖಾರಿ; ಕಿತಾಬ್ ಅಹಾದೀಸುಲ್ ಅಂಬಿಯಾ, ಬಾಬು ನುಝೂಲು ಈಸಾಬ್ನಿ ಮರ್‌ಯಮ್)**

ಎಂದರೆ ಈಸಬ್ನು ಮರ್‌ಯಮರೇ ಇಮಾಮ್ ಮಹ್‌ದೀ ಆಗುವರು. ಅವರು ಹಕಮ್, ಅದಲ್ ಆಗುವರು ಮತ್ತು ನಿಮ್ಮ ಇಮಾಮ್ ನಿಮ್ಮಿಂದಲೇ ಎಂದರೆ ಮುಸ್ಲಿಮ್ ಸಮುದಾಯದಿಂದಲೇ ಆಗುವರು.

1. ವಾಗ್ದಾನ ನೀಡಲ್ಪಟ್ಟ ಪ್ರಕಾರ ಆಗಮಿಸಲಿರುವ ವ್ಯಕ್ತಿ ಒಬ್ಬರೇ ಆಗಿರುವರು ಎಂದು ಈ ಹದೀಸುಗಳಿಂದ ತಿಳಿದುಬರುತ್ತದೆ. ಅವರು ಇಮಾಮ್ ಮಹ್‌ದಿಯಾಗಿರುವರು ಮತ್ತು ಈಸಬ್ನು ಮರ್‌ಯಮರ ಪ್ರತಿರೂಪವೂ ಅವರಿಗೆ ಸಮಾನವಾಗಿರುವವರೂ ಆಗುವರು. ಏಕೆಂದರೆ ಹಿಂದೆ ಹೇಳಿದ ಹಾಗೆ ಈಸಬ್ನು ಮರ್‌ಯಮ್ ಬನೀ ಇಸ್ರಾಈಲ್ ಜನಾಂಗದವರಿಗೋಸ್ಕರ ಸಂದೇಶವಾಹಕರಾಗಿ ಆಗಮಿಸಿ ಮೃತರಾದರು. ಅವರು ಇಹಲೋಕಕ್ಕೆ ಮರಳಿ ಬರುವ ಪ್ರಶ್ನೆಯೇ ಇಲ್ಲ.
2. ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಒಬ್ಬ ಸಂದೇಶವಾಹಕನ ಸತ್ಯಸಾಕ್ಷ್ಯಕ್ಕಾಗಿ ಅನೇಕ ಪುರಾವೆಗಳೂ ಸಾಕ್ಷ್ಯಧಾರಗಳೂ ಇರುತ್ತವೆ. ಅವುಗಳಲ್ಲಿ ಒಂದೇನೆಂದರೆ, ನಿಯೋಜಿತ ವ್ಯಕ್ತಿ ತನ್ನ ವಾದದ ಬಗ್ಗೆ ಪೂರ್ಣ ದೃಢತೆಯೊಂದಿಗೆ ಅಲ್ಲಾಹನನ್ನು ಸಾಕ್ಷ್ಯವಾಗಿಟ್ಟು ತನ್ನ ವಾದವನ್ನು ಪ್ರಸ್ತಾಪಿಸುವನು ಎಂಬುದಾಗಿದೆ. ಏಕೆಂದರೆ ಯಾರು ಸುಳ್ಳುಗಾರ ಮತ್ತು ಯಾರು ಸತ್ಯವಂತ ಎಂದು ಅಲ್ಲಾಹನು ತಿಳಿದಿರುತ್ತಾನೆ. ಸುಳ್ಳುಗಾರ ಅಲ್ಲಾಹನ ಸಹಾಯವನ್ನು ಎಂದೂ ಪಡೆಯಲಾರನು.

**ಖದ್‌ಖಾ಼ಬ ಮನಿಫ್ತರಾ** قَدْ خَابَ مَنِ افْتَرَى

ಎಂದರೆ, "(ಅಲ್ಲಾಹನ ಮೇಲೆ) ಸುಳ್ಳು ಸೃಷ್ಟನೆ ಮಾಡಿ ಹೇಳುವವರು

ಖಂಡಿತವಾಗಿಯೂ ಪರಾಜಿತರಾಗುವರು" (20:62) ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ ಪ್ರಕಾರ ಅಂತಹ ವ್ಯಕ್ತಿ ಅಲ್ಲಾಹನ ಸಹಾಯ ದೊರಕದೆ ನಿರಾಶನೂ ಪರಾಜಿತನೂ ಆಗುವನಲ್ಲದೆ,

**ವ ಲವ್ ತಖವ್ವಲ ಅಲೈನಾ ಬಅ್‌ಝುಲ್ ಅಖಾವೀಲಿ ಲಅಖಧ್‌ನಾ ಮಿನ್‌ಹು ಬಿಲ್ ಯಮೀನಿ ಸುಮ್ಮ ಲಖತಅ್‌ನಾ ಮಿನ್‌ಹುಲ್ ವತೀನ್**

ಎಂದರೆ "ಆತನು (ನಾವು ಅವತೀರ್ಣಗೊಳಿಸಿದ) ಕೆಲವು ಸುಳ್ಳು ಮಾತುಗಳನ್ನು ನಮ್ಮದೆಂದು ಹೇಳಿರುತ್ತಿದ್ದರೆ, ನಾವು ಆತನನ್ನು ಬಲಗೈಯಿಂದ ಹಿಡಿಯುತ್ತಿದ್ದೆವು. ಅನಂತರ ನಾವು ಅವನ ಜೀವನಾಡಿಯನ್ನೇ ಕೊಯ್ದು ಬಿಡುತ್ತಿದ್ದೆವು." (69:45–47) ಎಂಬ ಪವಿತ್ರ ಖುರ್‌ಆನಿನ ವಚನಗಳ ಪ್ರಕಾರ ಶಿಕ್ಷೆಗೂ ಗುರಿಯಾಗುವನು.

3. ಹದೀಸುಗಳಲ್ಲಿ ಹೀಗೆ ವರದಿಯಾಗಿದೆ: "ಒಬ್ಬ ವ್ಯಕ್ತಿ ಮದೀನಕ್ಕೆ ಆಗಮಿಸಿ ಸಹಾಬರ ಮುಂದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಹೀಗೆ ನಿವೇದಿಸಿದನು: ನೀವು ನಿಮ್ಮ ವಾದವನ್ನು ಅಲ್ಲಾಹನ ಆಣೆ ಹಾಕಿ ಹೇಳಿರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ವಾದವನ್ನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ವಿವರಿಸಿದಾಗ ಆ ವ್ಯಕ್ತಿ ನಂಬಿದನು." ಇದರ ಬಗ್ಗೆ ಸಹೀಹ್ ಬುಖಾರಿಯಲ್ಲಿ ವರದಿಯಾದ ಹದೀಸ್ ಹೀಗಿದೆ:

عَنْ أَنَسِ بْنِ مَالِكٍ يَقُولُ بَيْنَمَا نَحْنُ جُلُوسٌ مَعَ النَّبِيِّ صَلَّى اللهُ عَلَيْهِ وَسَلَّمَ فِي الْمَسْجِدِ دَخَلَ رَجُلٌ عَلَى جَمَلٍ فَأَنَاخَهُ فِي الْمَسْجِدِ ثُمَّ عَقَلَهُ ثُمَّ قَالَ لَهُمْ أَيُّكُمْ مُحَمَّدٌ وَالنَّبِيُّ صَلَّى اللهُ عَلَيْهِ وَسَلَّمَ مُتَّكِئٌ بَيْنَ ظَهْرَانَيْهِمْ فَقُلْنَا هَذَا الرَّجُلُ الْأَبْيَضُ الْمُتَّكِئُ فَقَالَ لَهُ الرَّجُلُ يَا ابْنَ عَبْدِ الْمُطَّلِبِ فَقَالَ لَهُ النَّبِيُّ صَلَّى اللهُ عَلَيْهِ وَسَلَّمَ قَدْ أَجَبْتُكَ فَقَالَ الرَّجُلُ لِلنَّبِيِّ صَلَّى اللهُ عَلَيْهِ وَسَلَّمَ إِنِّي سَائِلُكَ فَمُشَدِّدٌ عَلَيْكَ فِي الْمَسْأَلَةِ فَلَا تَجِدْ عَلَيَّ فِي نَفْسِكَ فَقَالَ سَلْ عَمَّا بَدَا لَكَ فَقَالَ أَسْأَلُكَ بِرَبِّكَ وَرَبِّ مَنْ قَبْلَكَ أَاللهُ أَرْسَلَكَ إِلَى النَّاسِ كُلِّهِمْ فَقَالَ اللَّهُمَّ نَعَمْ قَالَ أَنْشُدُكَ بِاللهِ أَاللهُ أَمَرَكَ أَنْ نُصَلِّيَ الصَّلَوَاتِ الْخَمْسَ فِي الْيَوْمِ وَاللَّيْلَةِ قَالَ اللَّهُمَّ نَعَمْ قَالَ أَنْشُدُكَ بِاللهِ أَاللهُ أَمَرَكَ أَنْ نَصُومَ هَذَا الشَّهْرَ مِنَ السَّنَةِ قَالَ اللَّهُمَّ نَعَمْ قَالَ أَنْشُدُكَ بِاللهِ أَاللهُ أَمَرَكَ أَنْ تَأْخُذَ هَذِهِ الصَّدَقَةَ مِنْ أَغْنِيَائِنَا فَتَقْسِمَهَا عَلَى فُقَرَائِنَا فَقَالَ النَّبِيُّ صَلَّى اللهُ عَلَيْهِ وَسَلَّمَ اللَّهُمَّ نَعَمْ فَقَالَ الرَّجُلُ آمَنْتُ بِمَا جِئْتَ بِهِ وَأَنَا رَسُولُ مَنْ وَرَائِي مِنْ قَوْمِي وَأَنَا ضِمَامُ بْنُ ثَعْلَبَةَ أَخُو بَنِي سَعْدِ بْنِ بَكْرٍ

(صحیح البخاری، کتاب العلم باب ما جاء فی العلم وقولہ تعالیٰ وقل ربّ زدنی علماً القراء)

ಅನಸ್ ಬಿನ್ ಮಾಲಿಕರು ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಯಲ್ಲಿ ಮಸೀದಿಯಲ್ಲಿ ಕುಳಿತಿದ್ದಾಗ ಒಬ್ಬನು ಒಂಟೆ ಮೇಲೆ ಸವಾರಿ ಮಾಡುತ್ತಾ ಬಂದನು. ಅವನು ಒಂಟೆಯನ್ನು ಮಸೀದಿಯ ಬಳಿ ಕಟ್ಟಿ ಹಾಕಿದನು. ಅನಂತರ ನಿಮ್ಮ ಪೈಕಿ ಮುಹಮ್ಮದ್ ಯಾರೆಂದು ಕೇಳಿದನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಲೆದಿಂಬಿಗೆ ಒರಗಿ ಕುಳಿತಿದ್ದರು. ದಿಂಬಿಗೆ ಒರಗಿ ಕುಳಿತ ಬಿಳಿ ವರ್ಣದವರೇ ಮುಹಮ್ಮದ್ ಎಂದು ನಾವು ಹೇಳಿದೆವು. ಆ ವ್ಯಕ್ತಿ ಹೀಗೆ ಸಂಬೋಧಿಸಿದ: ಅಬ್ದುಲ್ ಮುತ್ತಲಿಬರ ಪುತ್ರರೇ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀನು ಪ್ರಶ್ನೆ ಕೇಳು, ನಾನು ಉತ್ತರ ಕೊಡುವೆನು. ಅವನು ಹೇಳಿದನು: ನಾನು ತಮ್ಮೊಂದಿಗೆ ಕೆಲವು ವಿಷಯಗಳನ್ನು ಕೇಳಲಿದ್ದೇನೆ. ನಾನು ಪ್ರಶ್ನೆ ಕೇಳುವಾಗ ತೀವ್ರವಾಗಿ ವರ್ತಿಸಿದರೆ ನೀವು ಕೋಪಗೊಳ್ಳಬಾರದು. ಆಗ ಹಝ್ರತ್ ಪೈಗಂಬರರು(ಸ) ಹೇಳಿದರು: ನೀನು ಅರಿಯಲು ಇಚ್ಛಿಸುವ ಪ್ರಶ್ನೆಗಳನ್ನು ಕೇಳು. ಅವನು ಹೇಳಿದನು: ನಿಮ್ಮ ಪ್ರಭು ಮತ್ತು ಹಿಂದಿನ ಕಾಲದ ಜನರ ಪ್ರಭುವಾದ ಅಲ್ಲಾಹನ ಆಣೆ ಹಾಕಿ ನಿಮ್ಮೊಂದಿಗೆ ಕೇಳುತ್ತೇನೆ. ಏನು ಅಲ್ಲಾಹನು ನಿಮ್ಮನ್ನು ಎಲ್ಲ ಜನರಿಗೆ ಸಂದೇಶ ತಲುಪಿಸಲು ಕಳುಹಿಸಿರುವನೋ? ಹಝ್ರತ್ ಪೈಗಂಬರರು(ಸ) ಹೇಳಿದರು: ಹೌದು, ಅಲ್ಲಾಹನಾಣೆ ಇದು ಸತ್ಯವೆಂದು ಅಲ್ಲಾಹನಿಗೆ ತಿಳಿದಿದೆ. ಆ ವ್ಯಕ್ತಿ ಕೇಳಿದನು: ಹಗಲು ರಾತ್ರಿ ಐದು ಹೊತ್ತು ನಮಾಝ್ ಮಾಡಲು ಅಲ್ಲಾಹನು ಆಜ್ಞೆ ನೀಡಿರುವನೋ ಎಂದು ಅಲ್ಲಾಹನಾಣೆ ಹಾಕಿ ಹೇಳಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲ್ಲಾಹನಾಣೆ ಇದು ಸತ್ಯವೆಂದು ಅಲ್ಲಾಹನಿಗೆ ತಿಳಿದಿದೆ. ಆ ವ್ಯಕ್ತಿ ಕೇಳಿದನು: ವರ್ಷದಲ್ಲಿ ಬರುವ ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸಲು ಅಲ್ಲಾಹನು ಆಜ್ಞೆ ನೀಡಿರುವನೆಂದು ಅಲ್ಲಾಹನಾಣೆ ಹಾಕಿ ಹೇಳಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲ್ಲಾಹನಾಣೆ ಇದು ಸತ್ಯವೆಂದು ಅಲ್ಲಾಹನಿಗೆ ತಿಳಿದಿದೆ. ಅವನು ಪುನಃ ಕೇಳಿದನು: ಶ್ರೀಮಂತರಿಂದ ಸದಖವಾಗಿ (ದಾನವಾಗಿ) ಹಣ ಪಡೆದು ಬಡವರಲ್ಲಿ ಹಂಚಬೇಕೆಂದು ಅಲ್ಲಾಹನು ಹೇಳಿರುವನೋ ಎಂದು ಅಲ್ಲಾಹನಾಣೆ ಹಾಕಿ ಹೇಳಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲ್ಲಾಹನಾಣೆ ಇದು ಸತ್ಯವೆಂದು ಅಲ್ಲಾಹನಿಗೆ ತಿಳಿದಿದೆ. ಆಗ ಆ ವ್ಯಕ್ತಿ ಹೇಳಿದನು: ನೀವು ಅಲ್ಲಾಹನಿಂದ ತಂದ ಆಜ್ಞೆಗಳನ್ನು ನಾನು ಅಂಗೀಕರಿಸುತ್ತೇನೆ. ನಾನು ನನ್ನ ಹಿಂದೆ ಇರುವ ನನ್ನ ಜನಾಂಗದ ದೂತನಾಗಿರುವೆನು. ನನ್ನ ಹೆಸರು ಝಿಮಾಮ್. ನಾನು ಸಅ್‌ಲಬನ ಪುತ್ರನೂ ಬನೀ ಸಅದ್ ಬಿನ್ ಬಕರ್ ಗೋತ್ರಕ್ಕೆ ಸೇರಿದವನೂ ಆಗಿರುವೆನು.

**(ಸಹೀಹುಲ್ ಬುಖ಼ಾರಿ, ಕಿತಾಬುಲ್ ಇಲ್ಮ್, ಬಾಬ್ ಮಾಝ಼ಾ ಫಿಲ್ ಇಲ್ಮಿ ವ ಖೌಲಿಹೀ ತಆಲಾ ವಖುಲ್ರಬ್ಬಿಝಿದ್‌ನೀ ಇಲ್ಮಾ)**

ಹದೀಸಿನಲ್ಲಿ ಮತ್ತೊಂದೆಡೆ ಹೀಗೆಯೂ ಎಚ್ಚರಿಕೆ ನೀಡಲಾಗಿದೆ:

اَلْيَمِيْنُ الْفَاجِرَةُ تَدَعُ الدِّيَارَ بَلَاقِعَ

**ಅಲ್ ಯಮೀನುಲ್ ಫಾಜಿರತು ತದಉದ್ದಿಯಾರ ಬಲಾಖಿಅ**

ಸುಳ್ಳು ಆಣೆ ಹಾಕುವವನು ಅಲ್ಲಾಹನ ಅನುಗ್ರಹದಿಂದ ದೂರವಾಗುತ್ತಾನಲ್ಲದೆ ದೇವನ ಶಿಕ್ಷೆಗೂ ಗುರಿಯಾಗುತ್ತಾನೆ.

**(ಮುಸ್‌ನದುಶ್ಶಹಾಬ್ ಬಾಬುಲ್ ಯಮೀನ್)**

4. ಹಿಜರಿ ಹದಿನಾಲ್ಕನೆಯ ಶತಮಾನದ ಪ್ರಾರಂಭದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್(ಅ) ಹೀಗೆ ವಾದಿಸಿದರು:

"ನಾನು ಅಲ್ಲಾಹನ ಕಡೆಯಿಂದ ಆಗಮಿಸಿದ ಮಹ್‌ದೀ, ಮಸೀಹ್ ಮೌಊದ್ ಹಾಗೂ ಆಂತರಿಕವೂ ಬಾಹ್ಯವೂ ಆದ ಭಿನ್ನಾಭಿಪ್ರಾಯಗಳಿಗೆ ತೀರ್ಪು ನೀಡುವ ಹಕಮ್ (ನ್ಯಾಯಾಧೀಶ) ಆಗಿರುವೆನು ಎಂದು ಅಲ್ಲಾಹನ ಪರಿಶುದ್ಧ ವಹ್ಯ್ (ಸಂದೇಶವಾಣಿ) ಮೂಲಕ ನನಗೆ ತಿಳಿಸಲಾಗಿದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಹೆಸರು ಮಸೀಹ್ ಮತ್ತು ಮಹ್‌ದೀ ಎಂದು ಇರಿಸಿರುವರು. ದೇವನು ತನ್ನ ನೇರವಾದ ಸಂದೇಶವಾಣಿ ಮೂಲಕ ಸಹ ಇದೇ ಹೆಸರು ನನಗಿರಿಸಿದನು. ಈ ಕಾಲದ ಸ್ಥಿತಿ ಸಹ ಇದೇ ಹೆಸರನ್ನು ಆವಶ್ಯಪಡುತ್ತದೆ. ಹೀಗೆ ನನ್ನ ಈ ಹೆಸರುಗಳಿಗೆ ಮೂರು ಸಾಕ್ಷ್ಯಗಳಿವೆ. ನಾನು ದೇವನ ಕಡೆಯಿಂದ ಆಗಮಿಸಿದವನಾಗಿದ್ದೇನೆ ಮತ್ತು ಅವನು ತನ್ನ ದೃಷ್ಟಾಂತಗಳ ಮೂಲಕ ನನ್ನ ಬಗ್ಗೆ ಸಾಕ್ಷಿ ಹೇಳುತ್ತಾನೆ ಎಂದು ಆಕಾಶ ಮತ್ತು ಭೂಮಿಯ ಮಾಲಿಕನಾದ ದೇವನನ್ನು ಸಾಕ್ಷಿಯಾಗಿರಿಸಿ ನಾನು ಹೇಳುತ್ತೇನೆ."

**(ಅರ್‌ಬಈನ್ ನಂಬ್ರ – 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)**

**"**ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹದೀಸಿನಲ್ಲಿ ವಿವರಿಸಿರುವ ಮಸೀಹ್ ಮೌಊದ್ ತಾವೇ ಆಗಿರುವಿರೋ? ದೇವನಾಣೆ ಹಾಕಿ ಉತ್ತರ ಬರೆಯಿರಿ**"** ಎಂದು ಬರೇಲಿಯದ ಒಬ್ಬರು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಗ಼ುಲಾಮ್ ಅಹ್ಮದ್ ಅಲೈಹಿಸಲ್ಲಮರಿಗೆ ಪತ್ರ ಬರೆದು ಕೇಳಿದರು.

ಇದಕ್ಕೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದರು:

ನಾನು ನನ್ನ ಪುಸ್ತಕಗಳಲ್ಲಿ ನನ್ನ ವಾದಗಳ ಬಗ್ಗೆ ಸವಿಸ್ತಾರವಾಗಿ ಅಲ್ಲಾಹನ

ಹೆಸರಲ್ಲಿ ಆಣೆ ಹಾಕಿ ಬರೆದಿರುವೆನು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ದೇವನ ಹೆಸರಲ್ಲಿ ಆಣೆ ಹಾಕಿ ಈಗ ಸಹ ಬರೆಯುತ್ತೇನೆ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಮಸೀಹ್ ಮೌಊದರ ಬಗ್ಗೆ ಹದೀಸುಗಳಲ್ಲಿ ಸುವಾರ್ತೆ ನೀಡಿರುವರೋ ಆ ಮಸೀಹ್ ಮೌಊದ್ ನಾನಾಗಿರುವೆನು. ಈ ಸುವಾರ್ತೆ ಸಹೀಹ್ ಬುಖಾರಿ, ಸಹೀಹ್ ಮುಸ್ಲಿಮ್ ಮತ್ತು ಇತರ ಸಹೀಹ್ ಹದೀಸ್ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. وَكَفٰى بِاللهِ شَهِيْدًا ವ ಕಫಾ ಬಿಲ್ಲಾಹಿ ಶಹೀದ. (ಸಾಕ್ಷಿಯಾಗಿ ಅಲ್ಲಾಹನೇ ಸಾಕು.)."

ಇತಿ: ಮಿರ್ಝಾ ಗ್ಪುಲಾಮ್ ಅಹ್ಮದ್

17/8/1899.

**(ಮಲ್‌ಫೂಝಾತ್ ಭಾಗ 1, ಪುಟ 218)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳ ಬಗ್ಗೆ ಲಕ್ಷ್ಯಗೊಟ್ಟು ಚಿಂತಿಸಿ ಮತ್ತು ಅವರ ಜಮಾಅತಿಗೆ ದೊರಕಿದ ಅಲ್ಲಾಹನ ಬೆಂಬಲ ಹಾಗೂ ಸಹಾಯಗಳನ್ನು ಸ್ವತಃ ಕಂಡು ಮಸೀಹ್ ಮತ್ತು ಮಹ್‌ದೀ ಎಂಬ ಅವರ ವಾದವನ್ನು ಅಂಗೀಕರಿಸುವ ಭಾಗ್ಯ ಸಾತ್ವಿಕರಾದ ಜನರಿಗೆ ಲಭಿಸಬೇಕು ಮತ್ತು ಧಾರ್ಮಿಕ ಸೇವೆ ಹಾಗೂ ಇಸ್ಲಾಮಿನ ಪ್ರಚಾರ ಮಾಡುವ ಭಾಗ್ಯ ಮತ್ತು ಸಂದರ್ಭ ಅವರಿಗೆ ಲಭಿಸುವಂತಾಗಬೇಕು ಎಂಬ ಉದ್ದೇಶದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾದಗಳ ಬಗ್ಗೆ ವಿವಿಧ ಗ್ರಂಥಗಳಲ್ಲೂ ಇತರ ಲೇಖನಗಳಲ್ಲೂ ಅಲ್ಲಾಹನ ಆಣೆ ಹಾಕಿ ಬರೆದ ಉಲ್ಲೇಖಗಳನ್ನು ನಮ್ಮ ಆದರಣೀಯ ಸ್ನೇಹಿತ ಬಶೀರುದ್ದೀನ್ ಅಲಾದೀನ್ ಸಾಹೇಬರು (ಸಿಕಂದರಾಬಾದ್ ಅಹ್ಮದಿಯಾ ಜಮಾಅತಿನ ಸೆಕ್ರಟರಿ ತಬ್ಲೀಗ್) ಈ ಕಿರುಹೊತ್ತಗೆಯಲ್ಲಿ ಸಂಗ್ರಹಿಸಿರುವರು. فجزاه الله تعالیٰ احسن الجزاء **ಫಜಝಾಹುಲ್ಲಾಹು ತಆಲ ಅಹ್‌ಸನಲ್ ಜಝಾ.** (ಅಲ್ಲಾಹನು ಅವರಿಗೆ ಅತ್ಯುತ್ತಮ ಪ್ರತಿಫಲ ದಯಪಾಲಿಸಲಿ). ಆದರಣೀಯ ಬಶೀರುದ್ದೀನ್ ಅಲಾದೀನ್ ಸಾಹೇಬರ ಈ ಪ್ರಯತ್ನವನ್ನು ಅಲ್ಲಾಹನು ಅಂಗೀಕರಿಸಲಿ. ಅದರಿಂದ ಉತ್ತಮವೂ ಹಿತಕರವೂ ಆದ ಪರಿಣಾಮ ಪ್ರಕಟವಾಗಲಿ. ಆಮೀನ್.

ಶರೀಫ್ ಅಹ್ಮದ್ ಅಮೀನಿ

**ಎಡಿಶನಲ್ ನಾಝಿರ್**

**ದಅ್‌ವತೋ ತಬ್ಲೀಗ್ ಖಾದಿಯಾನ್.**

30/11/1988

بسم الله الرّحمٰن الرّحیم

نحمدہ و نصلی علی رسولہ الکریم    وعلی عبدہ المسیح الموعود

لا الٰہ الا اللہ محمد رسول اللہ

آزمائش کے لئے کوئی نہ آیا ہر چند

ہر مخالف کو مقابل پر بلایا ہم نے

(در ثمین)

**ಆಝ್‌ಮಾಇಶ್ ಕೆ ಲಿಯೇ ಕೋಯಿ ನ ಆಯಾ ಹರ್‌ಚಂದ್**

**ಹರ್ ಮುಖ಼ಾಲಿಫ್ ಕೋ ಮುಖಾಬಿಲ್ ಪರ್ ಬುಲಾಯಾ ಹಮ್‌ನೆ.**

ಅರ್ಥ: ಪರೀಕ್ಷಿಸಲು ಯಾರೂ ಬರಲೇ ಇಲ್ಲ.

ಪ್ರತಿಯೊಬ್ಬ ವಿರೋಧಿಯನ್ನು ಮುಂದೆ ಬರಲು ನಾವು ಕರೆದೆವು.

(ದುರ್ರೆ ಸಮೀನ್)

ಅಹ್ಮದಿಯಾ ಜಮಾಅತಿನ ನಾಲ್ಕನೇ ಖ಼ಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ರಹಿಮಹುಲ್ಲಾಹು ತಆಲ ಅವರು ಮುಸ್ಲಿಮ್ ವಿದ್ವಾಂಸರಿಗೆ ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಹೇಳಲು ನೀಡಿದ

## ಪಂಥಾಹ್ವಾನ

ಮುಸ್ಲಿಮ್ ಮತಪಂಡಿತರು (ಉಲಮಾ) ಅಹ್ಮದಿಯಾ ಜಮಾಅತಿನ ವಿರುದ್ಧ ವಾಸ್ತವಕ್ಕೆ ವಿರುದ್ಧವಾದ ವಿವಿಧ ನಂಬಿಕೆಗಳನ್ನು ಪ್ರಕಟಿಸಿ ಮುಸ್ಲಿಮರಲ್ಲಿ ತಪ್ಪುಗ್ರಹಿಕೆ ಹೊಂದುವಂತೆ ಮಾಡಲು ಪ್ರಯತ್ನಿಸಿದರು. ಇದಕ್ಕೆ ನಿಖರವಾದ ಒಂದು ಪರಿಹಾರಕ್ಕಾಗಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್[ರ] 1987 ಮಾರ್ಚ್ ದಿನಾಂಕ 6ರ ಜುಮುಅ ಖುತ್‌ಬದಲ್ಲಿ ಹೀಗೆ ಹೇಳಿದರು:

ಅಹ್ಮದಿಯಾ ಜಮಾಅತಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ಉಪದೇಶವೇನು? ಅವರ ಧರ್ಮ ಯಾವುದು? ಅವರ ಕಲಿಮ ಯಾವುದು? ಎಂಬುದರ ಬಗ್ಗೆ ಅವರ ಸ್ವಂತ ಮಾತುಗಳಲ್ಲೇ ಆಲಿಸಿರಿ. ಅವರು ಹೇಳುತ್ತಾರೆ:

"ನಾವು ಮುಸ್ಲಿಮರಾಗಿದ್ದೇವೆ. ಸಹಭಾಗಿಯಿಲ್ಲದ ಏಕದೇವನನ್ನು ನಾವು ನಂಬುತ್ತೇವೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಗ್ರಂಥವನ್ನು ಉಲ್ಲೇಖಿಸಿ ವಿರೋಧಿ ಮತಪಂಡಿತರು ಹೀಗೆ ಹೇಳುತ್ತಾರೆ: "ಶರೀಅತ್ ರದ್ದುಗೊಳಿಸಲ್ಪಟ್ಟಿದೆ. ಮಿರ್ಝಾ ಗ್ಸುಲಾಮ್ ಅಹ್ಮದರ ಮಾತುಗಳೇ ಅಹ್ಮದಿಯರ ಶರೀಅತ್ ಆಗಿದೆ."

ಮತಪಂಡಿತರ ಪಿತೂರಿಗಳ ಬಗ್ಗೆ ಆಶ್ಚರ್ಯವಾಗುತ್ತದೆ. ಅವರಿಗೆ ದೇವನ ಬಗ್ಗೆ ಅಲ್ಪ ಮಾತ್ರ ಕೂಡ ಭಯವಿಲ್ಲ. ಅವರು ಎಂತೆಂತಹ ಮಹಾ ಸುಳ್ಳುಗಳನ್ನು ಎಷ್ಟು ಉದ್ಧಟವಾಗಿ ಹೇಳುತ್ತಾರೆ! ಅವರ ಈ ಮಾತು ಸತ್ಯವೆಂದಾದರೆ ಹಝ್ರತ್ ಮಿರ್ಝಾ ಗ್ಸುಲಾಮ್ ಅಹ್ಮದ್ ಅಲೈಹಿಸ್ಸಲಾಮರು ನಮಗೆ ಕಲಿಸಿದ ಶರೀಅತ್ ಏನೆಂದು ಕೇಳಿ, ಅದನ್ನು ಅಂಗೀಕರಿಸಿ ಒಂದು ತೀರ್ಮಾನಕ್ಕೆ ಬರಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಕಲಿಸಿದನ್ನು ನಮ್ಮ ಶರೀಅತ್ ಎಂದು ಬಗೆದು ನಮ್ಮೊಂದಿಗೆ ಇವರು ವರ್ತಿಸುವುದಾದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶರೀಅತ್ ಏನೆಂದು ಆಲಿಸಿರಿ:

"ನಾವು ಮುಸ್ಲಿಮರಾಗಿದ್ದೇವೆ. ನಾವು ಸಹಭಾಗಿ ಇಲ್ಲದ ಏಕದೇವನನ್ನು ನಂಬುತ್ತೇವೆ. ನಾವು لَا إِلٰهَ إِلَّا اللهُ **ಲಾ ಇಲಾಹ ಇಲ್ಲಲ್ಲಾಹ್** (ಅಲ್ಲಾಹನ ಹೊರತು ಅನ್ಯ ದೇವನಿಲ್ಲ) ಎಂದು ನಂಬುತ್ತೇವೆ. ಅಲ್ಲಾಹನ ಗ್ರಂಥವನ್ನೂ ಅವನ ಸಂದೇಶವಾಹಕರಾದ ಹಝ್ರತ್ ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನೂ ನಂಬುತ್ತೇವೆ. ದೇವದೂತರನ್ನೂ ಪುನರುತ್ಥಾನದ ದಿನದ ಬಗ್ಗೆಯೂ ಸ್ವರ್ಗ ನರಕಗಳನ್ನೂ ನಂಬುತ್ತೇವೆ. ನಮಾಝ್ ನಿರ್ವಹಿಸುತ್ತೇವೆ, ಉಪವಾಸ ಅನುಷ್ಠಿಸುತ್ತೇವೆ. ಖಿಬ್ಲವನ್ನು ಅಭಿಮುಖೀಕರಿಸುವವರಾಗಿದ್ದೇವೆ. ಅಲ್ಲಾಹನು ಮತ್ತು ಅವನ ಸಂದೇಶವಾಹಕರು ನಿಷಿದ್ಧಗೊಳಿಸಿದವುಗಳನ್ನೆಲ್ಲ ನಿಷಿದ್ಧ (ಹರಾಮ್) ಎಂದು ನಂಬುತ್ತೇವೆ. ಧರ್ಮಬದ್ಧಗೊಳಿಸಿದವುಗಳನ್ನೆಲ್ಲ ಧರ್ಮಬದ್ಧವೆಂದು ಒಪ್ಪಿಕೊಳ್ಳುತ್ತೇವೆ. ನಾವು ಶರೀಅತಿನಲ್ಲಿ ಹೆಚ್ಚುವರಿ ಮಾಡುವುದಿಲ್ಲ. ಅದರಲ್ಲಿ ಕಡಿಮೆಯನ್ನೂ ಮಾಡುವುದಿಲ್ಲ. ಒಂದಿಷ್ಟು ಕೂಡ ಹೆಚ್ಚು ಕಮ್ಮಿ ಮಾಡುವುದಿಲ್ಲ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ನಮಗೆ ತಲಪಿದವುಗಳನ್ನು ಅಂಗೀಕರಿಸುತ್ತೇವೆ. ಅವುಗಳ ರಹಸ್ಯ ನಮಗೆ ಮನವರಿಕೆಯಾದರೂ ಮನವರಿಕೆ ಆಗದಿದ್ದರೂ ಅದರ ವಾಸ್ತವಿಕತೆ ಏನೆಂದು ನಮಗೆ ತಿಳಿಯದಿದ್ದರೂ ನಾವು ಅವುಗಳನ್ನು ನಂಬುತ್ತೇವೆ. ನಾವು ಅಲ್ಲಾಹನ ಅನುಗ್ರಹದಿಂದ ಮೂಮಿನ್ (ಸತ್ಯವಿಶ್ವಾಸಿ), ಮುವಹ್ಹಿದ್ (ಏಕದೇವ ವಿಶ್ವಾಸಿ) ಮತ್ತು ಮುಸ್ಲಿಮ್ ಆಗಿದ್ದೇವೆ."

**(ನೂರುಲ್ ಹಖ್ ಭಾಗ 1; ರೂಹಾನೀ ಖಝ್ಝಾಇನ್ ಸಂ. 8, ಪುಟ 7)**

ಅಹ್ಮದಿಯರ ಶರೀಅತ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿಕೊಟ್ಟದ್ದು ಆಗಿದೆ ಎಂದು ಅಹ್ಮದಿಯೇತರರು ಹೇಳುವುದಾದರೆ ಅದು ಮೇಲೆ ವಿವರಿಸಿದ್ದಾಗಿದೆ. ಸುಳ್ಳಿಗೆ ತಳಪಾಯವಿರುವುದಿಲ್ಲ. ಚಂಚಲವಾಗಿರುತ್ತದೆ. ಯಾವುದಾದರೂ ಒಂದು ಮಾತನ್ನು ಒಪ್ಪಿ ಅದರಿಂದ ಹಿಂದೇಟು ಹಾಕುವುದಿಲ್ಲ ಎಂದು ಪ್ರತಿಜ್ಞೆ ಮಾಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ನಾನು ಮತ್ತು ನನ್ನ ಜಮಾಅತ್ ಮುಸ್ಲಿಮರಾಗಿದ್ದೇವೆ ಎಂದು ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಸತ್ಯವಾಗಿ ಹೇಳುತ್ತೇನೆ. ಒಬ್ಬ ಸತ್ಯಸಂಧನಾದ ಮುಸ್ಲಿಮನು ನಂಬಬೇಕಾದ ರೀತಿಯಲ್ಲಿ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಪವಿತ್ರ ಖುರ್ಆನನ್ನೂ ನಂಬುತ್ತೇವೆ."

**(ಲೆಕ್ಚರ್ ಲುಧಿಯಾನ; ರೂಹಾನೀ ಖಝಾಇನ್ ಸಂಪುಟ 20, ಪುಟ 260)**

ಈಗಿರುವ ಪ್ರಶ್ನೆ ಏನೆಂದರೆ, ವಿರೋಧಿಗಳ ದೋಷಾರೋಪಣೆಗಳು ಈ ರೀತಿ ಮುಂದುವರಿಯುತ್ತಿರುವಾಗ, ಇನ್ನಷ್ಟು ಕಪೋಲಕಲ್ಪಿತ ಕಥೆಗಳನ್ನು ಅಹ್ಮದಿಯಾ ಜಮಾಅತ್ ವಿರುದ್ಧ ಪ್ರಚಾರ ಮಾಡುತ್ತಾ ಇರುವಾಗ, ಅವುಗಳಿಗೆ ಉತ್ತರ ನೀಡುವ ಅನುಮತಿ ನಮಗೆ ಇಲ್ಲದಿರುವಾಗ, ಅಹ್ಮದಿಯಾ ಜಮಾಅತಿನ ನಾಲಗೆಯ ಮೇಲೂ ನಿರ್ಬಂಧವನ್ನು ಒಂದು ದೇಶದಲ್ಲಿ ಹೇರಿರುವಾಗ ಮತ್ತು ಲೇಖನಗಳ ಬಗ್ಗೆ ಸಹ ಪ್ರತಿಬಂಧವಿರುವಾಗ ಜಮಾಅತ್ ತನ್ನ ಮಾತನ್ನು ತಲಪಿಸಲು ಪ್ರಯತ್ನಿಸುವುದಾದರೂ ಅದರ ಮಾರ್ಗದಲ್ಲಿ ಅನೇಕ ತಡೆಗಟ್ಟುಗಳು ಇರುವುವು ಎನ್ನುವುದು ಸ್ಪಷ್ಟವಾಗುತ್ತದೆ. ವಿರೋಧಿಗಳಿಂದ ಎಷ್ಟು ಹೆಚ್ಚಿನ ಮಟ್ಟದಲ್ಲಿ ಕೊಳಕು ಸುಳ್ಳು ಪ್ರಚಾರ ಮಾಡಲಾಗುತ್ತಿದೆಯೋ ಮತ್ತು ಈ ಕೊಳಕು ಎಲ್ಲೆಲ್ಲ ತಲುಪುತ್ತವೆಯೋ ಅಲ್ಲೆಲ್ಲ ನಮ್ಮ ಸೀಮಿತ ಸಂಪನ್ಮೂಲಗಳ ಕಾರಣ ಅವುಗಳಿಗೆ ಉತ್ತರ ನೀಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ಪರಿಹಾರ ಮಾರ್ಗವೇನು? ನಾನು ಅಹ್ಮದಿಯಾ ಜಮಾಅತಿನ ಪರವಾಗಿ ಪಾಕಿಸ್ತಾನದಲ್ಲಿ ವಾಸಿಸುವ ಮತ್ತು ಅನ್ಯ ದೇಶಗಳಲ್ಲಿ ವಾಸಿಸುವ ಎಲ್ಲ ಮುಸ್ಲಿಮ್ ಮತಪಂಡಿತರಿಗೆ ಪಂಥಾಹ್ವಾನ ನೀಡುತ್ತೇನೆ:

ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ಪರಿಶುದ್ಧ ನಾಮದಲ್ಲಿ ಆಣೆ ಹಾಕಿ "ನನ್ನ ಕಲಿಮ ಎಲ್ಲ ಮುಸ್ಲಿಮರ ಕಲಿಮವೇ ಆಗಿದೆ. ನಾನು ನಂಬುವ ಸಂದೇಶವಾಹಕ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ. ಇಸ್ಲಾಮ್ ಧರ್ಮದಲ್ಲಿ ವಿಶ್ವಾಸಹೊಂದಲು ಯಾವುದನ್ನೆಲ್ಲ ನಂಬಬೇಕೋ ಅವುಗಳನ್ನೆಲ್ಲ ನಾನು ನಂಬುತ್ತೇನೆ" ಎಂದು ಎಷ್ಟು ವೈಭವಶಾಲಿಯಾಗಿ ಘೋಷಿಸಿದರೋ ಮತ್ತು ಸುಳ್ಳುಗಾರರ ಮೇಲೆ ಅಲ್ಲಾಹನ ಶಾಪ ಬಂದೆರಗಲಿ ಎಂದು ಹೇಳಿದರೋ ಅದೇ ರೀತಿಯಲ್ಲಿ ಈ ವಿರೋಧಿ

ಮತಪಂಡಿತರು ತಾವು ವಾದಿಸುವುದೆಲ್ಲವೂ ಸತ್ಯವೆಂದು ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಈ ಕೆಳಗಿನ ಹೇಳಿಕೆಯನ್ನು ಪಾಕಿಸ್ತಾನದಲ್ಲೂ ವಿದೇಶಗಳಲ್ಲೂ ಅದರ ಭಾಷಾಂತರ ಮಾಡಿಸಿ ಪ್ರಕಟಿಸಲಿ:

"ನಾವು ಅಲ್ಲಾಹನನ್ನು ಹಾಝಿರ್ (ಉಪಸ್ಥಿತ) ನಾಝಿರ್ (ನೋಡುವವ) ಎಂದು ತಿಳಿದುಕೊಂಡು ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳುತ್ತದೆ ಎಂದು ದೃಢವಾಗಿ ನಂಬುತ್ತೇವೆ. ನಾವು ಸುಳ್ಳು ಹೇಳುವವರಾಗಿದ್ದರೆ ಅಲ್ಲಾಹನು ನಮ್ಮನ್ನು ಶಪಿಸಲಿ. ಇಹಲೋಕದಲ್ಲೂ ಪರಲೋಕದಲ್ಲೂ ನಮ್ಮನ್ನು ಹೀನೈಸಲಿ. ಅಹ್ಮದಿಯಾ ಜಮಾಅತಿನ ಕಲಿಮ ಬೇರೆಯೇ ಆಗಿದೆ ಎಂದು ನಾವು ಘೋಷಿಸುತ್ತೇವೆ. ಈ ಕಲಿಮ ಅವರು ಉಚ್ಚರಿಸುವಾಗ, ಅವರು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂದು ಹೇಳುವಾಗ ಅವರು ಉದ್ದೇಶಿಸುವುದು ಮಿರ್ಝಾ ಗ಼ುಲಾಮ್ ಅಹ್ಮದ್ ಖಾದಿಯಾನಿಯನ್ನಾಗಿದೆ. ಅವರ ಶರೀಅತ್ ಬೇರೆ, ಅವರ ದೇವ ಬೇರೆ, ಅವರು ಮಿರ್ಝಾ ಗ಼ುಲಾಮ್ ಅಹ್ಮದ್ ಅವರನ್ನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಎಲ್ಲ ರೀತಿಗಳಲ್ಲೂ ಶ್ರೇಷ್ಠರೆಂದು ನಂಬುತ್ತಾರೆ."

ವಿರೋಧಿ ಮತ ಪಂಡಿತರು ಇಷ್ಟೆಲ್ಲ ಸುಳ್ಳು ದೋಷಾರೋಪ ಮಾಡುತ್ತಿರುವಾಗ, ಅವರಲ್ಲಿ ಸ್ವಲ್ಪವಾದರೂ ಅಭಿಮಾನ ಮತ್ತು ವಿಶ್ವಾಸವಿದ್ದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳಿದ ಹಾಗೆ ಆಣೆ ಹಾಕಲಿ ಅನಂತರ ಅದರ ಪರಿಣಾಮ ಏನಾಗುತ್ತದೆ ಎಂದು ನೋಡಲಿ.

ಕೆಟ್ಟದಾಗಲಿ ಎಂಬ ಪ್ರಾರ್ಥನೆ ಮಾಡುವುದರಿಂದ ನಾನು ತಡೆದುನಿಲ್ಲುತ್ತೇನೆ. ಆದರೆ ಈ ಜನರು ಎಷ್ಟು ದೌರ್ಜನ್ಯಗಾರರೂ ಕಠಿಣ ಹೃದಯಿಯೂ ಸುಳ್ಳು ಸೃಜಿಸುವ ಬಗ್ಗೆ ಎಷ್ಟು ಧೈರ್ಯ ಹೊಂದಿದ್ದವರೂ ಆಗಿದ್ದಾರೆಂದರೆ, ತನ್ನೊಳಗೆ ಒಂದು ರಹಸ್ಯವನ್ನು ಹೊಂದಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪಂಥಾಹ್ವಾನವನ್ನು ಅವರ ಕಡೆಗೆ ಎಸೆಯದೆ ಇರಲು ಸಾಧ್ಯವಿಲ್ಲ, ಅವರು ಧೈರ್ಯವಂತರಾಗಿದ್ದರೆ, ನಿಜವಾಗಿಯೂ ದೇವಭಯವುಳ್ಳವರಾಗಿದ್ದರೆ ಮತ್ತು ಸತ್ಯವಿಶ್ವಾಸಿಗಳಾಗಿದ್ದರೆ ಆಣೆ ಹಾಕಲು ಧೈರ್ಯ ತೋರಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನನ್ನು ಸಾಕ್ಷಿಯಾಗಿಟ್ಟುಕೊಂಡು, ಅವನ ಹೆಸರಲ್ಲಿ ಆಣೆ ಹಾಕಿ ಪ್ರತಿಜ್ಞೆ ಮಾಡಿ ಘೋಷಿಸಿದ ಹಾಗೆ, ಅವರು ಸಹ ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಹೀಗೆ ಪ್ರಕಟಿಸಲಿ:

"ನಮ್ಮ ಎದುರಿಗಿರುವ ಈ ಜನರು ಸುಳ್ಳುಗಾರರೂ ದುರ್ಜನರೂ ದೇವಾಜ್ಞೆಗಳ ಉಲ್ಲಂಘಕರೂ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಪಮಾನಿಸುವವರೂ ಇಸ್ಲಾಮ್

ಧರ್ಮದಿಂದ ದೂರಸರಿದವರೂ ಆಗಿದ್ದಾರೆ. ಬಹಾಯಿಗಳ ಹಾಗೆ ಹೊಸ ಧರ್ಮ ನಿರ್ಮಿಸಿದವರಾಗಿದ್ದಾರೆ."

ಮತಪಂಡಿತರು ಅಹ್ಮದಿಯಾ ಜಮಾಅತ್ ವಿರುದ್ಧ ಆರೋಪಿಸಿರುವ ಮೇಲಿನ ಸಂಗತಿಗಳನ್ನು ಅಲ್ಲಾಹನ ಮೇಲೆ ಆಣೆ ಹಾಕಿ ಪ್ರಕಟಿಸಲಿ. ಅನಂತರ ಅಲ್ಲಾಹನ ವಿಧಿ ನಿರ್ಣಯ ಏನಾಗುತ್ತದೆ ಎಂದು ನೋಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ಪ್ರತಾಪವಂತನಾದ ಅಲ್ಲಾಹನಾಣೆ, ನಾನು ಕಾಫಿರ್ ಅಲ್ಲ ಎಂದು ನಾನು ಪುನಃ ಜನರಿಗೆ ವ್ಯಕ್ತಪಡಿಸುತ್ತೇನೆ. لا اله الا الله محمد رسول الله ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್ ಎಂಬುದು ನನ್ನ ವಿಶ್ವಾಸವಾಗಿದೆ. وَلٰكِنْ رَّسُولَ اللّٰهِ وَخَاتَمَ النَّبِيّٖنَ ವಲಾಕಿರ್ರಸೂಲಲ್ಲಾಹಿ ವ ಖಾತಮುನ್ನಬಿಯ್ಯೀನ್ [ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ.] **(ಪವಿತ್ರ ಖುರ್‌ಆನ್ 33:41)** ಎಂದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ನನ್ನ ನಂಬಿಕೆಯಾಗಿದೆ. ನಾನು ನನ್ನ ಈ ವಿಶ್ವಾಸದ ದೃಢತೆಯ ಬಗ್ಗೆ ಅಲ್ಲಾಹನ ಪರಿಶುದ್ಧ ಗುಣನಾಮಗಳಷ್ಟು ಸಲ, ಪವಿತ್ರ ಖುರ್‌ಆನಿನಲ್ಲಿರುವ ಅಕ್ಷರಗಳಷ್ಟು ಸಾರಿ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೇವನ ದೃಷ್ಟಿಯಲ್ಲಿರುವ ಪರಿಪೂರ್ಣತೆಗಳಷ್ಟು ಸಾರಿ ಪ್ರಮಾಣ ಮಾಡುತ್ತೇನೆ. ನನ್ನ ಯಾವುದೇ ನಂಬಿಕೆ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶಗಳಿಗೆ ವಿರುದ್ಧವಾಗಿಲ್ಲ. ಯಾರಾದರೂ ಹಾಗೆ ಭಾವಿಸುವುದಾದರೆ ಅದು ಅವನದೇ ತಪ್ಪು ಕಲ್ಪನೆಯಾಗಿದೆ. ಈಗಲೂ ನನ್ನನ್ನು ಕಾಫಿರ್ ಎಂದು ಭಾವಿಸುವವನು ಮತ್ತು ನನ್ನನ್ನು ಕಾಫಿರ್ ಎಂದು ಹೇಳುವುದರಿಂದ ಹಿಂದೆಸರಿಯದವನು ತನ್ನ ಮರಣದ ನಂತರ ಅದರ ಬಗ್ಗೆ ಪ್ರಶ್ನಿಸಲ್ಪಡುವನು.

**(ಕರಾಮಾತುಸ್ಸಾದಿಖೀನ್; ರೂಹಾನೀ ಖಝಾಇನ್ ಸಂಪುಟ 7, ಪುಟ 67)**

ಮೇಲೆ ಬರೆಯಲಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖದಲ್ಲಿ ಒಂದು ಶಕ್ತಿಯಿದೆ, ವೈಭವವಿದೆ. ಅದರೊಂದಿಗೆ ಒಂದು ದಯಾಭಾವವೂ ಇದೆ. "ಮೃತನಾದ ನಂತರ ಪ್ರಶ್ನಿಸಲ್ಪಡುವನು" ಎಂದು ಹೇಳಿದ್ದಾರೆ. ಆದರೆ ಈ ಜನರು ಎಷ್ಟು ನಿರ್ಭಯರಾಗಿದ್ದಾರೆಂದರೆ ಅವರು ಈಗ ಹೀಗೆ ಹೇಳಬೇಕು: "ನಾವು ಸುಳ್ಳು ಹೇಳುವವರಾದರೆ ಅಲ್ಲಾಹನು ನಮ್ಮನ್ನು ಈ ಲೋಕದಲ್ಲಿಯೂ ಪ್ರಶ್ನಿಸಲಿ." "ನಮ್ಮ ಮೇಲೆ ಆಕಾಶದಿಂದ ಈ ಲೋಕದಲ್ಲಿಯೂ ಕಲ್ಲಿನ ಮಳೆ ಸುರಿಯಲಿ" ಎಂದು ಹೇಳಿದ ವ್ಯಕ್ತಿಯ ಮಾರ್ಗವನ್ನು ಇವರು ಅವಲಂಬಿಸಿದ್ದಾರೆ.

ಈ ಜನರು ಇಷ್ಟು ನಿರ್ಭಯರಾಗಿರುವುದರಿಂದ ಮುಂದೆ ಬಂದು ಹೀಗೆ ಆಣೆ ಹಾಕಿ ಘೋಷಿಸಲಿ:

"ನಾವು ಸುಳ್ಳುಗಾರರಾಗಿದ್ದರೆ ಅಲ್ಲಾಹನು ನಮ್ಮನ್ನು ಇಹಲೋಕದಲ್ಲಿ ಶಪಿಸಲಿ, ನಾಶ ಮಾಡಲಿ ಮತ್ತು ಹೀನಾಯಗೊಳಿಸಲಿ. ಅಹ್ಮದಿಯರು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ಸಲ್ಲಮರ ಕಲಿಮ ಪಠಿಸುವುದಿಲ್ಲ, ಮಿರ್ಝಾ ಗ್ಹುಲಾಮ್ ಅಹ್ಮದರ ಕಲಿಮ ಪಠಿಸುತ್ತಾರೆ; ಅವರು ಮುಹಮ್ಮದರ ಧರ್ಮವನ್ನು ನಂಬುವುದಿಲ್ಲ, ಹೊಸ ಧರ್ಮವನ್ನು ರಚಿಸಿದ್ದಾರೆ; ಅವರು ಪವಿತ್ರ ಖುರ್‌ಆನನ್ನು ನಂಬುವುದಿಲ್ಲ, ಪವಿತ್ರ ಖುರ್‌ಆನಿಗೆ ವಿರುದ್ಧವಾಗಿರುವ ಬೇರೆ ಒಂದು ಗ್ರಂಥವನ್ನು ರಚಿಸಿದ್ದಾರೆ. ಅವರ ದೇವನು ಬೇರೆ, ಅವರ ಸಂದೇಶವಾಹಕ ಬೇರೆ. ಮಿರ್ಝಾ ಗ್ಹುಲಾಮ್ ಅಹ್ಮದ್‌ರನ್ನು ಅವರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ಸಲ್ಲಮರಿಗಿಂತ ಶ್ರೇಷ್ಠರೆಂದು ಮಾತ್ರವಲ್ಲ, ಅವರು ಸ್ವತಃ ದೇವನಾಗಿದ್ದಾನೆ ಎಂದು ನಂಬುತ್ತಾರೆ."

ಮೇಲಿನಂತೆ ಈ ಜನರು ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಹೇಳಿದರೆ ಅಲ್ಲಾಹನು ತನ್ನ ಕ್ರೋಧವನ್ನು ಖಂಡಿತ ಪ್ರಕಟಿಸುವನು ಎಂದು ನಾನು ದೃಢವಾಗಿ ಹೇಳುತ್ತೇನೆ. ಅಲ್ಲಾಹನ ವಿಧಿ ಅವರನ್ನು ಹೇಗೆ ಜಜ್ಜಿಹಾಕುವುದು ಎಂದು ನೀವು ಕಣ್ಣಾರೆ ಕಾಣುವಿರಿ. ಅಲ್ಲಾಹನು ಅವರನ್ನು ಹೀನೈಸಲ್ಪಟ್ಟವರನ್ನಾಗಿಯೂ ವರ್ಜಿತರನ್ನಾಗಿಯೂ ಪರಾಜಿತರನ್ನಾಗಿಯೂ ಮಾಡುವನು. ಸೋಲು ಅವರಿಗೆ ವಿಧಿಸಲ್ಪಟ್ಟಿದೆ. ಆದರೆ ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡಲಿ, ಅವರ ಮೇಲೆ ದಯೆದೋರಲಿ. ಈ ಜನರು ತಮ್ಮ ಕೆಟ್ಟ ಕೆಲಸಗಳಿಂದ ದೂರ ಸರಿಯಲಿ ಎಂದು ನಾವು ಯಾವಾಗಲೂ ಪ್ರಾರ್ಥಿಸುತ್ತೇವೆ ಮತ್ತು ಪ್ರತೀಕ್ಷಿಸುತ್ತೇವೆ. ಏಕೆಂದರೆ ನಾವು ದೇವತ್ವವನ್ನು ನಮ್ಮ ಕೈಯಲ್ಲಿ ಎತ್ತಿಕೊಳ್ಳುವುದಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಲ್ಲಾಹನು ಸ್ವತಃ ಶಾಪ ಪ್ರಾರ್ಥನೆ ಮಾಡುವುದರಿಂದ ತಡೆದಿದ್ದನು. ಈ ಜನರಲ್ಲಿ ಯಾರು ದೇವನ ಕ್ರೋಧಕ್ಕೆ ಈಡಾಗುವವರಾಗಿದ್ದಾರೆ ಮತ್ತು ಯಾರು ಸಾತ್ವಿಕ ಮನೋಭಾವ ಹೊಂದಿದ್ದಾರೆ ಎಂದು ನಮಗೆ ತಿಳಿದಿಲ್ಲ. ಆದುದರಿಂದ ಎಲ್ಲರ ಮೇಲೆ ಶಾಪ ಹಾಕಲು ಮನಸ್ಸು ಬರುತ್ತಿಲ್ಲ. ಅವರಲ್ಲಿ ಧೈರ್ಯಶಾಲಿಗಳು ಮುಂದೆ ಬಂದು ತಾವು ಹೇಳುವುದು ಸುಳ್ಳಾದರೆ ಶಾಪ ಬಂದೆರಗಲಿ ಎಂದು ಸ್ವತಃ ಪ್ರಾರ್ಥಿಸಲಿ ಎಂಬುದಾಗಿದೆ ನಾನು ಮುಂದಿರಿಸಿದ ವಿಷಯದ ಉದ್ದೇಶ. ನಾವು ಶಾಪ ಹಾಕುವುದಿಲ್ಲ. ಅವರಲ್ಲಿ ಧೈರ್ಯಶಾಲಿಗಳಿದ್ದರೆ ಮುಂದೆ ಬರಲಿ. ದೇವನ ವಿಧಿನಿರ್ಣಯ ಅವರನ್ನು ಹೇಗೆ ಹೀನಾಯಗೊಳಿಸುವುದು ಎಂದು ನೀವು ನೋಡುವಿರಿ.

**(ಖುತ್‌ಬ ಜುಮುಅ 6/03/1987ನಿಂದ ಉಲ್ಲೇಖಿತ)**

ابن مریم مر گیا حق کی قسم
داخل جنت ہوا وہ محترم
(در ثمین)

**ಇಬ್ನು ಮರ್‌ಯಮ್ ಮರ್‌ಗಯಾ ಹಖ಼್ ಕಿ ಖಸಮ್**
**ದಾಖ಼ಿಲ್ ಜನ್ನತ್ ಹುವಾ ವಹ್ ಮುಹ್ತರಮ್.**

ಅಲ್ಲಾಹನಾಣೆ ಇಬ್ನು ಮರ್‌ಯಮ್ ಮೃತರಾದರು.
ಅವರು ಸ್ವರ್ಗವಾಸಿಯಾಗಿ ಗೌರವ ಗಳಿಸಿದರು.
(ದುರ್ರೇ ಸ಼ಮೀನ್)

بسم اللّٰہ الرّحمٰن الرّحیم

نحمدہ و نصلی علیٰ رسولہ الکریم     و علیٰ عبدہ المسیح الموعود

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳಿಂದ ಉಲ್ಲೇಖಗಳು

آئینہ کمالات اسلام

## ಗ್ರಂಥ: ಆಇನಯೇ ಕಮಾಲಾತೆ ಇಸ್ಲಾಮ್

### ಆಣೆ ಹಾಕಿ ಪ್ರಮಾಣ ಮಾಡುವ ಉದ್ದೇಶ

ಆಣೆ ಹಾಕಿ ಪ್ರಮಾಣ ಮಾಡುವ ಬಗ್ಗೆ ಚೆನ್ನಾಗಿ ನೆನಪಿಡಬೇಕಾದುದು ಏನೆಂದರೆ ವೈಭವಶಾಲಿಯಾದ ಅಲ್ಲಾಹನು ಮಾಡಿದ ಪ್ರಮಾಣ ವಚನಗಳನ್ನು ಮನುಷ್ಯರ ಪ್ರಮಾಣ ವಚನಗಳೊಂದಿಗೆ ಸರಿ ಹೋಲಿಸಿ ನೋಡುವುದು ಅಸಂಗತವಾಗಿದೆ. ಮನುಷ್ಯರು ಅಲ್ಲಾಹನ ಹೊರತು ಅನ್ಯರ ಹೆಸರಿನಲ್ಲಿ ಆಣೆ ಹಾಕುವುದನ್ನು ಅಲ್ಲಾಹನು ನಿಷಿದ್ಧಗೊಳಿಸಿದ್ದಾನೆ. ಇದರ ಕಾರಣವೇನೆಂದರೆ ಮನುಷ್ಯನು ಆಣೆ ಹಾಕುವಾಗ ಅವನು ಯಾವುದರ ಹೆಸರಿನಲ್ಲಿ ಆಣೆ ಹಾಕುತ್ತಾನೋ ಅದಕ್ಕೆ ಸಾಕ್ಷಿಯ ಸ್ಥಾನ ನೀಡುತ್ತಾನೆ. ಎಂದರೆ, ಅದು ತನ್ನ ವೈಯಕ್ತಿಕ ಜ್ಞಾನದ ಪ್ರಕಾರ ಅವನ ಹೇಳಿಕೆಯನ್ನು ಸತ್ಯವೆಂದೋ ಅಸತ್ಯವೆಂದೋ ಹೇಳಬಲ್ಲದು ಎಂದು ಅವನು ಸೂಚಿಸುತ್ತಾನೆ. ನೀವು ಯೋಚಿಸುವುದಾದರೆ ಆಣೆ ಹಾಕುವುದರ ಮೂಲ ತಾತ್ಪರ್ಯ ಸಾಕ್ಷ್ಯವೇ ಆಗಿದೆ. ಮನುಷ್ಯನಿಗೆ ಸಾಮಾನ್ಯ ಸಾಕ್ಷಿಗಳನ್ನು ತರಲು ಅಸಾಧ್ಯವಾಗುವಾಗ ಅವನು ಆಣೆ ಹಾಕಲು ನಿರ್ಬಂಧಿತನಾಗುತ್ತಾನೆ. ಒಬ್ಬ ಸಾಕ್ಷಿ ಹೇಳುವವನ ಸಾಕ್ಷ್ಯದಿಂದ ದೊರಕುವ ಲಾಭವನ್ನು ಮನುಷ್ಯನು ಆಣೆ ಹಾಕುವ ಮೂಲಕ ಗಳಿಸಲು ಬಯಸುತ್ತಾನೆ. ಆದರೆ ದೇವನ ಹೊರತು ಬೇರೆ ಯಾವನಾದರೂ ಸರ್ವವ್ಯಾಪಿಯೂ ಸರ್ವವನ್ನು ನೋಡುವವನೂ ಸತ್ಯ ಮತ್ತು ಅಸತ್ಯವನ್ನು ಅರಿಯಬಲ್ಲವನೂ ಶಿಕ್ಷೆ ನೀಡಲು ಅಥವಾ ಬೇರೆ ಏನಾದರೂ ಮಾಡಲು ಸಮರ್ಥನು ಎಂದು ನಂಬುವುದು ಸಂಪೂರ್ಣವಾಗಿ ಕುಫ್ರ್ (ಅವಿಶ್ವಾಸ) ಆಗಿದೆ. ಆದ್ದರಿಂದ ಅಲ್ಲಾಹನ ಹೊರತು ಬೇರೆ ಯಾರ ಹೆಸರಿನಲ್ಲೂ ಖಂಡಿತವಾಗಿಯೂ ಪ್ರಮಾಣ ಮಾಡಬಾರದು

ಎಂಬುದೇ ದೇವನು ಅವತೀರ್ಣಗೊಳಿಸಿದ ಎಲ್ಲ ಗ್ರಂಥಗಳಲ್ಲೂ ಮನುಷ್ಯರಿಗೆ ನೀಡಲಾದ ಉಪದೇಶವಾಗಿದೆ.

ದೇವನು ಹಾಕಿದ ಆಣೆಗಳನ್ನು ಮನುಷ್ಯನು ಆಣೆ ಹಾಕುವುದಕ್ಕೆ ಹೋಲಿಸಿ ಹೇಳುವುದು ಸರಿಯಲ್ಲ ಎಂಬುದು ಈಗ ಸ್ಪಷ್ಟ. ಏಕೆಂದರೆ ಮನುಷ್ಯನಿಗೆ ಆಣೆ ಹಾಕಬೇಕಾಗಿ ಬರುವಾಗ ಉಂಟಾಗುವಂತಹ ದುಃಸ್ಥಿತಿ ದೇವನಿಗೆ ಇರುವುದಿಲ್ಲ. ಅವನು ಹಾಕುವ ಆಣೆ ಬೇರೆಯೇ ರೀತಿಯದ್ದಾಗಿದೆ. ಅದು ಅವನ ವೈಭವಕ್ಕೆ ಯೋಗ್ಯವಾದುದಾಗಿದೆ ಮತ್ತು ಅವನ ಶಕ್ತಿ ಸಾಮರ್ಥ್ಯಗಳ ನಿಯಮಗಳಿಗೆ ಅನುಸಾರವಾಗಿದೆ.

**(ಆಯಿನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖ಼ಝಾಇನ್ ಸಂಪುಟ 5 ಪುಟ 95 – 96)**

دلبرا مجھ کو قسم تری یکتائی کی
آپ کو تیری محبت میں بھلایا ہم نے

**ದಿಲ್‌ಬರಾ ಮುಝ್‌ಕೋ ಖಸಮ್ ತೆರಿ ಯಕ್‌ತಾಯೀ ಕೀ**

**ಆಪ್‌ಕೋ ತೇರೀ ಮೊಹಬ್ಬತ್ ಮೇ(ಂ) ಭುಲಾಯಾ ಹಮ್‌ನೆ.**

ಅರ್ಥ: ಪ್ರಿಯಕರ, ನಿನ್ನ ಏಕತ್ವದ ಆಣೆ ಹಾಕಿ ನಾನು ಹೇಳುತ್ತೇನೆ.
ನಿನ್ನ ಪ್ರೀತಿಯಲ್ಲಿ ನಾನು ನನ್ನನ್ನೇ ಮರೆತು ಬಿಟ್ಟೆ.

**(ಆಯಿನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖ಼ಝಾಇನ್, ಸಂಪುಟ 5, ಪುಟ 225)**

وَاللهِ اِنِّی قَدْ رَأَیْتُ جَمَالَهٗ
بِعُیُوْنِ جِسْمِی قَاعِدًا بِمَکَانِیْ

**ವಲ್ಲಾಹಿ ಇನ್ನೀ ಖದ್ ರಐತು ಜಮಾಲಹೂ**

**ಬಿಉಯೂನಿ ಜಿಸ್‌ಮೀ ಖಾಇದನ್ ಬಿಮಕಾನಿ**

ಅರ್ಥ: ಅಲ್ಲಾಹನಾಣೆ ನಾನು ಅಲ್ಲಾಹನ ಸೌಂದರ್ಯವನ್ನು ಕಂಡೆನು;
ನನ್ನ ಶರೀರದ ಕಣ್ಣುಗಳಿಂದ ನನ್ನ ಮನೆಯಲ್ಲಿ ಇದ್ದುಕೊಂಡು.

**(ಆಯಿನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖ಼ಝಾಇನ್, ಸಂ 5, ಪುಟ 593)**

حقیقۃ الوحی

## ಗ್ರಂಥ: ಹಖೀಖತುಲ್ ವಹ್ಯ್

ಯಹೂದಿ ಎಂದು ಕರೆಯಲ್ಪಡಬೇಕಾಗಿ ಬರುವಂತಹ ಕೆಲವರು ಮುಸ್ಲಿಮ್ ಸಮುದಾಯದಲ್ಲಿ ಜನಿಸುವರು. ಅದೇ ರೀತಿ ಈಸಾ ಮತ್ತು ಮಸೀಹ್ ಮೌಊದ್ ಎಂದು ಹೆಸರಿಸಲ್ಪಡುವ ಒಬ್ಬ ವ್ಯಕ್ತಿ ಈ ಸಮುದಾಯದಲ್ಲಿ ಜನಿಸುವರು. ಹಝ್ರತ್ ಈಸಾರನ್ನು ಆಕಾಶದಿಂದ ಇಳಿಸುವ ಅಗತ್ಯ ಏನಿದೆ? ಅವರ ಮುಸ್ತಖಿಲ್ (ಸ್ವತಂತ್ರ) ನುಬುವ್ವತಿನ ನಿಲುವಂಗಿ ಕಳಚಿ ಅವರನ್ನು ಉಮ್ಮತೀ (ಸಮುದಾಯಕ್ಕೆ ಸೇರಿದವರನ್ನಾಗಿ) ಮಾಡುವ ಆವಶ್ಯಕತೆ ಏನಿದೆ? "ಈಸಾ ಮಸೀಹರ ಸಮುದಾಯ ಅವರನ್ನು ದೇವನನ್ನಾಗಿ ಮಾಡಿದುದಕ್ಕೆ ಶಿಕ್ಷೆಯಾಗಿ ಹೀಗೆ ಮಾಡಲಾಗಿದೆ" ಎಂದು ಉತ್ತರ ಹೇಳುವುದಾದರೆ ಅದು ಸಹ ನಿರರ್ಥಕ ಉತ್ತರವಾಗಿದೆ. ಏಕೆಂದರೆ ಇದರಲ್ಲಿ ಹಝ್ರತ್ ಈಸಾ ಮಸೀಹರ ತಪ್ಪೇನು?

ನಾನು ಈ ಮಾತುಗಳನ್ನು ಊಹೆಯಿಂದ ಹೇಳುತ್ತಾ ಇಲ್ಲ. ಬದಲಾಗಿ, ನಾನು ದೇವನ ವಹ್ಯ್ (ಸಂದೇಶವಾಣಿ) ಪಡೆದು ಹೇಳುತ್ತಿದ್ದೇನೆ. ಅವನೇ ನನಗೆ ಈ ಸಮಾಚಾರ ನೀಡಿರುವನು ಎಂದು ನಾನು ಅವನ ಆಣೆ ಹಾಕಿ ಹೇಳುತ್ತೇನೆ. ಈ ಕಾಲಘಟ್ಟ ನನಗೆ ಸಾಕ್ಷ್ಯವಾಗಿ ನಿಂತಿದೆ. ದೇವನ ದೃಷ್ಟಾಂತಗಳು ನನ್ನ ಪರವಾಗಿ ಸಾಕ್ಷ್ಯ ನೀಡುತ್ತಿವೆ.

**(ಹಖೀಖತುಲ್ ವಹ್ಯ್: ರೂಹಾನೀ ಖಝ಼ಾಇನ್ ಸಂಪುಟ 22, ಪುಟ 33)**

ನನ್ನ ಕಾಲದಲ್ಲಿಯೇ ರಮಝಾನ್ ತಿಂಗಳಲ್ಲಿ ಸೂರ್ಯ – ಚಂದ್ರ ಗ್ರಹಣಗಳು ಸಂಭವಿಸಿದವು. ಪವಿತ್ರ ಖುರ್‌ಆನ್, ಸಹೀಹ್ ಹದೀಸುಗಳು ಮತ್ತು ಹಿಂದಿನ ಗ್ರಂಥಗಳ ಪ್ರಕಾರ ನನ್ನ ಕಾಲದಲ್ಲಿಯೇ ಪ್ಲೇಗ್ ರೋಗ ಹರಡಿತು. ನನ್ನ ಕಾಲದಲ್ಲಿಯೇ ಹೊಸ ಸವಾರಿ ವಾಹನವಾದ ರೈಲುಬಂಡಿ ಸಂಚಾರ ಪ್ರಾರಂಭವಾಯಿತು. ನನ್ನ ಕಾಲದಲ್ಲಿಯೇ ನನ್ನ ಭವಿಷ್ಯವಾಣಿಗಳ ಪ್ರಕಾರ ಭಯಾನಕ ಭೂಕಂಪಗಳು ಸಂಭವಿಸಿದವು. ಆದುದರಿಂದ ನನ್ನನ್ನು ಸುಳ್ಳುಗಾರನೆಂದು ಹೇಳಲು ಧೈರ್ಯಪಡಬಾರದು ಎಂಬುದು ತಖ್ವದ (ದೇವಭಯದ) ಆವಶ್ಯಕತೆಯಲ್ಲವೇ?

ನೀವು ನೋಡಿರಿ, ನನ್ನ ಸತ್ಯಕ್ಕೆ ಸಾಕ್ಷ್ಯಗಳಾಗಿ ಸಾವಿರಗಟ್ಟಲೆ ದೃಷ್ಟಾಂತಗಳು ಪ್ರಕಟವಾಗಿವೆ, ಪ್ರಕಟವಾಗುತ್ತಾ ಇವೆ ಮತ್ತು ಮುಂದೆ ಸಹ ಪ್ರಕಟವಾಗುವುವು ಎಂದು ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಇದು ಮನುಷ್ಯ ನಿರ್ಮಿತ ಯೋಜನೆಯಾಗಿದ್ದರೆ ಇಷ್ಟೆಲ್ಲ ದೈವಿಕ ಸಹಾಯ ಖಂಡಿತವಾಗಿಯೂ

ದೊರಕುತ್ತಿರಲಿಲ್ಲ. ಪ್ರಕಟಗೊಂಡಿರುವ ಸಾವಿರಾರು ದೃಷ್ಟಾಂತಗಳ ಎದುರಿಗೆ ಒಂದು ಅಥವಾ ಎರಡು ವಿಷಯಗಳಿಗೆ ಸಂಬಂಧಿಸಿದ ಭವಿಷ್ಯವಾಣಿ ಈಡೇರಿಲ್ಲ ಎಂಬುದಾಗಿ ಜನರಿಗೆ ತಪ್ಪುಗ್ರಹಿಕೆಯಾಗಲು ಮುಂದಿರಿಸುವುದು ನ್ಯಾಯ ವಿರುದ್ಧವೂ ಸತ್ಯವಿಶ್ವಾಸಕ್ಕೆ ವಿರುದ್ಧವೂ ಆಗಿದೆ.

ಎಲೈ ಅವಿವೇಕಿಗಳೇ, ಬುದ್ಧಿಶೂನ್ಯರೇ, ನ್ಯಾಯ ಮತ್ತು ಪ್ರಾಮಾಣಿಕತೆಯಿಂದ ದೂರ ಸರಿಯುವವರೇ, ಈಡೇರಿದ ಸಾವಿರಾರು ಭವಿಷ್ಯವಾಣಿಗಳಲ್ಲಿ ಒಂದು ಅಥವಾ ಎರಡು ಭವಿಷ್ಯವಾಣಿಗಳ ಈಡೇರಿಕೆ ನಿಮಗೆ ಮನವರಿಕೆಯಾಗದಿದ್ದರೆ ನೀವು ಈ ನೆವನ ಹೇಳಿ ದೇವನ ಸನ್ನಿಧಿಯಲ್ಲಿ ಕ್ಷಮಾರ್ಹರಾಗುವಿರೋ. ದೇವನ ದಿನ ಸಮೀಪ ವಾಗಿರುವುದರಿಂದ ಮತ್ತು ಭೂಮಿಯನ್ನು ಕಂಪಿಸುವ ದೃಷ್ಟಾಂತ ಪ್ರಕಟವಾಗ ಲಿರುವುದರಿಂದ ನೀವು ತೌಬ ಮಾಡಿರಿ.

**(ಹಖೀಖತುಲ್ ವಹ್ಯ್: ರೂಹಾನೀ ಖ಼ಝಾಇನ್ ಸಂಪುಟ 22, ಪುಟ 48)**

ಪವಿತ್ರ ಖುರ್‌ಆನಿನ ವಚನ **وَأَمَّا بِنِعْمَةِ رَبِّكَ فَحَدِّثْ ವಅಮ್ಮಾ ಬಿನಿಅ್‌ಮತಿ ರಬ್ಬಿಕ ಫಹದ್ದಿಸ್** "ನಿನ್ನ ಪ್ರಭುವಿನ ಅನುಗ್ರಹವನ್ನು ಪ್ರಕಟಗೊಳಿಸು (ಇತರರಿಗೂ ತಿಳಿಯಪಡಿಸು)" **(93:12)** ಎಂಬ ಆಜ್ಞೆ ಪ್ರಕಾರ ನಾನು ನನ್ನ ಬಗ್ಗೆ ಹೇಳುತ್ತೇನೆ: ದೇವನು ನನ್ನನ್ನು ಮೂರನೇ ವಿಭಾಗದಲ್ಲಿ ಸೇರಿಸಿ ನನ್ನ ಪ್ರಯತ್ನವಿಲ್ಲದೆ ತಾಯಿಯ ಗರ್ಭದಲ್ಲಿರುವಾಗಲೇ ನನಗೆ ಅನುಗ್ರಹ ನೀಡಿದ್ದನು. ಅವನು ನನ್ನ ಪರವಾಗಿ ಪ್ರಕಟಿಸಿದ ದೃಷ್ಟಾಂತಗಳನ್ನು ಇಂದು 1906 ಜುಲಾಯಿ ದಿನಾಂಕ 16ರ ತನಕ ಒಂದೊಂದಾಗಿ ಎಣಿಸುವುದಾದರೆ ದೇವನಾಣೆ ಅವುಗಳ ಸಂಖ್ಯೆ ಮೂರು ಲಕ್ಷಕ್ಕಿಂತ ಅಧಿಕವಿದೆ ಎಂದು ಹೇಳಬಹುದು. ಯಾರಿಗಾದರೂ ನನ್ನ ಪ್ರಮಾಣ ವಚನದ ಬಗ್ಗೆ ನಂಬಿಕೆ ಇಲ್ಲವಾದರೆ ನಾನು ಅವರಿಗೆ ಸಾಕ್ಷ್ಯಧಾರ ನೀಡಬಲ್ಲೆನು.

**(ಹಖೀಖತುಲ್ ವಹ್ಯ್: ರೂಹಾನೀ ಖ಼ಝಾಇನ್ ಭಾಗ 22 ಪುಟ 70)**

ಪ್ಲೇಗ್ ರೋಗದ ಹಾವಳಿಯ ಕಾಲದಲ್ಲಿ ಖಾದಿಯಾನಿನಲ್ಲಿ ಪ್ಲೇಗ್ ತೀವ್ರವಾಗಿ ಹರಡಿದ್ದಾಗ ನನ್ನ ಮಗ ಶರೀಫ್ ಅಹ್ಮದ್ ರೋಗಿಯಾದನು. ಜ್ವರದ ಆಧಿಕ್ಯದ ಕಾರಣದಿಂದ ಹುಡುಗನ ಪ್ರಜ್ಞೆ ತಪ್ಪಿತು. ಪ್ರಜ್ಞೆಯಿಲ್ಲದೆ ಅವನು ತನ್ನ ಎರಡು ಕೈಗಳನ್ನೂ ಬಡಿಯುತ್ತಿದ್ದನು. ಮನುಷ್ಯನಿಗೆ ಮೃತ್ಯುವನ್ನು ತಡೆಗಟ್ಟಲು ಸಾಧ್ಯವಿಲ್ಲವಾದರೂ ಪ್ಲೇಗ್ ರೋಗ ಹರಡಿರುವ ಈ ಕಾಲದಲ್ಲಿ ಹುಡುಗ ಮೃತನಾದರೆ ಎಲ್ಲ ಶತ್ರುಗಳು ಜ್ವರವನ್ನು ಪ್ಲೇಗೆಂದು ಬಿಂಬಿಸಿ ಪ್ರಚಾರ ಮಾಡುವರು ಮತ್ತು **إِنِّي أُحَافِظُ كُلَّ مَنْ فِي الدَّارِ ಇನ್ನೀ ಉಹಾಫಿಝು ಕುಲ್ಲ ಮನ್ ಫಿದ್ದಾರ್** ಎಂದರೆ "ನಿನ್ನ ಭವನದಲ್ಲಿರುವ ಎಲ್ಲರನ್ನೂ ನಾನು ನಿಶ್ಚಯವಾಗಿಯೂ ರಕ್ಷಿಸುವೆನು" ಎಂಬ ಅಲ್ಲಾಹನ ಸಂದೇಶವಾಣಿಯನ್ನು ಅವರು ಸುಳ್ಳೆಂದು ಪ್ರಚಾರ ಮಾಡುವರು ಎಂದು ನಾನು ಯೋಚಿಸಿದೆ.

ಈ ಚಿಂತೆಯಿಂದ ವಿವರಿಸಲಾಗದಷ್ಟು ದುಃಖ ನನಗೆ ಉಂಟಾಯಿತು. ರಾತ್ರಿ ಹನ್ನೆರಡು ಗಂಟೆಯ ಸಮಯದಲ್ಲಿ ಹುಡುಗನ ಸ್ಥಿತಿ ಬಹಳ ಕೆಟ್ಟಿತು. ಇದು ಸಾಮಾನ್ಯ ಜ್ವರವಲ್ಲ. ಬದಲಾಗಿ ಇದು ಬೇರೆ ವಿಪತ್ತು ಎಂದು ಯೋಚಿಸಿ ನನ್ನ ಹೃದಯದಲ್ಲಿ ಭಯ ಉಂಟಾಯಿತು. ಆಗ ನನ್ನ ಹೃದಯದ ಅವಸ್ಥೆ ಹೇಗಿತ್ತೆಂದು ವಿವರಿಸಿಲಾರೆ. ಆಕಸ್ಮಿಕವಾಗಿ ಹುಡುಗನೇನಾದರೂ ಮೃತನಾದರೆ ದೌರ್ಜನ್ಯಗಾರರಿಗೆ ಸತ್ಯವನ್ನು ಮರೆಮಾಡಲು ತಕ್ಕಷ್ಟು ಕಾರಣಗಳು ದೊರಕುವುವು. ಹೀಗೆ ಯೋಚಿಸುತ್ತಾ ನಾನು ವುಝು ಮಾಡಿ ನಮಾಝ್ ಅನುಷ್ಠಿಸಲು ನಿಂತೆನು. ನಾನು ನಿಂತ ಕೂಡಲೆ ಪ್ರಾರ್ಥನೆ ಸ್ವೀಕಾರ ಪಡೆಯುವ ಸ್ಪಷ್ಟ ಚಿಹ್ನೆ ಲಭಿಸಿದ ಅನುಭವ ಉಂಟಾಯಿತು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ದೇವನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ: ನಾನು ಪ್ರಾಯಶಃ ಮೂರು ರಕಅತ್ ನಮಾಝ್ ಅನುಷ್ಠಿಸಿದಾಗ ನನಗೆ ದಿವ್ಯದರ್ಶನ (ಕಶ್ಫ್) ಸ್ಥಿತಿ ಉಂಟಾಯಿತು. ಹುಡುಗ ಸಂಪೂರ್ಣ ರೋಗಮುಕ್ತನಾಗಿರುವುದಾಗಿ ನಾನು ದಿವ್ಯದರ್ಶನದಲ್ಲಿ ಕಂಡೆನು. ಹುಡುಗ ಪ್ರಜ್ಞೆಯೊಂದಿಗೆ ಮಂಚದಲ್ಲಿ ಎದ್ದು ಕುಳಿತು ಕುಡಿಯಲು ನೀರನ್ನು ಕೇಳುತ್ತಿರುವುದಾಗಿ, ದಿವ್ಯದರ್ಶನದ ಸ್ಥಿತಿ ನೀಗಿ ನಾಲ್ಕು ರಕಅತ್ ನಮಾಝ್ ಅನುಷ್ಠಿಸಿ ಮುಗಿಸಿದ ನಂತರ ನಾನು ಕಂಡೆನು. ನಾನು ಕೂಡಲೆ ಅವನಿಗೆ ನೀರನ್ನು ಕೊಟ್ಟು ಅವನ ಶರೀರದ ಮೇಲೆ ಕೈಯಿಟ್ಟು ನೋಡಿದಾಗ ಜ್ವರದ ಯಾವ ಲಕ್ಷಣವೂ ಇರಲಿಲ್ಲ.

**(ಹಖೀಖತುಲ್ ವಹ್ಯ್: ರೂಹಾನೀ ಖಝಾಇನ್ ಸಂಪುಟ 22, ಪುಟ 87 – 88,)**

**21ನೇ ದೃಷ್ಟಾಂತ:** ಅಂದಾಜು ಮೂವತ್ತು ವರ್ಷಗಳ ಹಿಂದೆ ನನ್ನ ತಂದೆ (ಅಲ್ಲಾಹನು ಅವರನ್ನು ಅನುಗ್ರಹಿಸಲಿ) ತನ್ನ ಆಯುಷ್ಕಾಲದ ಕೊನೆಯಲ್ಲಿ ರೋಗ ಬಾಧಿತರಾದರು. ಅವರು ಮರಣ ಹೊಂದಲಿದ್ದ ಆ ದಿನ ಮಧ್ಯಾಹ್ನದ ಹೊತ್ತು ನನಗೆ ಹೀಗೆ ಸಂದೇಶವಾಣಿ ಲಭಿಸಿತು: وَالسَّمَاءِ وَالطَّارِقِ **"ವಸ್ಸಮಾಇ ವತ್ತಾರಿಖ್"** ಅದರೊಂದಿಗೆ ಇದು ಅವರ ಮೃತ್ಯು ಬಗ್ಗೆ ಸೂಚನೆಯಾಗಿದೆ ಎಂದು ನನ್ನ ಹೃದಯದಲ್ಲಿ ಹಾಕಲಾಯಿತು. "ಆಕಾಶದಾಣೆ ಮತ್ತು ಸೂರ್ಯಾಸ್ತಮಾನದ ನಂತರ ಬಂದೆರಗಲಿರುವ ವಿಪತ್ತಿನ ಆಣೆ." ಎಂಬುದಾಗಿದೆ ಈ ಸಂದೇಶವಾಣಿಯ ಅರ್ಥ. ಇದು ದೇವನ ಕಡೆಯಿಂದ ತನ್ನ ದಾಸನಿಗೆ ಸಂತಾಪ ಸೂಚನೆಯಾಗಿತ್ತು. ಸೂರ್ಯಾಸ್ತಮಾನದ ನಂತರ ನನ್ನ ತಂದೆಯವರು ಮೃತರಾಗುವರೆಂದು ನನಗೆ ಮನವರಿಕೆಯಾಯಿತು. ನಾನು ಅನೇಕ ಜನರಿಗೆ ಈ ಸಂದೇಶವಾಣಿಯ ಬಗ್ಗೆ ತಿಳಿಸಿದೆ. ನನಗೆ ತಿಳಿಸಲಾದ ಪ್ರಕಾರವೇ ಸಂಭವಿಸಿತು ಎಂದು ನಾನು ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಅವನ ಬಗ್ಗೆ ಸುಳ್ಳು ಹೇಳುವುದು ಶೈತಾನನ ಮತ್ತು ಶಪಿಸಲ್ಪಟ್ಟವನ ಕೆಲಸವಾಗಿದೆ.

**(ಹಖೀಖತುಲ್ ವಹ್ಯ್: ರೂಹಾನೀ ಖಝಾಇನ್ ಸಂಪುಟ 22, ಪುಟ 218)**

ಆಗ ಅದೆ ಪ್ರಜ್ಞಾವಸ್ಥೆ ಉಂಟಾಗಿ ಎರಡನೆಯ ಇಲ್‌ಹಾಮ್ (ಸಂದೇಶವಾಣಿ) اليس الله بكافٍ عبدهٗ ಅಲೈಸಲ್ಲಾಹು ಬಿಕಾಫಿನ್ ಅಬ್ದಹೂ ಅವತೀರ್ಣಗೊಂಡಿತು. ಎಂದರೆ, "ಏನು ಅಲ್ಲಾಹನು ಅವನ ದಾಸನಿಗೆ ಸಾಕಾಗಲಾರನೆ?" ಈ ಇಲ್‌ಹಾಮ್ ಲಭಿಸಿದಾಗ, ತೀವ್ರವಾದ ನೋವಿನ ಗಾಯ ಒಂದು ಲೇಪನದ ಮೂಲಕ ತಕ್ಷಣ ಗುಣವಾಗುವ ರೀತಿಯಲ್ಲಿ ನನ್ನ ಹೃದಯ ಬಲಿಷ್ಠಗೊಂಡಿತು. ಅಲ್ಲಾಹನು ಅವತೀರ್ಣಗೊಳಿಸುವ ಸಂದೇಶವಾಣಿಗಳಲ್ಲಿ ಹೃದಯಕ್ಕೆ ಸಮಾಧಾನ ನೀಡುವ ತನ್ನದಾದೊಂದು ವೈಶಿಷ್ಟ್ಯತೆ ಇದೆ ಎಂಬ ಸಂಗತಿ ನಿಜವಾಗಿಯೂ ಅನೇಕ ಬಾರಿ ಅನುಭವಕ್ಕೆ ಬಂದಿದೆ. ಅಲ್ಲಾಹನ ಸಂದೇಶವಾಣಿಯ ಬಗ್ಗೆ ಇರುವ ದೃಢವಿಶ್ವಾಸ ಈ ವೈಶಿಷ್ಟ್ಯತೆಯ ತಾಯಿಬೇರಾಗಿದೆ. ಈ ಜನರ ಇಲ್‌ಹಾಮ್‌ಗಳ (ಸಂದೇಶವಾಣಿ) ಬಗ್ಗೆ ದುಃಖವಾಗುತ್ತದೆ. "ತಮಗೆ ದೊರಕಿದ ಇಲ್‌ಹಾಮ್‌ಗಳು ಸಂಶಯಕರವಾಗಿವೆ, ಅವು ಶೈತಾನನಿಂದ ದೊರಕಿದವುಗಳೋ ರಹ್ಮಾನ್ ಆಗಿರುವ ಅಲ್ಲಾಹನಿಂದ ದೊರಕಿದವುಗಳೋ ಎಂದು ತಿಳಿಯುವುದಿಲ್ಲ" ಎಂದು ಅವರು ಹೇಳುತ್ತಾರೆ. ಇಂತಹ ಇಲ್‌ಹಾಮ್‌ಗಳ ಹಾನಿ ಅವುಗಳ ಲಾಭಕ್ಕಿಂತ ಹೆಚ್ಚಾಗಿವೆ. ಆದರೆ ನಾನು ಪವಿತ್ರ ಖುರ್‌ಆನನ್ನು ಮತ್ತು ಇತರ ದೈವಿಕ ಗ್ರಂಥಗಳನ್ನು ನಂಬುವ ಹಾಗೆ ಈ ಇಲ್‌ಹಾಮ್‌ಗಳನ್ನು ನಂಬುತ್ತೇನೆ ಹಾಗೂ ನಾನು ಪವಿತ್ರ ಖುರ್‌ಆನನ್ನು ಅಲ್ಲಾಹನ ವಚನವೆಂದು ದೃಢವಾಗಿ ನಂಬುವ ಹಾಗೆಯೇ ನನಗೆ ಅವತೀರ್ಣಗೊಂಡ ಇಲ್‌ಹಾಮ್‌ಗಳನ್ನು ಅಲ್ಲಾಹನ ವಚನಗಳೆಂದು ದೃಢವಾಗಿ ನಂಬುತ್ತೇನೆ ಎಂದು ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ.

**(ಹಖೀಖತುಲ್ ವಹ್ಯ್: ರೂಹಾನೀ ಖಝಾಇನ್ ಸಂಪುಟ 22, ಪುಟ 219 – 220)**

**105ನೇ ದೃಷ್ಟಾಂತ:** ಒಮ್ಮೆ ನನ್ನ ಸಹೋದರ ಮಿರ್ಝಾ ಗುಲಾಮ್ ಖಾದಿರ್ ಸಾಹೇಬರ ಜೀವಿತಾವಧಿಯಲ್ಲಿ ಹೆಚ್ಚೆಂದರೆ ಹದಿನೈದು ದಿನಗಳು ಉಳಿದಿವೆ ಎಂದು ನನಗೆ ಸ್ವಪ್ನದಲ್ಲಿ ತೋರಿಸಲಾಯಿತು. ಅನಂತರ ಅವರು ಕಠಿಣ ರೋಗಬಾಧಿತರಾಗಿ ಬರೇ ಅಸ್ಥಿಪಂಜರದ ಹಾಗೆಯಾದರು. ಅವರು ಮಂಚದಲ್ಲಿ ಕುಳಿತಿರುವಾಗ ಅದರಲ್ಲಿ ಕುಳಿತಂತೆ ಕಾಣದಷ್ಟು ಕ್ಷೀಣ ದೇಹವನ್ನು ಹೊಂದಿದ್ದರು. ಪ್ರಜ್ಞೆರಹಿತ ಸ್ಥಿತಿಯಲ್ಲಿ ಅವರ ಮಲಮೂತ್ರ ವಿಸರ್ಜನೆ ಅಲ್ಲೇ ಆಗುತಿತ್ತು. ನನ್ನ ಪಿತ ಮಿರ್ಝಾ ಗ್ಯುಲಾಮ್ ಮುರ್ತಝಾ ಸಾಹಿಬರು ತಜ್ಞ ವೈದ್ಯರಾಗಿದ್ದರು. ಆತನ ಪರಿಸ್ಥಿತಿ ನಿರಾಶಾದಾಯಕವಾಗಿದೆ ಮತ್ತು ಕೆಲವೇ ದಿನಗಳಷ್ಟು ಕಾಲ ಜೀವಿಸುವನು ಎಂದು ಅವರು ಹೇಳಿದರು. ಆ ಕಾಲದಲ್ಲಿ ನನ್ನಲ್ಲಿ ಯೌವ್ವನದ ಶಕ್ತಿ ಇತ್ತು ಮತ್ತು ಪರಿಶ್ರಮಪಡುವ ಬಲವಿತ್ತು. ಅಲ್ಲಾಹನು ಪ್ರತಿಯೊಂದು ಕೆಲಸ ಮಾಡಲು ಸಮರ್ಥನೆಂದು ನಂಬುವುದು ನನ್ನ ಸಹಜಗುಣವಾಗಿತ್ತು. ಅವನ ಸಾಮರ್ಥ್ಯಗಳ ಸೀಮೆಯನ್ನು ಗುರುತಿಸಲು ಯಾರಿಗೆ ತಾನೆ ಸಾಧ್ಯ? ಅವನ ವಾಗ್ದಾನಗಳಿಗೆ ವಿರುದ್ಧವಾದ, ಅವನ ವೈಭವಕ್ಕೆ ಕುಂದುಂಟು ಮಾಡುವ

ಮತ್ತು ಏಕತ್ವಕ್ಕೆ ವಿರುದ್ಧವಾದುದು ಹೊರತು ಇತರ ಯಾವುದೇ ಕಾರ್ಯವೂ ಅಲ್ಲಾಹನಿಗೆ ಅಸಾಧ್ಯವಲ್ಲ. ಆದುದರಿಂದ ನನ್ನ ಸಹೋದರನು ಆ ಸ್ಥಿತಿಯಲ್ಲಿದ್ದರೂ ನಾನು ಅವನಿಗೋಸ್ಕರ ಪ್ರಾರ್ಥಿಸಲು ಪ್ರಾರಂಭಿಸಿದೆ. ಈ ಪ್ರಾರ್ಥನೆಯಲ್ಲಿ ನಾನು ಮೂರು ಸಂಗತಿಗಳ ಬಗ್ಗೆ ನನ್ನ ಅರಿವು ವರ್ಧಿಸಲು ದೃಢಸಂಕಲ್ಪ ಮಾಡಿದೆ. ಒಂದನೆಯದಾಗಿ, ಅಲ್ಲಾಹನ ಸನ್ನಿಧಿಯಲ್ಲಿ ನನ್ನ ಪ್ರಾರ್ಥನೆ ಸ್ವೀಕಾರ ಪಡೆಯಲು ನಾನು ಅರ್ಹನಾಗಿರುವೆನೋ? ಎರಡನೆಯದಾಗಿ, ಸ್ವಪ್ನ ಅಥವಾ ಇಲ್‌ಹಾಮ್ ರೂಪದಲ್ಲಿ ಮುನ್ನೆಚ್ಚರಿಕೆ ನೀಡಲಾಗುತ್ತಿರುವ ಸಂಭವಗಳು ಮುಂದೂಡಲ್ಪಡಲು ಸಾಧ್ಯವೇ? ಮೂರನೆಯದಾಗಿ, ರೋಗಬಾಧಿತನಾಗಿ ಕೇವಲ ಎಲುಬಿನ ಗೂಡಾಗಿರು ವವನು ಪ್ರಾರ್ಥನೆ ಮೂಲಕ ಗುಣಮುಖನಾಗುವನೇ? ನಾನು ಈ ನೆಲೆಯಲ್ಲಿ ಪ್ರಾರ್ಥನೆಮಾಡಲು ಆರಂಭಿಸಿದೆನು. ಪ್ರಾರ್ಥನೆಯೊಂದಿಗೆ ರೋಗಾವಸ್ಥೆಯಲ್ಲಿ ಬದಲಾವಣೆ ಉಂಟಾಗತೊಡಗಿತು ಎಂದು ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಹೇಳುತ್ತೇನೆ. ಈ ಸಂದರ್ಭದಲ್ಲಿ ನನ್ನ ಸಹೋದರ ಅಂಗಣದಲ್ಲಿ ಸ್ವತಃ ನಡೆಯುತ್ತಿರುವುದಾಗಿ ನಾನು ಬೇರೊಂದು ಸ್ವಪ್ನದಲ್ಲಿ ಕಂಡೆನು. ಆಗ ಅವರ ಸ್ಥಿತಿ ಹೇಗಿತ್ತೆಂದರೆ ಮಲಗಿರುವಾಗ ಇನ್ನೊಬ್ಬರು ಮಗ್ಗಲು ಬದಲಾಯಿಸಬೇಕಾಗುತ್ತಿತ್ತು. ನಾನು ಪ್ರಾರ್ಥಿಸುತ್ತಾ ಹದಿನೈದು ದಿನ ದಾಟಿ ಹೋದಾಗ ಅವರ ಆರೋಗ್ಯದ ಸ್ಥಿತಿ ಉತ್ತಮಗೊಂಡಿತು. ಸ್ವತಃ ಸ್ವಲ್ಪ ನಡೆಯಲು ಬಯಸುತ್ತೇನೆ ಎಂದು ಅವರು ಹೇಳಿದರು. ಅವರು ಇತರರ ಸಹಾಯದಿಂದ ಎದ್ದುನಿಂತು ಬೆತ್ತ ಹಿಡಿದು ನಡೆಯಲು ಪ್ರಾರಂಭಿಸಿದರು. ಅನಂತರ ಬೆತ್ತ ಹಿಡಿಯುವುದನ್ನೂ ಬಿಟ್ಟರು. ಕೆಲವೇ ದಿನಗಳಲ್ಲಿ ಪೂರ್ಣಾರೋಗ್ಯ ಪಡೆದರು. ಅನಂತರ ಅವರು ಹದಿನೈದು ವರ್ಷಗಳ ಕಾಲ ಜೀವಿಸಿದರು.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ, ಪುಟ 265 –266)**

**135ನೇ ದೃಷ್ಟಾಂತ:** ಕಳೆದ ಇಪ್ಪತ್ತು ವರ್ಷಗಳಿಂದ ನಾನು ಮಧುಮೇಹ ರೋಗ ಬಾಧಿತನಾಗಿರುವುದರಿಂದ ನನ್ನ ದೃಷ್ಟಿಯ ಬಗ್ಗೆ ನನಗೆ ಆತಂಕವಿತ್ತು. ಏಕೆಂದರೆ ಈ ರೋಗ ಬಂದರೆ ಕಣ್ಣಿಗೆ ಅಂಧತೆ ಬಾಧಿಸುವ ಅಪಾಯವಿರುತ್ತದೆ. ಆಗ ಅಲ್ಲಾಹನು ತನ್ನ ಅನುಗ್ರಹದಿಂದ ತನ್ನ ಸಂದೇಶವಾಣಿ ಮೂಲಕ ನನಗೆ ಮನಸ್ಸಮಾಧಾನ ನೀಡಿದನು. ಆ ಸಂದೇಶವಾಣಿ ಹೀಗೆ:

نزلت الرحمة علی ثلث۔ العین وعلی الأخریین

**ನಝುಲತಿರ್ರಹ್ಮತ ಅಲಾ ಸಲಾಸಿನ್ ಅಲ್‌ಐನು ವ ಅಲಲ್ ಉಖ್ರೈನಿ.**

ಎಂದರೆ, **“**ಮೂರು ಅಂಗಗಳ ಮೇಲೆ ಅನುಗ್ರಹ ಸುರಿಸಲಾಗಿದೆ. ಕಣ್ಣು ಮತ್ತು ಇತರ ಎರಡು ಅಂಗಗಳ ಮೇಲೆ.**”** ಅವುಗಳ ವಿವರಣೆ ನೀಡಲಾಗಿಲ್ಲ. ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಹದಿನೈದು ಇಪ್ಪತ್ತು ವರ್ಷ

ಪ್ರಾಯದಲ್ಲಿ ನನ್ನ ದೃಷ್ಟಿ ಇದ್ದ ಹಾಗೆ ಈಗಲೂ ಎಂದರೆ, ಅಂದಾಜು ಎಪ್ಪತ್ತು ವರ್ಷ ಪ್ರಾಯದಲ್ಲೂ ಇದೆ. ಇದು ದೇವನು ತನ್ನ ಸಂದೇಶವಾಣಿಯಲ್ಲಿ ವಾಗ್ದಾನ ಮಾಡಿದ ಅದೇ ಅನುಗ್ರಹವಾಗಿದೆ.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ, ಪುಟ 265 – 266)**

**138ನೇ ದೃಷ್ಟಾಂತ:** ದೇವನ ಸಾಮೀಪ್ಯ ಪಡೆದ ದಾಸರ ಒಂದು ದೊಡ್ಡ ಚಿಹ್ನೆ, ಅವರ ಪ್ರಾರ್ಥನೆ ಸ್ವೀಕರಿಸಲ್ಪಡುತ್ತದೆ ಎಂಬುದಾಗಿದೆ. ಪ್ರಾರ್ಥನೆ ಅಂಗೀಕಾರದ ಹಾಗೆ ಯಾವುದೇ ಚಿಹ್ನೆ ಇಲ್ಲ. ಏಕೆಂದರೆ ಒಬ್ಬ ದಾಸನಿಗೆ ದೇವನ ಸನ್ನಿಧಿಯಲ್ಲಿ ಗೌರವವಿದೆ ಎಂದು ಪ್ರಾರ್ಥನೆಯ ಅಂಗೀಕಾರ ಮೂಲಕ ಸಾಬೀತಾಗುತ್ತದೆ. ಹೀಗಿದ್ದರೂ ಪ್ರತಿಯೊಂದು ಪ್ರಾರ್ಥನೆ ಸ್ವೀಕಾರವಾಗುವುದು ಆವಶ್ಯಕರವಾದುದೇನೂ ಅಲ್ಲ. ಕೆಲವು ಸಾರಿ ದೇವನು ತನ್ನ ನಿರ್ಧಾರವನ್ನು ಜಾರಿಗೊಳಿಸುತ್ತಾನೆ. ಆದರೆ ಅನ್ಯರಿಗೆ ಹೋಲಿಸಿದರೆ ಅವರ ಪ್ರಾರ್ಥನೆಗಳು ಅತ್ಯಧಿಕವಾಗಿ ಅಲ್ಲಾಹನಿಂದ ಸ್ವೀಕಾರ ಪಡೆಯುತ್ತವೆ. ಪ್ರಾರ್ಥನೆಯ ಅಂಗೀಕಾರದಲ್ಲಿ ಯಾರೂ ಅವರ ಪದವಿಯನ್ನು ತಲುಪಲಾರರು. ನನ್ನ ಸಾವಿರಗಟ್ಟಲೆ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕರಿಸಲ್ಪಟ್ಟಿವೆ ಎಂದು ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ನಾನು ಅವುಗಳನ್ನೆಲ್ಲ ಬರೆಯುವೆನಾದರೆ ಅದೊಂದು ಬೃಹದ್ ಗ್ರಂಥವಾಗುವುದು.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ 22, ಪುಟ 334)**

ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ದೇವನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ. ಅವನೇ ನನ್ನನ್ನು ಕಳುಹಿಸಿರುವನು. ಅವನೇ ನನ್ನ ಹೆಸರು ನಬಿ ಎಂದು ಇರಿಸಿದನು. ಅವನೇ ನನ್ನನ್ನು ಮಸೀಹ್ ಮೌಊದ್ ಎಂದು ಕರೆದಿರುವನು. ಅವನೇ ನನ್ನ ಸತ್ಯಕ್ಕೆ ಸಾಕ್ಷ್ಯವಾಗಿ ದೊಡ್ಡ ದೊಡ್ಡ ದೃಷ್ಟಾಂತಗಳನ್ನು ಪ್ರಕಟಿಸಿದನು. ಅವುಗಳ ಸಂಖ್ಯೆ ಮೂರು ಲಕ್ಷಗಳನ್ನು ತಲಪಿದೆ. ಅವುಗಳಲ್ಲಿ ಕೆಲವನ್ನು ಉದಾಹರಣೆಗೋಸ್ಕರ ಈ ಪುಸ್ತಕದಲ್ಲಿ ಬರೆದಿರುವೆನು.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ 22, ಪುಟ 503)**

## ಅಮೇರಿಕಾದ ಮಿಥ್ಯವಾದಿಯಾದ ಡಾಕ್ಟರ್ ಅಲೆಕ್ಸಾಂಡರ್ ಡೂಯೀ ನನ್ನ ಭವಿಷ್ಯವಾಣಿ ಪ್ರಕಾರ ಮೃತನಾದನು.

**ದೃಷ್ಟಾಂತ ಸಂಖ್ಯೆ 196:** ಮೇಲಿನ ಶೀರ್ಷಿಕೆಯಲ್ಲಿ ಬರೆದ ಹೆಸರಿನ ವ್ಯಕ್ತಿ ಇಸ್ಲಾಮಿನ ಕಠಿಣ ಶತ್ರುವಾಗಿದ್ದನು. ತಾನು ಪ್ರವಾದಿ ಎಂದು ಸುಳ್ಳು ವಾದ ಮಾಡಿದನಲ್ಲದೆ ಪ್ರವಾದಿಗಳ ಸರದಾರ, ಸತ್ಯವಂತರಲ್ಲಿ ಶ್ರೇಷ್ಠ, ಪ್ರವಾದಿಗಳಲ್ಲಿ ಶ್ರೇಷ್ಠ, ಪರಿಶುದ್ಧರ ನಾಯಕ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸುಳ್ಳುಗಾರನೆಂದೂ ಸುಳ್ಳು ಸೃಜಿಸುವವನೆಂದೂ ಭಾವಿಸುತ್ತಿದ್ದನು. ಆತನು ಕೊಳಕು ಭಾಷೆಯಲ್ಲಿ ಹಝ್ರತ್ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ದೂಷಿಸುತ್ತಿದ್ದನು. ಇಸ್ಲಾಮ್ ಧರ್ಮದ ವಿರುದ್ಧ ದ್ವೇಷದ ಕಾರಣ ಆತನಲ್ಲಿ ತೀವ್ರ ಕೊಳಕು ದುರ್ಗುಣಗಳಿದ್ದುವು. ಹಂದಿಗಳ ಮುಂದೆ ಮುತ್ತುರತ್ನಗಳಿಗೆ ಬೆಲೆಯಿಲ್ಲದ ಹಾಗೆ ಆತನು ಇಸ್ಲಾಮ್ ಧರ್ಮದ ಏಕದೇವ ವಿಶ್ವಾಸವನ್ನು ಬಹಳ ನೀಚ ದೃಷ್ಟಿಯಿಂದ ನೋಡುತ್ತಿದ್ದನು ಮತ್ತು ಆತನು ಇಸ್ಲಾಮಿನ ನಾಶವನ್ನು ಬಯಸುತ್ತಿದ್ದನು. ಆತನು ಹಝ್ರತ್ ಈಸಾ ಮಸೀಹರನ್ನು ದೇವನೆಂದು ನಂಬುತ್ತಿದ್ದನು ಮತ್ತು ಕ್ರೈಸ್ತ ಧರ್ಮವನ್ನು ಲೋಕದೆಲ್ಲೆಡೆ ಪ್ರಚಾರಮಾಡಲು ಉತ್ಸುಕನಾಗಿದ್ದನು. ನಾನು ಪಾದರಿಗಳ ನೂರಾರು ಪುಸ್ತಕಗಳನ್ನು ನೋಡಿರುವೆನು, ಆದರೆ ಅವುಗಳಲ್ಲಿ ಯಾವುದರಲ್ಲಿಯೂ ಇಂತಹ ಆವೇಶ ಕಾಣಲಿಲ್ಲ.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ 22, ಪುಟ 504 – 505)**

ನನ್ನ ಮುಖ್ಯ ಕೆಲಸ ಶಿಲುಬೆಯನ್ನು ಮುರಿಯುವುದು ಆಗಿರುವುದರಿಂದ ಡೂಯಿಯ ಮೃತ್ಯುವಿನ ಮೂಲಕ ಶಿಲುಬೆಯ ಒಂದು ದೊಡ್ಡ ಭಾಗ ಮುರಿದುಹೋಯಿತು. ಆತನು ಲೋಕದಲ್ಲಿ ಪ್ರಥಮ ಶ್ರೇಣಿಯ ಶಿಲುಬೆಯ ಬೆಂಬಲಿನಾಗಿದ್ದನು. ಆತನು ಪ್ರವಾದಿತ್ವದ ವಾದ ಮಾಡುತ್ತಿದ್ದನು ಮತ್ತು ಆತನ ಪ್ರಾರ್ಥನೆಯಿಂದ ಎಲ್ಲ ಮುಸ್ಲಿಮರು ನಾಶವಾಗುವರು, ಇಸ್ಲಾಮ್ ನಾಶವಾಗುವುದು ಮತ್ತು ಕಅ್‌ಬ ಜನರಹಿತವಾಗುವುದು ಎಂದು ಹೇಳುತ್ತಿದ್ದನು. ದೇವನು ನನ್ನ ಕೈಗಳ ಮೂಲಕ ಆತನನ್ನು ನಾಶಮಾಡಿದನು. ಆತನ ಮೃತ್ಯು ಮೂಲಕ ಹಂದಿಯನ್ನು ಕೊಲ್ಲುವ ಭವಿಷ್ಯವಾಣಿ ಬಹಳ ಸ್ಪಷ್ಟವಾಗಿ ಈಡೇರಿತು. ಏಕೆಂದರೆ, ತಾನು ಪ್ರವಾದಿ ಎಂದು ಸುಳ್ಳುವಾದ ಮಾಡಿ ಹಂದಿಗಳ ಹಾಗೆ ಸುಳ್ಳೆಂಬ ಕೊಳಕು ಪದಾರ್ಥ ಭಕ್ಷಿಸಿದ ಈ ವ್ಯಕ್ತಿಗಿಂತ ಹೆಚ್ಚು ಅಪಾಯಕಾರಿಯಾದವನು ಬೇರೆ ಯಾರಿರಬಹುದು? ಆತನ ಜೊತೆಗೆ ಶ್ರೀಮಂತರಾದ ಒಂದು ಲಕ್ಷ ಜನ ಸೇರಿರುವುದಾಗಿ ಆತನು ಬರೆದಿದ್ದನು. ಸತ್ಯವೇನೆಂದರೆ, ಆತನಿಗೆ ಹೋಲಿಸಿದರೆ ಮುಸೈಲಿಮ ಕದ್ದಾಬ್ ಮತ್ತು ಅಸ್‌ವದ್ ಅನ್‌ಸೀ ಏನೂ ಅಲ್ಲ. ಅವರು ಡೂಯಿಯ ಹಾಗೆ ಪ್ರಸಿದ್ಧಿಯೂ ಗಳಿಸಿರಲಿಲ್ಲ, ಆತನ ಹಾಗೆ ಕೋಟಿಗಟ್ಟಲೆ

ಹಣದ ಮಾಲಿಕರೂ ಆಗಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿಯಲ್ಲಿ ಸೂಚಿಸಿದ ಮಸೀಹ್ ಮೌಊದ್‌ರಿಂದ ಕೊಲ್ಲಲ್ಪಡುವ ಹಂದಿ ಆತನೇ ಆಗಿದ್ದನು ಎಂದು ನಾನು ಅಲ್ಲಾಹನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ 22, ಪುಟ 513)**

## ಮೂರನೆಯ ಬಾರಿ ಮೂರು ಸಾವಿರ ರೂಪಾಯಿಯ ಬಹುಮಾನ ಪ್ರಕಟಣೆ

ಆಥಮ್ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅವರು (ಆಥಮ್) ಹಾಜರಿರುವಾಗ ಜನರ ಮುಂದೆ ಸ್ಪಷ್ಟ ಶಬ್ದಗಳಲ್ಲಿ ಆಣೆ ಹಾಕಿ ಹೀಗೆ ಹೇಳಲಿ:

"ನಾನು ಭವಿಷ್ಯವಾಣಿಯ ನಿಗದಿತ ಕಾಲಾವಧಿಯಲ್ಲಿ ಇಸ್ಲಾಮ್ ಕಡೆಗೆ ಒಂದಿಷ್ಟು ಕೂಡ ತಿರುಗಲಿಲ್ಲ. ಇಸ್ಲಾಮಿನ ಸತ್ಯತೆ ಮತ್ತು ಮಹತ್ವ ನನ್ನ ಹೃದಯದ ಮೇಲೆ ಯಾವುದೇ ಭಯಪಡಿಸುವ ಪ್ರಭಾವ ಬೀರಲಿಲ್ಲ. ಇಸ್ಲಾಮೀ ಭವಿಷ್ಯವಾಣಿಯ ಆಧ್ಯಾತ್ಮಿಕ ಗಾಂಭೀರ್ಯ ಒಂದಿಷ್ಟು ಕೂಡ ನನ್ನ ಹೃದಯವನ್ನು ಆಕರ್ಷಿಸಲಿಲ್ಲ. ನಾನು ಈಸಾ ಮಸೀಹರ ದೈವತ್ವ, ದೇವಪುತ್ರತ್ವ ಮತ್ತು ಪಾಪ ಪರಿಹಾರ ಸಿದ್ಧಾಂತದ ಬಗ್ಗೆ ಪೂರ್ಣ ವಿಶ್ವಾಸವನ್ನು ಹೊಂದಿದ್ದೆ. ನಾನು ಹೇಳುವುದು ವಾಸ್ತವಿಕತೆಗೆ ವಿರುದ್ಧವಾಗಿದ್ದರೆ ಮತ್ತು ನಾನು ಸತ್ಯವನ್ನು ಮರೆಮಾಚುತ್ತಿದ್ದರೆ ದೇವನು ಒಂದು ವರ್ಷದೊಳಗೆ ಸುಳ್ಳುಗಾರರ ಮೇಲೆ ಬಂದೆರುಗುವಂತಹ ಶಿಕ್ಷೆಯಿಂದ ನನ್ನನ್ನು ನಾಶಮಾಡಲಿ."

ಆಥಮ್ ಮೇಲಿನಂತೆ ಆಣೆ ಹಾಕಬೇಕೆಂದು ನಾವು ಆವಶ್ಯಪಡುತ್ತೇವೆ. ಈ ರೀತಿಯಲ್ಲಿ ಆಣೆಹಾಕಲು ನಾವು ಪದೇ ಪದೇ ಪ್ರಕಟಣೆ ನೀಡುತ್ತಾ ಮೂರು ಸಾವಿರ ರೂಪಾಯಿಗಳು ಕೊಡಲಿಕ್ಕೆ ತಯಾರಾಗುವ ತನಕ ತಲಪಿದ್ದೇವೆ. ನಾವು ಆಣೆ ಹಾಕಿ ಹೇಳುತ್ತೇವೆ: 1894 ಸೆಪ್ಟಂಬರ್ ದಿನಾಂಕ 9ರಂದು ಪ್ರಕಟಿಸಿದ ಶರತ್ತುಗಳಿಗನುಸಾರವಾಗಿ ಕರಾರು ಪತ್ರ ಬರೆಯಿಸಿ ಮೂರು ಸಾವಿರ ರೂಪಾಯಿಗಳನ್ನು ಆಣೆ ಹಾಕುವ ಮೊದಲು ಕೊಡುವೆವು. ಅನಂತರ ಆಣೆ ಹಾಕಿ ಪ್ರಮಾಣ ಮಾಡಿದರೆ ಸಾಕು.........

ಈಗ ಆಥಮ್ ಆಣೆ ಹಾಕಿ ಪ್ರಮಾಣ ಮಾಡಲು ಮುಂದೆ ಬರುವರು ಎಂದು ಯಾರಿಗಾದರೂ ಪ್ರತೀಕ್ಷೆ ಇದೆಯೇ. ಖಂಡಿತವಾಗಿ ಬರಲಾರರು. ಖಂಡಿತವಾಗಿ ಬರಲಾರರು. ಅವರು ಸುಳ್ಳೆಂಬ ಮೃತ್ಯುವನ್ನು ಪಡೆದಿರುವರು. ಈಗ ಗೋರಿಯಿಂದ ಹೇಗೆ ತಾನೆ ಹೊರಗೆ ಬರಲು ಸಾಧ್ಯ.

**(ಮಜ್‌ಮೂಅ ಇಶ್ತಿಹಾರಾತ್ ಸಂಪುಟ 2, ಪುಟ 64 – 65; ಮುದ್ರಣ: ಅಶ್ಶಿರ್‌ಕತುಲ್ ಇಸ್ಲಾಮಿಯ್ಯ ರಬ್‌ವ)**

تجلیات الٰہیہ

## ಗ್ರಂಥ: ತಜಲ್ಲಿಯಾತೆ ಇಲಾಹಿಯ್ಯ

ಪವಿತ್ರ ಖುರ್‌ಆನ್ ಮತ್ತು ಹದೀಸಿನ ಜ್ಞಾನ ಗಳಿಸಿ ಅವುಗಳನ್ನು ನಿಷ್ಫಲಗೊಳಿಸಿದ ನಮ್ಮ ವಿರೋಧಿಗಳಾದ ಮೌಲ್ವಿಗಳ ಆಕ್ಷೇಪಗಳು ಇವುಗಳಾಗಿವೆ. ವಾಗ್ದಾನದ ಭವಿಷ್ಯವಾಣಿ ಮತ್ತು ಶಿಕ್ಷೆಯ ಭವಿಷ್ಯವಾಣಿಗಳ ಮಧ್ಯೆ ಇರುವ ವ್ಯತ್ಯಾಸ ಅವರಿಗೆ ಇಷ್ಟರ ತನಕ ತಿಳಿದಿಲ್ಲ.

ಆಥಮ್ ಬಗ್ಗೆ ಭವಿಷ್ಯವಾಣಿಯ ನಂತರ ಲೇಖ್‌ರಾಮ್ ಬಗ್ಗೆ ಪ್ರಕಟಿಸಿದ ಭವಿಷ್ಯವಾಣಿಯಲ್ಲಿ ಯಾವುದೇ ಶರತ್ತಿರಲಿಲ್ಲ. ಆ ಭವಿಷ್ಯವಾಣಿಯಲ್ಲಿ ಅದು ಈಡೇರುವ ಕಾಲ ಮತ್ತು ರೀತಿ ವಿವರಿಸಲಾಗಿತ್ತು. ಅದು ಎಷ್ಟು ಸ್ಪಷ್ಟವಾಗಿ ಈಡೇರಿತು ಎಂದು ಚಿಂತಿಸಬೇಕಾಗಿತ್ತು. ಆದರೆ ದ್ವೇಷದ ಕಾರಣ ಹೃದಯ ಅಂಧವಾಗಿರುವವರ ಪೈಕಿ ಯಾರು ಯೋಚಿಸುವರು? ಅವರು ಹೃದಯದಲ್ಲಿ ಸ್ವಲ್ಪ ಮಾತ್ರವಾದರೂ ನ್ಯಾಯಪರತೆ ಇದ್ದಲ್ಲಿ ಅವರಿಗೆ ಅತ್ಯಂತ ಸುಲಭ ವಿಧಾನ ಲಭ್ಯವಾಗಿತ್ತು. ಈಡೇರಿಲ್ಲ ಎಂದು ಆಕ್ಷೇಪವಿರುವ ಭವಿಷ್ಯವಾಣಿಗಳು ಎಷ್ಟಿವೆ ಎಂದು ಬರೆದು ಅವರು ನನ್ನ ಮುಂದೆ ಇರಿಸಬಹುದಾಗಿತ್ತು. ಅನಂತರ ಈಡೇರಿದ ಭವಿಷ್ಯವಾಣಿಗಳೆಷ್ಟು ಎಂದು ಅವರು ನನ್ನಿಂದ ಸಾಕ್ಷ್ಯಾಧಾರ ಕೇಳಬಹುದಾಗಿತ್ತು. ಈ ರೀತಿ ಪರೀಕ್ಷೆ ನಡೆಸಿದರೆ ಅವರ ಎಲ್ಲ ಪರದೆಗಳು ತೆರೆಯಲ್ಪಡುತ್ತಿದ್ದುವು. ಶಿಕ್ಷೆಯ ಬಗ್ಗೆ ಇರುವ, ಶರತ್ತುಗಳನ್ನು ಒಳಗೊಂಡಿರುವ ಮತ್ತು ಭಯದ ಕಾರಣ ಮುಂದೂಡಲ್ಪಟ್ಟ ಒಂದೆರಡು ಭವಿಷ್ಯವಾಣಿಗಳ ಕುರಿತು ಮಾತ್ರ ಅವರು ಆಕ್ಷೇಪಿಸಲು ಸಾಧ್ಯತೆಯಿದೆ ಎಂದು ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಶಿಕ್ಷೆಯ ಭವಿಷ್ಯವಾಣಿಗಳು ಇಸ್ತಿಗ್‌ಫಾರ್, ಸದಖ ಮತ್ತು ಪ್ರಾರ್ಥನೆ ಮೂಲಕ ದೂರಸರಿಸಲ್ಪಡುತ್ತವೆ ಎಂಬುದು ದೇವನ ಪುರಾತನ ನಿಯಮವಾಗಿದೆ.

**(ತಜಲ್ಲಿಯಾತೆ ಇಲಾಹಿಯ್ಯ; ರೂಹಾನೀ ಖಿಝಾಇನ್ ಸಂಪುಟ 20, ಪುಟ 406 – 408)**

ದೇವನು ದಿನಂಪ್ರತಿ ವಿವಿಧ ರೀತಿಗಳ ದೃಷ್ಟಾಂತಗಳನ್ನು ತೋರಿಸಿ ನನ್ನ ಅವಿವೇಕಿಗಳಾದ ವಿರೋಧಿಗಳನ್ನು ಹೀನಾಯಗೊಳಿಸುತ್ತಿದ್ದಾನೆ. ನಾನು ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ: ಅವನು ಹಝ್ರತ್ ಇಬ್ರಾಹೀಮರೊಂದಿಗೆ(ಅ) ಮಾತನಾಡಿದ ಹಾಗೆ, ಅನಂತರ ಇಸ್‌ಹಾಖ್(ಅ), ಯಅ್‌ಖೂಬ್(ಅ), ಮೂಸಾ(ಅ), ಮಸೀಹಿಬ್ನು ಮರ್‌ಯಮ್‌ರೊಂದಿಗೆ(ಅ) ಮತ್ತು ಎಲ್ಲ ಪ್ರವಾದಿಗಳ ನಂತರ ಅತ್ಯಂತ ಪ್ರಕಾಶಮಾನವಾದ ಹಾಗೂ ಪರಿಶುದ್ಧ ಸಂದೇಶವಾಣಿ ಅವತೀರ್ಣಗೊಳಿಸಿ ನಮ್ಮ ಪೈಗಂಬರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ

ಸಂಭಾಷಣೆ ನಡೆಸಿದ ಹಾಗೆಯೇ ನನ್ನನ್ನೂ ಅವನ ಸಂಭಾಷಣೆಯಿಂದ ಅನುಗ್ರಹಿಸಿದನು ಎಂದು ನಾನು ಅಲ್ಲಾಹನಾಣೆ ಹಾಕಿ ಹೇಳುತ್ತೇನೆ. ಆದರೆ ನನಗೆ ಈ ಅನುಗ್ರಹ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿದ್ದರಿಂದ ಲಭಿಸಿದೆ. ನಾನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಮ್ಮತಿಗೆ (ಸಮುದಾಯಕ್ಕೆ) ಸೇರದೆ ಇರುತ್ತಿದ್ದರೆ ಮತ್ತು ಅವರನ್ನು ಅನುಸರಿಸದೆ ಇರುತ್ತಿದ್ದರೆ ನನ್ನ ಸತ್ಕರ್ಮಗಳು ಲೋಕದ ಎಲ್ಲ ಪರ್ವತಗಳಿಗೆ ಸರಿಸಮಾನವಾಗಿದ್ದರೂ ನನಗೆ ಅವನೊಂದಿಗೆ ಸಂಭಾಷಣೆ ಮಾಡುವ ಸೌಭಾಗ್ಯ ಲಭಿಸುತ್ತಿರಲಿಲ್ಲ. ಏಕೆಂದರೆ ಈಗ ಮುಹಮ್ಮದೀ ನುಬುವ್ವತಿನ ಹೊರತು ಎಲ್ಲ ನುಬುವ್ವತ್‌ಗಳು ಕೊನೆಗೊಂಡಿವೆ. ಶರೀಅತ್ ತರುವ ಯಾವ ಪ್ರವಾದಿಯೂ ಬರಲಸಾಧ್ಯ. ಶರೀಅತ್ ರಹಿತ ಪ್ರವಾದಿ ಬರಬಹುದಾಗಿದೆ. ಆದರೆ ಉಮ್ಮತೀ ಆಗಿರುವವನು ಮಾತ್ರ.

**(ತಜಲ್ಲಿಯಾತೆ ಇಲಾಹಿಯ್ಯ; ರೂಹಾನೀ ಖಝಾಇನ್ ಸಂಪುಟ 20, ಪುಟ 411 – 412)**

سراج مُنیر

## ಗ್ರಂಥ: ಸಿರಾಜೆ ಮುನೀರ್

ನಮ್ಮ ಹೃದಯದ ಸ್ಥಿತಿ ಈಗ ವಿಸ್ಮಯಕರವಾಗಿದೆ. ದುಃಖವೂ ಇದೆ, ಸಂತೋಷವೂ ಇದೆ. ನೋವಿನ ಕಾರಣವೇನೆಂದರೆ, ಲೇಖ್‌ರಾಮ್ ತನ್ನ ವರ್ತನೆಯಿಂದ ಹಿಮ್ಮೆಟ್ಟುತ್ತಿದ್ದರೆ, ಕಡಿಮೆ ಪಕ್ಷ ಆತನು ಕೆಟ್ಟ ಭಾಷೆ ಪ್ರಯೋಗವನ್ನಾದರೂ ನಿಲ್ಲಿಸುತ್ತಿದ್ದರೆ, ಅಲ್ಲಾಹನಾಣೆ, ನಾನು ಆತನ ಪರವಾಗಿ ಪ್ರಾರ್ಥಿಸುತ್ತಿದ್ದೆ. ಆತನು ತುಂಡರಿಸಲ್ಪಟ್ಟಿದ್ದರೂ ಜೀವಂತನಾಗುತ್ತಿದ್ದನು ಎಂಬ ಪ್ರತೀಕ್ಷೆ ಇತ್ತು. ನನಗೆ ತಿಳಿದಿರುವ ದೇವನಿಗೆ ಅಸಾಧ್ಯವಾದುದು ಏನೂ ಇಲ್ಲ. ನನ್ನ ಸಂತೋಷದ ಕಾರಣವೇನೆಂದರೆ, ಈ ಭವಿಷ್ಯವಾಣಿ ಅತ್ಯಂತ ಸ್ಪಷ್ಟವಾಗಿ ಈಡೇರಿತು ಎಂಬುದಾಗಿದೆ.

**(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 28)**

ಬರಾಹೀನೆ ಅಹ್ಮದಿಯಾ ಪುಟ 238 – 239ರಲ್ಲಿ ಬರೆದ ಹನ್ನೆರಡನೆಯ ಭವಿಷ್ಯವಾಣಿ ಪವಿತ್ರ ಖುರ್‌ಆನಿನ ಜ್ಞಾನದ ಬಗ್ಗೆಯಾಗಿದೆ. ಈ ಭವಿಷ್ಯವಾಣಿಯ ಸಾರ ಹೀಗಿದೆ: "ನಿನಗೆ ಪವಿತ್ರ ಖುರ್‌ಆನಿನ ಜ್ಞಾನ ನೀಡಲಾಗುವುದು. ಅದು ಅಸತ್ಯವನ್ನು ನಿರ್ನಾಮ ಮಾಡುವುದು" ಎಂದು ಅಲ್ಲಾಹನು ಹೇಳುತ್ತಾನೆ. ಈ ಭವಿಷ್ಯವಾಣಿಯಲ್ಲಿ ಬಹಳ ಅನುಗ್ರಹ ನೀಡಲ್ಪಟ್ಟ ಇಬ್ಬರ ಬಗ್ಗೆ ಪ್ರಸ್ತಾಪಿಸಲಾಗಿದೆ. ಒಬ್ಬರು ಅಧ್ಯಾಪಕರಾದ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಇನ್ನೊಬ್ಬ ಈ ಪುಸ್ತಕ ಬರೆದ ಅವರ ವಿದ್ಯಾರ್ಥಿ.

ಇದು وَآخَرِينَ مِنْهُمْ لَمَّا يَلْحَقُوا بِهِمْ **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್** ಎಂಬ ಪವಿತ್ರ ಖುರ್‌ಆನಿನ ವಚನವನ್ನು ಸೂಚಿಸುತ್ತದೆ. ಎಂದರೆ "ಇಷ್ಟರ ತನಕ ಆಗಮಿಸದ ಈ ಪ್ರವಾದಿಯ ಶಿಷ್ಯ ಸಹ ಇದ್ದಾರೆ. ಅಂತಿಮ ಕಾಲಘಟ್ಟದಲ್ಲಿ ಅವರು ಆಗಮಿಸುವರು." **(62:4)**

ಈ ವಚನ ಈ ವಿನೀತನನ್ನು ಸೂಚಿಸುತ್ತದೆ. ಇಲ್‌ಹಾಮಿನಲ್ಲಿ ಪ್ರಸ್ತಾಪಿಸಿದ ಹಾಗೆ ಈ ವಿನೀತ ಆಧ್ಯಾತ್ಮಿಕವಾಗಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಿಷ್ಯರಲೊಬ್ಬನಾಗಿದ್ದಾನೆ. ಪವಿತ್ರ ಖುರ್‌ಆನಿನ ಜ್ಞಾನ ನೀಡಲ್ಪಡುವುದನ್ನು ಸೂಚಿಸುವ ಈ ಭವಿಷ್ಯವಾಣಿಯ ದೃಢೀಕರಣಕ್ಕಾಗಿ ಕರಾಮಾತುಸ್ಸಾದಿಖೀನ್ ಎಂಬ ಗ್ರಂಥ ಬರೆಯಲಾಗಿತ್ತು. ಆದರೆ ಅದರ ಕಡೆಗೆ ಯಾವ ಶತ್ರುವೂ ಗಮನಹರಿಸಲಿಲ್ಲ. ಪವಿತ್ರ ಖುರ್‌ಆನಿನ ಸೂಕ್ಷ್ಮ ಸತ್ಯಾಂಶ ಮತ್ತು ಜ್ಞಾನ ಮನವರಿಕೆ ಮಾಡಿಕೊಳ್ಳುವುದರಲ್ಲಿ ಇತರ ಎಲ್ಲರ ಮೇಲೆ ನನಗೆ

ಮೇಲುಗೈ ನೀಡಲಾಗಿದೆ ಎಂದು ನಾನು ಅಲ್ಲಾಹನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ. ಪವಿತ್ರ ಖುರ್‌ಆನಿನ ವ್ಯಾಖ್ಯಾನ ಬರೆಯಲಿಕ್ಕಾಗಿ ಮುಂದೆ ಬರಲು ನಾನು ಪದೇ ಪದೇ ಆಹ್ವಾನಿಸಿದಾಗ ಯಾರಾದರೂ ಮೌಲವಿ ಬರುತ್ತಿದ್ದರೆ ಅಲ್ಲಾಹನು ಆ ಮೌಲವಿಯನ್ನು ನಿಂದಿಸಿ ನಾಚಿಕೆ ಪಡುವಂತೆ ಮಾಡುತ್ತಿದ್ದನು. ಆದುದರಿಂದ ನನಗೆ ನೀಡಲ್ಪಟ್ಟ ಪವಿತ್ರ ಖುರ್‌ಆನಿನ ಜ್ಞಾನ ವೈಭವಶಾಲಿಯಾದ ಅಲ್ಲಾಹನ ಒಂದು ದೃಷ್ಟಾಂತವಾಗಿದೆ.

**(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 40 – 41)**

ಬರಾಹೀನೆ ಅಹ್ಮದಿಯಾ ಪುಟ 227ರಲ್ಲಿ ಒಬ್ಬ ಆರ್ಯ ಸಮಾಜಿಯ ಬಗ್ಗೆ ಭವಿಷ್ಯವಾಣಿ ಇದೆ. ಆತನ ಹೆಸರು ಮಲಾವಾಮಲ್ ಎಂದಾಗಿದೆ. ಆತನು ಈಗಲೂ ಇದ್ದಾನೆ. ಆತನು ಕ್ಷಯರೋಗ ಬಾಧಿತನಾಗಿದ್ದನು. ಆತನು ನನ್ನ ಬಳಿಗೆ ಬಂದು ತನ್ನ ಜೀವಿತದ ಬಗ್ಗೆ ನಿರಾಶೆ ಸೂಚಿಸಿ ಬಹಳ ದುಃಖದಿಂದ ಅತ್ತನು. ಅಂದು ಆತನು ಒಂದು ಭಯಾನಕ ಸ್ವಪ್ನ ಕಂಡಿದ್ದನು. ನನಗೆ ನೆನಪಿರುವ ಹಾಗೆ ಆತನು ಕಂಡ ಸ್ವಪ್ನ ಹೀಗಿದೆ: ವಿಷ ಹಾವೊಂದು ಆತನನ್ನು ಕಚ್ಚಿ ಆತನ ಶರೀರವಿಡೀ ವಿಷ ವ್ಯಾಪಿಸಿತು. ಈ ಸ್ವಪ್ನದಿಂದ ಆತನು ಬಹಳ ದುಃಖಿತನಾದನು. ಆಹಾರ ತಿಂದ ನಂತರ ಬರುತ್ತಿದ್ದ ಅಲ್ಪ ಜ್ವರದಿಂದ ಆತನು ಮೊದಲೇ ಗಾಬರಿಗೊಂಡಿದ್ದನು. ಆದ್ದರಿಂದ ಆತನು ಚಿಂತಿತನಾಗಿ ನಿರಾಶೆಯಿಂದ ನನ್ನ ಬಳಿಗೆ ಬಂದು ಗೋಳಿಟ್ಟನು. ನನ್ನ ಹೃದಯ ಕರಗಿ, ಇದಕ್ಕೆ ಮುಂಚೆ ಶರಮ್‌ಪತ್ ಎಂಬ ಆರ್ಯನಿಗಾಗಿ ಪ್ರಾರ್ಥಿಸಿದಂತೆ ಈತನ ಪರವಾಗಿ ಪ್ರಾರ್ಥಿಸಿದೆ. ಆಗ ಬರಾಹೀನೆ ಅಹ್ಮದಿಯಾ ಪುಟ 227ರಲ್ಲಿ ಬರೆಯಲಾಗಿರುವ **قُلْنَا يَا نَارُ كُونِي بَرْدًا وَّسَلَامًا ಖುಲ್‌ನಾ ಯಾನಾರು ಕೂನೀ ಬರ್‌ದನ್ ವ ಸಲಾಮನ್** ಎಂಬ ಇಲ್‌ಹಾಮ್ ಲಭಿಸಿತು ಎಂದರೆ, "ತಣ್ಣಗಾಗು ಮತ್ತು ಶಾಂತವಾಗು ಎಂದು ನಾವು ಜ್ವರದ ಅಗ್ನಿಗೆ ಹೇಳಿದೆವು." ಮಲಾವಾಮಲ್‌ಗೆ ಈ ಇಲ್‌ಹಾಮ್ ಬಗ್ಗೆ ತಿಳಿಸಲಾಯಿತು. ಆತನು ನನ್ನ ಪ್ರಾರ್ಥನೆಯ ಅನುಗ್ರಹದಿಂದ ಖಂಡಿತವಾಗಿಯೂ ಆರೋಗ್ಯವಂತ ನಾಗುವನೆಂದು ಬೇರೆ ಅನೇಕ ಜನರಿಗೂ ತಿಳಿಸಲಾಯಿತು. ಅಲ್ಲಾಹನ ಅನುಗ್ರಹದಿಂದ ಒಂದು ವಾರದೊಳಗೆ ಆತನು ಆರೋಗ್ಯವಂತನಾದನು.

ಈ ಘಟನೆ ಸಂಪೂರ್ಣ ಸತ್ಯವಾಗಿದೆ. ಇದರಲ್ಲಿ ಒಂದಿಷ್ಟು ಉತ್ಪ್ರೇಕ್ಷೆ ಇಲ್ಲವೆಂದು ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ.

**(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 62)**

ನಾವು ನ್ಯಾಯದ ದೃಷ್ಟಿಯಿಂದ ನೋಡುವುದಾದರೆ ಪ್ರವಾದಿಗಳಲ್ಲಿ ಉನ್ನತ ಶ್ರೇಣಿಯ ಶೂರ ಪ್ರವಾದಿ, ಜೀವಂತ ಪ್ರವಾದಿ, ಅಲ್ಲಾಹನ ದೃಷ್ಟಿಯಲ್ಲಿ ಉನ್ನತ ಪದವಿ ಪಡೆದ ಪ್ರಿಯ ಪ್ರವಾದಿಯಾಗಿ ಕೇವಲ ಒಬ್ಬರನ್ನು ಕಾಣುತ್ತೇವೆ. ಅವರು ಪ್ರವಾದಿಗಳ ನಾಯಕ, ಸಂದೇಶವಾಹಕರ ಅಭಿಮಾನ, ಎಲ್ಲ ಸಂದೇಶವಾಹಕರಲ್ಲಿ

ಶ್ರೇಷ್ಠ ಹಝ್ರತ್ ಮುಹಮ್ಮದ್ ಮುಸ್ತಫಾ ಅಹ್ಮದ್ ಮುಜ್ತಬಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದಾರೆ. ಅವರ ನೆರಳಿನಡಿಯಲ್ಲಿ ಹತ್ತು ದಿನಗಳ ಕಾಲ ನಡೆದರೆ ಲಭಿಸುವ ಪ್ರಕಾಶ ಅವರಿಗಿಂತ ಮುಂಚೆ ಸಾವಿರ ವರ್ಷಗಳಲ್ಲೂ ದೊರಕುತ್ತಿರಲಿಲ್ಲ. ಹಿಂದಿನ ಗ್ರಂಥಗಳು ತನ್ನನ್ನು ಅನುಸರಿಸುವವರನ್ನು ತಿರಸ್ಕೃತರೂ ಹೀನೈಸಲ್ಪಟ್ಟವರೂ ಇರುಳು ಹೃದಯ ಹೊಂದಿದವರನ್ನಾಗಿಯೂ ಮಾಡುತ್ತವೆ. ಯಾವುದರ ನೆರಳಿನಲ್ಲಿ ನಡೆದರೆ ನಾವು ನಿರ್ಜೀವವಾಗುತ್ತೇವೆಯೋ ಅವುಗಳನ್ನು ಜೀವಂತ ಪ್ರವಾದಿತ್ವ ಎಂದೆನ್ನಬೇಕೇ? ಅವುಗಳೆಲ್ಲವೂ ನಿರ್ಜೀವವಾಗಿವೆ ಎಂದು ನೀವು ಅರಿಯಿರಿ. ಮೃತನಿಗೆ ಮೃತನು ಪ್ರಕಾಶ ನೀಡಬಲ್ಲನೆ? ಯೇಸುವನ್ನು ಆರಾಧಿಸುವುದು ಒಂದು ವಿಗ್ರಹಾರಾಧನೆಯಾಗಿದೆ. ಅವರು ನನ್ನ ಕಾಲದಲ್ಲಿರುತ್ತಿದ್ದರೆ ವಿನಯಾನ್ವಿತರಾಗಿ ನನ್ನ ಬಗ್ಗೆ ಸಾಕ್ಷ್ಯ ನೀಡಬೇಕಾಗುತ್ತಿತ್ತು ಎಂದು ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಯಾರಾದರೂ ಇದನ್ನು ನಂಬಲಿ ಅಥವಾ ನಂಬದಿರಲಿ; ಇದು ಸತ್ಯವಾಗಿದೆ. ಸತ್ಯದಲ್ಲಿ ಅನುಗ್ರಹವಿದೆ. ಕೊನೆಗೆ ಅದರ ಪ್ರಕಾಶ ಲೋಕದ ಮೇಲೆ ಬೀರುತ್ತದೆ.

**(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 82)**

بركات الدّعا

## ಗ್ರಂಥ: ಬರಕಾತುದ್ದುಆ

ಈಗ ಕೇವಲ ಅಲ್ಲಾಹನಿಗೋಸ್ಕರ ನನ್ನ ಸ್ವಂತ ಅನುಭವದ ಸಾಕ್ಷ್ಯವನ್ನು ಸಯ್ಯಿದ್ (ಅಹ್ಮದ್ ಖಾನ್) ಸಾಹೇಬರ ಮುಂದೆ ಇರಿಸುತ್ತೇನೆ. ಪ್ರಾಯಶಃ ಅಲ್ಲಾಹನು ಅವರ ಮೇಲೆ ಆ ಮೂಲಕ ಕೃಪೆದೋರಬಹುದು. ನನ್ನ ಪ್ರಿಯ ಸಯ್ಯಿದ್ ಸಾಹೇಬರೇ, ಪ್ರತಾಪವಂತನಾದ ಅಲ್ಲಾಹನಾಣೆ, ಸೂರ್ಯನ ಕಿರಣಗಳು ಗೋಡೆಯ ಮೇಲೆ ಬೀಳುವಂತೆ ಅಲ್ಲಾಹನ ಸಂದೇಶವಾಣಿ ಆಕಾಶದಿಂದ ಹೃದಯಕ್ಕೆ ಪ್ರವೇಶಿಸುತ್ತದೆ ಎಂಬುದು ನಿಶ್ಚಯವಾಗಿಯೂ ಸತ್ಯವಾಗಿದೆ. ಅಲ್ಲಾಹನಿಂದ ಸಂದೇಶವಾಣಿ ದೊರಕುವ ಸಮಯ ಸನ್ನಿಹಿತವಾದಾಗ ನನ್ನಲ್ಲಿ ಮೊದಲು ಹಠಾತ್ತಾಗಿ ಒಂದು ಪರಿವರ್ತನೆ ಸಂಭವಿಸುತ್ತದೆ ಎಂಬುದನ್ನು ನಾನು ಪ್ರತಿದಿನ ನೋಡುತ್ತೇನೆ. ಆಗ ನಾನು ಬದಲಾಯಿಸಲ್ಪಟ್ಟ ಅಸ್ತಿತ್ವವಾಗುತ್ತೇನೆ. ನನ್ನ ಇಂದ್ರಿಯ, ಗ್ರಹಣಶಕ್ತಿ ಮತ್ತು ಪ್ರಜ್ಞೆ ಪ್ರತ್ಯಕ್ಷದಲ್ಲಿ ಬಾಕಿಯಾಗಿ ಉಳಿದರೂ ಬಹಳ ಶಕ್ತಿಶಾಲಿಯಾದ ಒಂದು ಅಸ್ತಿತ್ವ ನನ್ನನ್ನು ಸಂಪೂರ್ಣವಾಗಿ ತನ್ನ ಮುಷ್ಟಿಯಲ್ಲಿ ಹಿಡಿದಂತೆ ಭಾಸವಾಗುತ್ತದೆ. ಆಗ ನನ್ನ ಶರೀರದ ಎಲ್ಲ ನರಗಳು ಅವನ ಹಿಡಿತದಲ್ಲಿದ್ದು ನನ್ನದೆಲ್ಲವೂ ಆಗ ನನ್ನದಲ್ಲ, ಅವನದೆಂಬ ಅನುಭವ ಉಂಟಾಗುತ್ತದೆ.

**(ಬರಕಾತುದ್ದುಆ; ರೂಹಾನೀ ಖಝಾಇನ್ ಸಂಪುಟ 6, ಪುಟ 22)**

ಕೊನೆಯದಾಗಿ, ಇಸ್ಲಾಮಿಗಾಗಿ ಎದ್ದೇಳಿರಿ ಎಂದು ನಾನು ಪ್ರತಿಯೊಬ್ಬ ಮುಸ್ಲಿಮನನ್ನು ಉಪದೇಶಿಸುತ್ತೇನೆ. ಇಸ್ಲಾಮ್ ಅತೀವ ದುಃಸ್ಥಿತಿಯಲ್ಲಿದೆ. ಅದು ಸಂಕಷ್ಟದಲ್ಲಿರುವ ಕಾರಣ ಅದರ ನೆರವಿಗೆ ಬನ್ನಿರಿ. ನಾನು ಅದಕ್ಕೋಸ್ಕರ ಆಗಮಿಸಿರುವೆನು. ದೇವನು ನನಗೆ ಪವಿತ್ರ ಖುರ್‌ಆನಿನ ಜ್ಞಾನ ನೀಡಿರುವನು. ಅವನು ತನ್ನ ಗ್ರಂಥದ ಸೂಕ್ಷ್ಮ ಜ್ಞಾನವನ್ನು ನನಗೆ ಪ್ರಕಟಿಸಿರುವನು. ನನಗೆ ಅಸಾಧಾರಣ ಅನುಗ್ರಹ ನೀಡಲಾಗಿದೆ. ಈ ಅನುಗ್ರಹದಿಂದ ನೀವೂ ಪಾಲು ಪಡೆಯಲು ನನ್ನ ಕಡೆಗೆ ಬನ್ನಿರಿ. ನಾನು ಅಲ್ಲಾಹನಿಂದ ಕಳುಹಿಸಲ್ಪಟ್ಟಿರುವೆನು ಎಂದು ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಹೇಳುತ್ತೇನೆ. ಸ್ಪಷ್ಟವಾದ ವಿಪತ್ತುಗಳು ಬಂದೆರಗಿರುವ ಈ ಬೃಹತ್ ಸಂಕಟದ ಶತಮಾನದ ಆದಿ ಭಾಗದಲ್ಲಿ ಒಬ್ಬ ಮುಜದ್ದಿದ್ ಸ್ಪಷ್ಟವಾದ ವಾದಗಳೊಂದಿಗೆ ಆಗಮಿಸುವುದು ಆವಶ್ಯಕವಾಗಿರಲಿಲ್ಲವೇ? ನೀವು ಬೇಗನೆ ನಾನು ಮಾಡುವ ಕೆಲಸಗಳ ಮೂಲಕ ನನ್ನನ್ನು ಗುರುತಿಸುವಿರಿ.

**(ಬರಕಾತುದ್ದುಆ; ರೂಹಾನೀ ಖಝಾಇನ್ ಸಂಪುಟ 6, ಪುಟ 36)**

دافع البلاء

## ದಾಫಿಉಲ್ ಬಲಾ

ಮೌಲವಿ ಅಹ್ಮದ್ ಹಸನರು ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಈ ಒಂದು ಕರಪತ್ರವನ್ನು ಪ್ರಕಟಿಸಿದ ನಂತರ ಅಮ್ರೋಹ ಪಟ್ಟಣವನ್ನು ಪ್ಲೇಗಿನಿಂದ ರಕ್ಷಿಸಲು ಸಾಧ್ಯವಾದರೆ ಮತ್ತು ಕನಿಷ್ಠ ಪಕ್ಷ ಮೂರು ಚಳಿಗಾಲಗಳು ನೆಮ್ಮದಿಯಿಂದ ದಾಟಿಹೋದರೆ ನಾನು ದೇವನ ಕಡೆಯಿಂದ ಆಗಮಿಸಿರುವವನಲ್ಲ. ಇದಕ್ಕಿಂತ ಮಿಗಿಲಾದ ತೀರ್ಮಾನ ವಿಧಾನ ಬೇರೆ ಏನಿದೆ. ನಾನು ಮಸೀಹ್ ಮೌಊದ್ ಆಗಿರುವೆನು ಮತ್ತು ಪ್ರವಾದಿಗಳು ಯಾರ ಬಗ್ಗೆ ವಾಗ್ದಾನ ನೀಡಿದ್ದರೋ ಆ ವ್ಯಕ್ತಿ ನಾನಾಗಿರುವೆನು ಎಂದು ನಾನು ದೇವನ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ಆಕಾಶದಲ್ಲಿ ಸೂರ್ಯ – ಚಂದ್ರ ಗ್ರಹಣಗಳು ಸಂಭವಿಸುವುವು ಮತ್ತು ಭೂಮಿಯಲ್ಲಿ ಪ್ಲೇಗ್ ರೋಗ ತೀವ್ರವಾಗಿ ಹಬ್ಬುವುದು ಎಂಬುದಾಗಿ ನನ್ನ ಬಗ್ಗೆ ಮತ್ತು ನನ್ನ ಕಾಲಘಟ್ಟದ ಬಗ್ಗೆ ತೌರಾತ್, ಇಂಜೀಲ್ ಮತ್ತು ಪವಿತ್ರ ಖುರ್‌ಆನಿನಲ್ಲಿ ಭವಿಷ್ಯವಾಣಿಗಳು ಇವೆ. ಇವುಗಳೇ ನನ್ನ ಬಗ್ಗೆ ಇರುವ ಚಿಹ್ನೆಗಳು.

**(ದಾಫಿಉಲ್ ಬಲಾ; ರೂಹಾನೀ ಖಝಾಇನ್ ಸಂಪುಟ 18, ಪುಟ 238**

سناتن دھرم

## ಗ್ರಂಥ: ಸನಾತನ ಧರ್ಮ

ದೇವನ ವಚನಗಳನ್ನು ಮನವರಿಕೆ ಮಾಡಲು ಮೊತ್ತಮೊದಲು ಹೃದಯವನ್ನು ಇಂದ್ರಿಯಾಸಕ್ತಿಗಳಿಂದ ಮುಕ್ತವನ್ನಾಗಿಯೂ ಪರಿಶುದ್ಧವನ್ನಾಗಿಯೂ ಮಾಡಬೇಕು. ಇದೇ ಸತ್ಯವೆಂದು ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಆಗ ದೇವನ ಕಡೆಯಿಂದ ಹೃದಯದೊಳಗೆ ಪ್ರಕಾಶ ಪ್ರವೇಶಿಸುವುದು. ಆಂತರಿಕ ಪ್ರಕಾಶವಿಲ್ಲದೆ ಮೂಲ ಸತ್ಯ ಕಾಣಲು ಸಾಧ್ಯವಾಗದು. ಇದರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: لَا يَمَسُّهُ إِلَّا الْمُطَهَّرُونَ **ಲಾ ಯಮಸ್ಸಹೂ ಇಲ್ಲಲ್ ಮುತಹ್ಹರೂನ್** ಎಂದರೆ "ಇದು ಪರಿಶುದ್ಧನ ವಚನವಾಗಿದೆ. ಪರಿಶುದ್ಧರಾಗುವ ವರೆಗೆ ಅದರ ರಹಸ್ಯಗಳನ್ನು ಅರಿಯಲಾಗದು." **(56:80)**

**(ಸನಾತನ ಧರ್ಮ; ರೂಹಾನೀ ಖಝಾಇನ್ ಸಂಪುಟ 19, ಪುಟ 473 – 474)**

اربعین

## ಗ್ರಂಥ: ಅರ್‌ಬಈನ್

ಜ್ಞಾನ ಸಂಬಂಧವಾದ ದೃಷ್ಟಾಂತಕ್ಕೆ ಸಂಬಂಧಿಸಿ ಅವಿವೇಕಿಗಳಾದ ಜನರು ಪೀರ್ ಮಹರ್ ಅಲಿಶಾ ಗೋಲ್ಡವಿಯ ಹುಸಿ ವಿಜಯದ ನಗಾರಿ ಬಾರಿಸುತ್ತಿದ್ದಾರೆ ಎಂಬುದು ದುಃಖಕರ. ನನ್ನನ್ನು ಕೊಳಕು ಭಾಷೆ ಬಳಸಿ ದೂಷಿಸಿ ನಾನು ಗೋಲ್ಡವಿಯ ಎದುರಿಗೆ ಅಜ್ಞಾನಿ ಎಂದೂ ಅವಿವೇಕಿ ಎಂದೂ ಸಾರಿದರು. ನಾನು ಅವರ ಅಸಾಮಾನ್ಯ ಪ್ರತಿಭೆ ಮತ್ತು ವಿಶಿಷ್ಟವಾದ ಸಾಮರ್ಥ್ಯದ ಗಾಂಭೀರ್ಯಕ್ಕೆ ಭಯಪಟ್ಟೆನು ಎಂದು ಭಾವಿಸುತ್ತಾರೆ. ಗೋಲ್ಡವಿ ಅರಬಿ ಭಾಷೆಯಲ್ಲಿ ತಫ್‌ಸೀರ್ ಬರೆಯಲು ಸಿದ್ಧರಾಗಿ ಲಾಹೋರಿಗೆ ಆಗಮಿಸಿದ್ದರೆಂದೂ ನಾನು ಅವರ ಪ್ರತಾಪ ಮತ್ತು ಜ್ಞಾನ ಮಹಿಮೆಯಿಂದ ಓಡಿ ಹೋದೆನೆಂದೂ ಹೇಳುತ್ತಾರೆ. ಆಕಾಶ ಸುಳ್ಳು ಹೇಳುವವರ ಮೇಲೆ ಶಾಪ ಹಾಕಲಿ. ಆಮೀನ್.

ಓದುಗರೇ, ಸುಳ್ಳುಗಾರನನ್ನು ಅವಮಾನಿತನನ್ನಾಗಿ ಮಾಡಲು ಈ ದಿನ 1900 ಡಿಸೆಂಬರ್ ದಿನಾಂಕ 7 ಶುಕ್ರವಾರ ದೇವನು ನನ್ನ ಹೃದಯದಲ್ಲಿ ಒಂದು ಸಂಗತಿ ಹಾಕಿರುವನು. ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಅವನ ನರಕವು ಸುಳ್ಳು ಹೇಳುವವರಿಗೋಸ್ಕರ ಪ್ರಜ್ವಲಿಸುತ್ತದೆ. ಅವರು ನನ್ನನ್ನು ಸುಳ್ಳಾಗಿಸುವುದನ್ನು ನೋಡಿ ಸ್ವತಃ ಈ ಅಸಾಧಾರಣ ಸ್ಪರ್ಧೆಗೆ ಗೋಲ್ಡವಿಯನ್ನು ಆಹ್ವಾನಿಸಿದ್ದೆನು. ನನ್ನ ಮೂಲದ್ದೇಶವನ್ನು ರದ್ದುಗೊಳಿಸುವಂತಹ ಶರತ್ತುಗಳನ್ನು ಗೋಲ್ಡವಿ ಮುಂದಿರಿಸದಿರುತ್ತಿದ್ದರೆ ನಾನು ಖಾದಿಯಾನ್ ಮತ್ತು ಲಾಹೋರಿನ ಮಧ್ಯೆ ಹಿಮಗಡ್ಡೆಗಳ ಪರ್ವತವಿದ್ದು ಚಳಿಗಾಲದ ದಿನಗಳಾಗಿದ್ದರೂ ನಾನು ಲಾಹೋರಿಗೆ ತಲಪುತ್ತಿದ್ದೆನು ಮತ್ತು ದೈವಿಕ ದೃಷ್ಟಾಂತವೆಂದು ಯಾವುದಕ್ಕೆ ಹೇಳಲಾಗುತ್ತದೆ ಎಂದು ತೋರಿಸಿಕೊಡುತ್ತಿದ್ದೆನು.

**(ಅರ್‌ಬಈನ್; ರೂಹಾನೀ ಖಝಾಇನ್ ಸಂಪುಟ 17, ಪುಟ 448 – 449)**

ضمیمہ رسالہ انجام آتھم

## ಗ್ರಂಥ: ಅಂಜಾಮೆ ಆಥಮ್ (ಅನುಬಂಧ)

ದೇವನು ನನ್ನನ್ನು ಸುಳ್ಳು ಸೃಜಿಸುವವನನ್ನು ನಾಶಮಾಡುವ ಹಾಗೆ ನಾಶಮಾಡಲಿಲ್ಲ ಎನ್ನುವುದು ಭಯಭಕ್ತಿ ಹೊಂದಿದವನಿಗೆ ಸಾಕಷ್ಟು ಸಾಕ್ಷ್ಯಧಾರವಾಗಿದೆ. ನನ್ನ ಬಾಹ್ಯ, ನನ್ನ ಆಂತರಿಕ, ನನ್ನ ಶರೀರ ಮತ್ತು ನನ್ನ ಆತ್ಮದ ಮೇಲೆ ಅಲ್ಲಾಹನು ಎಣಿಸಲಾಗದಷ್ಟು ಔದಾರ್ಯ ತೋರಿಸಿರುವನು. ಅಲ್ಲಾಹನಿಂದ ವಹೀ ಮತ್ತು ಇಲ್‌ಹಾಮ್ ನನಗೆ ಲಭಿಸುವುದಾಗಿ ವಾದಿಸಿದಾಗ ನಾನು ತರುಣನಾಗಿದ್ದೆ. ಈಗ ವೃದ್ಧನಾಗಿರುವೆನು. ನನ್ನ ವಾದದ ಆರಂಭ ಕಾಲ ದಾಟಿಹೋಗಿ ಇಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿದೆ. ನನಗಿಂತ ಕಿರಿಯರಾದ ನನ್ನ ಅನೇಕ ಸಂಬಂಧಿಕರು ಮತ್ತು ಸ್ನೇಹಿತರು ಮೃತರಾಗಿರುವರು. ಅಲ್ಲಾಹನು ನನಗೆ ದೀರ್ಘಾಯುಸ್ಸನ್ನು ದಯಪಾಲಿಸಿ ಪ್ರತಿಯೊಂದು ಸಂಕಷ್ಟದಲ್ಲಿ ಅವನು ನನ್ನ ರಕ್ಷಕನಾದನು. ದೇವನ ಮೇಲೆ ಸುಳ್ಳು ಸೃಜಿಸುವವರ ಸ್ಥಿತಿ ಹೀಗೆಯೇ ಆಗುತ್ತದೆಯೋ? ಈಗಲೂ ಮೌಲವಿಗಳು ನನ್ನನ್ನು ಸುಳ್ಳುಗಾರನೆಂದು ಹೇಳುವರಾದರೆ ಇನ್ನೊಂದು ತೀರ್ಮಾನದ ವಿಧಾನವಿದೆ. ನಾನು ಪ್ರಕಟಿಸಿದ ಇಲ್‌ಹಾಮ್‌ಗಳನ್ನು ತೆಗೆದುಕೊಂಡು ಮೌಲವಿಗಳ ವಿರುದ್ಧ ಮುಬಾಹಲ (ಪ್ರಾರ್ಥನಾ ಸಮರ) ನಡೆಸುವೆನು.

ನನಗೆ ಸತ್ಯವಾಗಿಯೂ ಅವನಿಂದ ಸಂದೇಶವಾಣಿ ಗಳಿಸುವ ಭಾಗ್ಯ ಲಭಿಸಿದೆ ಎಂದು ನಾನು ದೇವನ ಮೇಲೆ ಆಣೆ ಹಾಕಿ ಪ್ರಮಾಣ ಮಾಡುವೆನು. ಇಸ್ಲಾಮ್ ವಿರುದ್ಧ ಮಾಡಲಾಗುವ ಎಲ್ಲ ಪಿತೂರಿಗಳನ್ನು ದೂರಸರಿಸಲು ಅವನು ಹಿಜರಿ ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ನನ್ನನ್ನು ಕಳುಹಿಸಿರುವನು. ಅಲ್ಲಾಹನೇ ನನ್ನ ಹೆಸರು ಈಸಾ ಎಂದು ಇರಿಸಿ ಶಿಲುಬೆಯನ್ನು ಮುರಿದು ಹಾಕಲು ನನ್ನನ್ನು ನಿಯೋಜಿಸಿರುವನು. ಆದರೆ ಯಾವುದೇ ಲೌಕಿಕ ಆಯುಧದಿಂದಲ್ಲ.

**(ಅಂಜಾಮೆ ಆಥಮ್; ರೂಹಾನೀ ಖಝಾಇನ್ ಸಂಪುಟ 11, ಪುಟ 50 – 51)**

ನಮ್ಮ ವಿರೋಧಿಗಳು ಈಡಾಗಿರುವಂತಹ ಸಂಕಷ್ಟಗಳಿಂದ ನಮ್ಮನ್ನು ರಕ್ಷಿಸಿರುವುದು ದೇವನ ಅನುಗ್ರಹ ಮತ್ತು ಕಾರುಣ್ಯವಾಗಿದೆ. ಮುಬಾಹಲಕ್ಕೆ ಮುಂಚೆ ಅಲ್ಲಾಹನು ಯಾವಾಗಲೂ ನನ್ನ ಸಂರಕ್ಷನಾಗಿದ್ದರೂ ಮುಬಾಹಲದ ನಂತರ ಲಭಿಸಿದ ಅನುಗ್ರಹಗಳಿಗೆ ಸಮಾನವಾದದ್ದು ಮುಂಚಿನ ಜೀವಿತ ಕಾಲದಲ್ಲಿ ಕಂಡಿರಲಿಲ್ಲ ಎಂದು ನಾನು ಸಹಭಾಗಿ ಇಲ್ಲದ ಏಕದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ.

**(ಅಂಜಾಮೆ ಆಥಮ್; ರೂಹಾನೀ ಖಝಾಇನ್ ಸಂಪುಟ 11, ಪುಟ 314)**

.................. ಈ ಸಂಗತಿಗಳಲ್ಲಿ ಯಾವುದನ್ನೂ ಮಾಡಲು ಸಿದ್ಧರಲ್ಲವಾದರೆ ನಿಷೇಧ, ಸುಳ್ಳಾಗಿಸುವುದು ಮತ್ತು ಬೈಗುಳಗಳನ್ನು ಕೊನೆಗೊಳಿಸುವುದಾಗಿಯೂ ಪ್ರತಿಯೊಬ್ಬರೊಂದಿಗೆ ಪ್ರೀತಿಯಿಂದ ಮತ್ತು ಆದರದಿಂದ ಭೇಟಿಯಾಗುವಿರಿ ಎಂದೂ ದೇವನ ಶಿಕ್ಷೆಗೆ ಭಯಪಟ್ಟುಕೊಂಡು ಇಸ್ಲಾಮಿಕ ರೀತಿಯಲ್ಲಿ ವರ್ತಿಸುವಿರಿ ಎಂದೂ ಎಲ್ಲ ವಿಧಗಳ ಉದ್ಧಟ ಮತ್ತು ಕೊಳಕು ವರ್ತನೆಗಳಿಂದ ಉಪೇಕ್ಷಿಸುವಿರಿ ಎಂದೂ ನನ್ನೊಂದಿಗೆ ಮತ್ತು ಜಮಾಅತಿನೊಂದಿಗೆ ಏಳು ವರ್ಷಗಳ ಕಾಲ ಮೈತ್ರಿಸಂಧಾನ ಸ್ಥಾಪಿಸಲಿ. ಈ ಏಳು ವರ್ಷಗಳಲ್ಲಿ ನನ್ನ ಕಡೆಯಿಂದ ದೇವನ ಸಹಾಯದ ಫಲವಾಗಿ ಇಸ್ಲಾಮಿನ ಸೇವೆಗಾಗಿ ಸ್ಪಷ್ಟವಾದ ಚಿಹ್ನೆಗಳು ಪ್ರಕಟವಾಗದಿದ್ದರೆ, ಮಸೀಹರ ಕೈಯಿಂದ ಮಿಥ್ಯಧರ್ಮಗಳು ನಾಶವಾಗುವುದು ಎಂದು ವಿಧಿಸಲ್ಪಟ್ಟ ರೀತಿಯಲ್ಲಿ ನನ್ನ ಕೈಯಿಂದ ಅವುಗಳು ಮೃತವಾಗದಿದ್ದರೆ, ಎಂದರೆ ಇಸ್ಲಾಮಿಗೆ ಮೇಲುಗೈ ಉಂಟಾಗಿ ಎಲ್ಲ ಕಡೆಯಿಂದ ಜನರು ಇಸ್ಲಾಮಿಗೆ ಪ್ರವೇಶಿಸಲು ಶುರುವಾಗುವಂತಹ ದೃಷ್ಟಾಂತ ದೇವನು ನನ್ನ ಕೈಯಿಂದ ಪ್ರಕಟಿಸದಿದ್ದರೆ, ಕ್ರೈಸ್ತಧರ್ಮದ ಮಿಥ್ಯದೇವ ನಾಶವಾಗಿ ಲೋಕ ಬೇರೊಂದು ರೂಪಕ್ಕೆ ಬರದಿದ್ದರೆ ನಾನು ಸುಳ್ಳುಗಾರನೆಂದು ನನ್ನನ್ನು ಭಾವಿಸುವೆನು ಎಂದು ನಾನು ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ನಾನು ಖಂಡಿತವಾಗಿ ಸುಳ್ಳುಗಾರನಲ್ಲ ಎಂದು ದೇವನು ಬಲ್ಲನು.

**(ಅಂಜಾಮೆ ಆಥಮ್; ರೂಹಾನೀ ಖ಼ಝಾಇನ್ ಸಂಪುಟ 11, ಪುಟ 311 – 319)**

ತಮ್ಮ ಉದ್ಧಟತನ, ಕೊಳಕು ವರ್ತನೆ, ನಿರಾಕರಣೆ, ಬೈಗುಳಗಳಿಗೆ ಒತ್ತುಕೊಡುವ ಅಬ್ದುಲ್ ಹಖ್ ಗಝ್ನವಿ ಮತ್ತು ಅಬ್ದುಲ್ ಜಬ್ಬಾರ್ ತಮ್ಮ ದಿವಂಗತ ಹಿರಿಯರ ಮಾತುಗಳ ಬಗ್ಗೆ ವಿಚಾರಣೆ ನಡೆಸಲಿ. ಅವರ ಇಚ್ಛೆಗಳನ್ನು ತಿರಸ್ಕರಿಸಿ ಅವರಿಗೂ ಅವಿಧೇಯರಾಗದಿರಲಿ. ಹಿರಿಯ ಮೌಲವಿ ಅಬ್ದುಲ್ಲಾ ಗಝ್ನವಿ ತನ್ನ ಜೀವಿತ ಕಾಲದಲ್ಲಿ ನನಗೆ ಎರಡು ಪತ್ರಗಳನ್ನು ಬರೆದಿದ್ದರು. ಅವರು ಅವುಗಳಲ್ಲಿ ಪವಿತ್ರ ಖುರ್‌ಆನಿನ ವಚನಗಳ ಇಲ್‌ಹಾಮ್‌ಗಳೊಂದಿಗೆ ಅವಿಶ್ವಾಸಿಗಳ ಮೇಲೆ ನನ್ನ ವಿಜಯದ ಶುಭವಾರ್ತೆ ನೀಡಿದ್ದರು. ಅವರ ನಿಧನದ ನಂತರ ನನ್ನ ವಾದವನ್ನು ಅವರು ದೃಢೀಕರಿಸುತ್ತಿರುವುದಾಗಿ ನಾನು ದಿವ್ಯದರ್ಶನದಲ್ಲಿ ಕಂಡೆನು. ಅವರು ನನ್ನ ವಾದವನ್ನು ಪ್ರಮಾಣೀಕರಿಸಿದರು ಎಂದು ನಾನು ವೈಭವಶಾಲಿಯಾದ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಅವರು ಸ್ಪಷ್ಟವಾಗಿ ಹೀಗೆ ಹೇಳಿದರು: “ನನ್ನ ಜೀವಿತದಲ್ಲೇ ಇಂತಹ ವ್ಯಕ್ತಿ ದೇವನ ಕಡೆಯಿಂದ ಪ್ರಕಟವಾಗುವನು ಎಂದು ಪ್ರತೀಕ್ಷೆ ಹೊಂದಿದ್ದೆನು.” ಇವು ಅವರ ಮಾತುಗಳಾಗಿವೆ. **ولعنة الله على الكاذبين ಲಅನತುಲ್ಲಾಹಿ ಅಲಲ್ ಕಾಧಿಬೀನ್.** ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬಂದೆರಗಲಿ.

**(ಅಂಜಾಮೆ ಆಥಮ್; ರೂಹಾನೀ ಖ಼ಝಾಇನ್ ಸಂಪುಟ 11, ಪುಟ 343)**

آسمانی فیصلہ

## ಗ್ರಂಥ: ಆಸ್ಮಾನೀ ಫೈಸಲ

ಮಿಯಾಂ ನಝೀರ್ ಹುಸೈನ್ ಭಯಭಕ್ತಿ ಮತ್ತು ಪ್ರಾಮಾಣಿಕತೆಯನ್ನು ಸಂಪೂರ್ಣವಾಗಿ ತ್ಯಜಿಸಿರುವರು ಎಂಬುದು ಸ್ಪಷ್ಟ. ನಾನು ದೆಹಲಿಯಲ್ಲಿ ಮೂರು ಕರಪತ್ರಗಳನ್ನು ಪ್ರಕಟಿಸಿದ್ದೆನು. ನಾನು ಮುಸ್ಲಿಮನಾಗಿದ್ದೇನೆ ಮತ್ತು ಇಸ್ಲಾಮಿನ ಅಧ್ಯಾಪನೆಗಳನ್ನು ಅನುಸರಿಸುವವನಾಗಿದ್ದೇನೆ ಎಂದು ಅವುಗಳಲ್ಲಿ ಪದೇ ಪದೇ ವ್ಯಕ್ತಪಡಿಸಿದ್ದೆ. ಮಾತ್ರವಲ್ಲ, ನನ್ನ ಯಾವುದೇ ಬರಹ ಅಥವಾ ಭಾಷಣದಲ್ಲಿ ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ಏನೂ ಇಲ್ಲ, ಆಕ್ಷೇಪಿಸುವವರು ತಪ್ಪುಗ್ರಹಿಕೆಗೆ ಗುರಿಯಾಗಿದ್ದಾರೆ, ನಾನು ಇಸ್ಲಾಮಿಕ ನಂಬಿಕೆಗಳನ್ನು ಹೃತ್ಪೂರ್ವಕವಾಗಿ ನಂಬುತ್ತೇನೆ ಮತ್ತು ಇಸ್ಲಾಮಿಗೆ ವಿರುದ್ಧವಾದ ವಿಶ್ವಾಸಗಳನ್ನು ನಿರಾಕರಿಸುತ್ತೇನೆ ಎಂದು ವೈಭವಶಾಲಿಯಾದ ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಸಂದೇಶ ತಲಪಿಸಿದ್ದೆ.

**(ಆಸ್ಮಾನೀ ಫೈಸಲ; ರೂಹಾನೀ ಖಝಾಇನ್ ಸಂಪುಟ 4, ಪುಟ 312)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ವಿರೋಧಿಗಳಾದ ಎಲ್ಲ ಸೂಫೀಗಳನ್ನೂ ಪೀರ್‌ಝಾದರನ್ನೂ ದರ್ಗಗಳ ಮೇಲ್ವಿಚಾರಕರನ್ನೂ ಮೌಲವಿಗಳನ್ನೂ ಈ ಆಧ್ಯಾತ್ಮಿಕ ಹೋರಾಟಕ್ಕೆ ಆಹ್ವಾನಿಸಿದರು ಮತ್ತು ಹೀಗೆ ಹೇಳಿದರು:

ನಾನು ಈ ಆಧ್ಯಾತ್ಮಿಕ ಹೋರಾಟದಲ್ಲಿ ಪರಾಜಿತನಾದರೆ ನಾನು ತಪ್ಪು ದಾರಿಯಲ್ಲಿರುವುದರ ಒಪ್ಪಿಗೆಯನ್ನು ಸ್ವತಃ ಪ್ರಕಟಿಸುವೆನು ಎಂದು ನಾನು ವೈಭವಶಾಲಿಯಾದ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ..... ನಾನು ದೇವನ ಕಡೆಯಿಂದ ಆಗಮಿಸಿದವನಲ್ಲ ಮತ್ತು ನನ್ನ ಎಲ್ಲ ವಾದಗಳು ಮಿಥ್ಯ ಎಂದು ಸಹ ಇದೇ ಸಮ್ಮೇಳನದಲ್ಲಿ ಪ್ರಕಟಿಸುವೆನು.

ದೇವನಾಣೆ, ನನ್ನ ದೇವನು ಖಂಡಿತವಾಗಿಯೂ ಹೀಗೆ ಮಾಡಲಿಕ್ಕಿಲ್ಲ ಮತ್ತು ನನ್ನನ್ನು ನಾಶವಾಗಲು ಬಿಡಲಾರನೆಂದು ನಾನು ದೃಢವಾಗಿ ನಂಬುತ್ತೇನೆ.

**(ಆಸ್ಮಾನೀ ಫೈಸಲ; ರೂಹಾನೀ ಖಝಾಇನ್ ಸಂಪುಟ 4, ಪುಟ 330)**

حمامة البشرىٰ

## ಹಮಾಮತುಲ್ ಬುಶ್ರಾ

وإن إمامی سید الرسل أحمدُ

**ವ ಇನ್ನ ಇಮಾಮಿ ಸಯ್ಯಿದಿರ್ರುಸುಲಿ ಅಹ್ಮದ್**

ನಿಶ್ಚಯವಾಗಿಯೂ ನನ್ನ ನೇತಾರ ಎಲ್ಲ

ಸಂದೇಶವಾಹಕರ ಸರದಾರ ಅಹ್ಮದ್(ಸ) ಆಗಿದ್ದಾರೆ.

رضيناه متبوعا وربّی ينظُرُ

**ರಝೀನಾ ಮತ್‌ಬೂಅನ್ ವ ರಬ್ಬೀ ಯನ್‌ಝುರು.**

ಅವರನ್ನು ಅನುಸರಿಸುವುದರಲ್ಲಿ ನಾನು ತೃಪ್ತನಾಗಿದ್ದೇನೆ

ಎಂಬುದಕ್ಕೆ ನನ್ನ ಪ್ರಭು ಸಾಕ್ಷಿಯಾಗಿದ್ದಾನೆ.

وواللہ إنی قد تبِعتُ محمّدًا

**ವ ವಲ್ಲಾಹಿ ಇನ್ನೀ ಖದ್ ತಬಿಅ್‌ತು ಮುಹಮ್ಮದನ್.**

ಅಲ್ಲಾಹನಾಣೆ, ನಾನು ಮುಹಮ್ಮದ್ ರಸೂಲುಲ್ಲಾಹು

ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುತ್ತಿದ್ದೇನೆ.

وفی کل آن مِن سناه أُنوَّرُ

**ವಫೀ ಕುಲ್ಲಿ ಆನಿನ್ ಮಿನ್ ಸನಾಹು ಉನವ್ವರು.**

ಪ್ರತಿಕ್ಷಣ ನಾನು ಅವರಿಂದ ಪ್ರಕಾಶ ಗಳಿಸುತ್ತಿರುವೆನು.

**(ಹಮಾಮತುಲ್ ಬುಶ್‌ರಾ; ರೂಹಾನೀ ಖಝಾಇನ್ ಸಂಪುಟ 7, ಪುಟ 331 – 332)**

سرمہ چشمہ آریہ

## ಸುರ್ಮ ಚಶ್ಮ ಆರ್ಯ

ನಾವು ಅನಾವಶ್ಯಕ ಕಾರ್ಯಗಳಲ್ಲಿ ಸಮಯ ವ್ಯರ್ಥಮಾಡದೆ ಸತ್ಯವಾಗಿ ಹೇಳುತ್ತೇವೆ: ಪವಿತ್ರ ಖುರ್‌ಆನಿನ ಹತ್ತು ಪುಟಗಳಲ್ಲಿ ಏಕದೇವ ವಿಶ್ವಾಸದ ಜ್ಞಾನ ಸೂರ್ಯನ ಹಾಗೆ ಪ್ರಕಟವಾಗುವ ರೀತಿಯಲ್ಲಿ ವೇದಗಳ ಸಾವಿರ ಪುಟಗಳಿಂದ ಕೂಡ ತೋರಿಸಲು ಯಾರಿಗಾದರೂ ಸಾಧ್ಯವಾದರೆ, ವೇದದಲ್ಲಿ ಏಕದೇವ ವಿಶ್ವಾಸದ ಬಗ್ಗೆ ಪ್ರಸ್ತಾಪಗಳಿವೆ ಎಂದು ನಾವು ಒಪ್ಪಿಕೊಳ್ಳುವೆವು.

ಯಾರು ಬೇಕಾದರೂ ನಮ್ಮೊಂದಿಗೆ ಶರತ್ತು ಎಂಬ ರೀತಿಯಲ್ಲಿ ಇದಕ್ಕಾಗಿ ತಮ್ಮಿಂದಾಗುವಷ್ಟು ಬೆಲೆ ನಿಶ್ಚಯಿಸಬಹುದು. ನಾವು ಖಂಡಿತವಾಗಿಯೂ ಶರತ್ತುಗಳ ಪ್ರಕಾರ ತೀರ್ಮಾಣಕ್ಕೆ ಬರಲು ಸಿದ್ಧರಾಗಿದ್ದೇವೆ ಎಂದು ಸಹಭಾಗಿ ಇಲ್ಲದ ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಹೇಳುತ್ತೇವೆ. ಆದರೆ ಓದುಗರೇ ಮತ್ತು ಆರ್ಯ ಸಮಾಜದಲ್ಲಿ ಬಂಧಿತರಾಗಿರುವ ಯುವ ಜನರೇ, ವೇದಗಳಲ್ಲಿ ಏಕದೇವ ವಿಶ್ವಾಸದ ಬಗ್ಗೆ ಪ್ರಸ್ತಾಪವೇ ಇಲ್ಲವೆಂದು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಅವುಗಳು ಎಲ್ಲೆಲ್ಲೂ ಬಹುದೇವಾರಾಧನೆಯಿಂದ ಮಿಶ್ರಿತವಾಗಿವೆ. ಈ ಮಿಶ್ರಿತದಿಂದ ಅವುಗಳನ್ನು ಮುಕ್ತಗೊಳಿಸಲು ಯಾರಿಗೂ ಸಾಧ್ಯವಿಲ್ಲ. ಅದರ ಬಗ್ಗೆ ಎಲ್ಲ ಪರದೆಗಳು ತೆರೆಯಲ್ಪಡುವ ಕಾಲ ಸಮೀಪಿಸಿದೆ. ಆದ್ದರಿಂದ ನೀವು ಏಕದೇವನನ್ನು ನಂಬಿರಿ. ಅವನ ನ್ಯಾಯಾಲಯದಿಂದ ಯಾರಿಗೂ ಪರಾರಿಯಾಗಲು ಸಾಧ್ಯವಲ್ಲ.

**(ಸುರ್ಮ ಚಶ್ಮ ಆರ್ಯಾ; ರೂಹಾನೀ ಖಝಾಇನ್, ಸಂಪುಟ 2, ಪುಟ 216)**

ಮಿರ್ಝಾ ಗುಲಾಮ್ ಮುರ್ತಝಾರವರ ಪುತ್ರನಾದ ಮತ್ತು ಏಕನೂ ನಿರಪೇಕ್ಷನೂ ಆದ ಅಲ್ಲಾಹನ ದಾಸನಾದ ನಾನು (ಮಿರ್ಝಾ ಗ್ಘುಲಾಮ್ ಅಹ್ಮದ್, ಬರಾಹೀನೆ ಅಹ್ಮದಿಯಾದ ಗ್ರಂಥಕರ್ತ) ವೈಭವಶಾಲಿಯೂ ಪ್ರತಾಪವಂತನೂ ಆದವನ ಹೆಸರಲ್ಲಿ ಪ್ರಮಾಣಮಾಡಿ ಹೇಳುತ್ತೇನೆ: ನಾನು ನನ್ನ ಜೀವಿತದ ಬಹುತೇಕ ಭಾಗವನ್ನು ಧರ್ಮಗಳ ಬಗ್ಗೆ ಸಂಶೋಧನೆ ನಡೆಸುವುದರಲ್ಲಿ ವಿನಿಯೋಗಿಸಿ ಲೋಕದಲ್ಲಿ ಸತ್ಯವಾದ ಮತ್ತು ಅಲ್ಲಾಹನಿಂದ ಬಂದ ಧರ್ಮ ಇಸ್ಲಾಮ್ ಎಂದೂ ಹಝ್ರತ್ ಸಯ್ಯದುನಾ ಮೌಲಾನಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸಂದೇಶವಾಹಕರೂ ಶ್ರೇಷ್ಠ ಪ್ರವಾದಿಯೂ ಎಂದೂ ಸಕಲ ಪರಿಶುದ್ಧ ಸತ್ಯಗಳನ್ನು ಒಳಗೊಂಡಿರುವ ಪವಿತ್ರ ಖುರ್‌ಆನ್ ವೈಭವಶಾಲಿ ಅಲ್ಲಾಹನ ಪವಿತ್ರವೂ ಪರಿಪೂರ್ಣನೂ ಆದ ವಚನಗಳೆಂದೂ ಸಾಬೀತುಗೊಳಿಸಿದೆನು. ಅಲ್ಲಾಹನು ತನ್ನ ಸ್ವಂತವೂ ಅನಂತವೂ ಆದ ಅಸ್ತಿತ್ವದಲ್ಲಿ, ಪರಿಪೂರ್ಣ ಶಕ್ತಿ ಮತ್ತು ಇತರ ಎಲ್ಲ ಗುಣಗಳಲ್ಲಿ ಏಕನೂ

ಸರಿಸಾಟಿಯಿಲ್ಲದವನೂ ಆಗಿದ್ದಾನೆ, ಅವನು ಎಲ್ಲ ಸೃಷ್ಟಿಗಳ ಸೃಷ್ಟಿಕರ್ತನೂ ಆತ್ಮಗಳ ಮತ್ತು ಶರೀರಗಳ ನಿರ್ಮಾತೃನೂ ಆಗಿದ್ದಾನೆ, ಸತ್ಯವಂತರಿಗೂ ಪ್ರಾಮಾಣಿಕರಿಗೂ ಸತ್ಯವಿಶ್ವಾಸಿಗಳಿಗೂ ಅವನು ಶಾಶ್ವತ ಮೋಕ್ಷ ನೀಡುವನು, ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ಪಶ್ಚಾತ್ತಾಪ ಸ್ವೀಕರಿಸುವವನೂ ಆಗಿದ್ದಾನೆ, ಅದೇ ರೀತಿಯಲ್ಲಿ ಈ ಪವಿತ್ರ ಗ್ರಂಥವಾದ ಖುರ್‌ಆನಿನಲ್ಲಿ ಪ್ರಸ್ತಾಪಿಸಿರುವ ಅಲ್ಲಾಹನ ಇತರ ಎಲ್ಲ ಗುಣಗಳು ಮತ್ತು ಅದರಲ್ಲಿ ಉಲ್ಲೇಖಿಸಲಾದ ಇತರ ಎಲ್ಲ ಅಧ್ಯಾಪನೆಗಳು ಸರಿಯೂ ನಿಜವೂ ಆಗಿವೆ. ನಾನು ಹೃತ್ಪೂರ್ವಕವಾಗಿ ಈ ಎಲ್ಲ ಕಾರ್ಯಗಳನ್ನು ಸತ್ಯವೆಂದು ದೃಢವಾಗಿ ನಂಬುತ್ತೇನೆ.

**(ಸುರ್ಮ ಚಶ್ಮ ಆರ್ಯಾ; ರೂಹಾನೀ ಖಝಾಇನ್, ಸಂಪುಟ 2, ಪುಟ 302 – 303)**

چشمۂ مسیحی

## ಪುಸ್ತಕ: ಚಶ್ಮಯೆ ಮಸೀಹೀ

ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ: ನಾನು ನನ್ನ ಪರಿಶುದ್ಧ ದೇವನ ಖಚಿತ ಮತ್ತು ನಿಖರವಾದ ಸಂಭಾಷಣೆಯನ್ನು ಬಹುತೇಕ ಎಲ್ಲ ದಿನಗಳಲ್ಲಿ ಪಡೆಯುವ ಸೌಭಾಗ್ಯವನ್ನು ಪಡೆದಿರುವೆನು. "ನೀನು ನನ್ನನ್ನು ಕೈಬಿಟ್ಟದ್ದೇಕೆ? ಎಂದು ಯಾವ ದೇವನ ಬಗ್ಗೆ ಯೇಸು ಮಸೀಹರು ಹೇಳಿದರೋ ಆ ದೇವನು ನನ್ನನ್ನು ಕೈಬಿಡಲಿಲ್ಲ ಎಂದು ನಾನು ಕಾಣುತ್ತಿರುವೆನು.

**(ಚಶ್ಮಯೆ ಮಸೀಹೀ; ರೂಹಾನೀ ಖಝಾಇನ್, ಸಂಪುಟ 20, ಪುಟ 353)**

نسیم دعوت

## ಪುಸ್ತಕ: ನಸೀಮೆ ದಅ್‌ವತ್

ಮಾನ್ಯರೇ, ಅರ್‌ಶ್ ಎಂಬುದು ದೇವನು ಕುಳಿತಿರುವ ಭೌತಿಕ ವಸ್ತು ಅಥವಾ ಸೃಷ್ಟಿ ಎಂದು ಮುಸ್ಲಿಮರು ನಂಬುವುದಿಲ್ಲ. ಪವಿತ್ರ ಖುರ್‌ಆನನ್ನು ಪ್ರಾರಂಭದಿಂದ ಕೊನೆಯ ತನಕ ಓದಿದರೂ ಅದರಲ್ಲಿ ಅರ್‌ಶ್ ಒಂದು ಸೀಮಿತ ವಸ್ತು ಅಥವಾ ಸೃಷ್ಟಿ ಎಂದು ಉಲ್ಲೇಖಿತವಾಗಿ ಕಾಣಲಾರಿರಿ. ಅಸ್ತಿತ್ವಕ್ಕೆ ಬಂದ ಪ್ರತಿಯೊಂದನ್ನು ಅವನೇ ಸೃಷ್ಟಿಸಿದ್ದಾನೆ ಎಂದು ಪವಿತ್ರ ಖುರ್‌ಆನಿನಲ್ಲಿ ದೇವನು ಪದೇ ಪದೇ ಹೇಳುತ್ತಾನೆ. ಅವನೇ ಭೂಮ್ಯಾಕಾಶ, ಆತ್ಮಗಳ ಮತ್ತು ಅವುಗಳ ಸಕಲ ಶಕ್ತಿಗಳ ಸೃಷ್ಟಿಕರ್ತನಾಗಿರುವನು. ಅವನು ಸ್ವತಃ ನೆಲೆನಿಂತಿದ್ದಾನೆ ಮತ್ತು ಪ್ರತಿಯೊಂದು ವಸ್ತು ಅವನ ಮೂಲಕ ನೆಲೆನಿಂತಿದೆ. ಅಸ್ತಿತ್ವದಲ್ಲಿರುವ ಪ್ರತಿಯೊಂದು ಕಣ ಮತ್ತು ಪ್ರತಿಯೊಂದು ವಸ್ತು ಅವನದೇ ಸೃಷ್ಟಿಯಾಗಿದೆ ಎಂದು ಹೇಳಿದ್ದಾನೆ. ಆದರೆ ಅರ್‌ಶ್ ಸಹ ಅವನು ಸೃಷ್ಟಿಸಿದ ಒಂದು ಭೌತಿಕ ವಸ್ತುವೆಂದು ಅವನು ಎಲ್ಲಿಯೂ ಹೇಳಿಲ್ಲ. ಅರ್‌ಶ್ ಒಂದು ಭೌತಿಕ ವಸ್ತುವೆಂದು ಯಾವನೇ ಆರ್ಯ ಸಮಾಜಿ ಪವಿತ್ರ ಖುರ್‌ಆನಿನಿಂದ ಸಾಬೀತು ಗೊಳಿಸಿದರೆ ಅವನು ಖಾದಿಯಾನಿನಿಂದ ಹೊರಗೆ ಹೋಗುವ ಮುನ್ನವೇ ಒಂದು ಸಾವಿರ ರೂಪಾಯಿ ಬಹುಮಾನವಾಗಿ ಅವನಿಗೆ ಕೊಡುವೆನು. ಪವಿತ್ರ ಖುರ್‌ಆನಿನಿಂದ ಆ ವಚನ ತೋರಿಸಿದ ಕೂಡಲೆ ಒಂದು ಸಾವಿರ ರೂಪಾಯಿ ಅವನಿಗೆ ಕೊಡುವೆನು ಎಂದು ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಅವನ ಹೆಸರಲ್ಲಿ ಸುಳ್ಳು ಪ್ರಮಾಣ ಮಾಡುವುದು ಅಲ್ಲಾಹನ ಶಾಪಕ್ಕೆ ಗುರಿಮಾಡುವ ಕೆಲಸವಾಗಿದೆ. ಪವಿತ್ರ ಖುರ್‌ಆನಿನಿಂದ ಹಾಗೆ ತೋರಿಸಲು ಸಾಧ್ಯವಲ್ಲವಾದರೆ, ದೇವನ ಬಗ್ಗೆ ಸುಳ್ಳು ಹೇಳುವವನು ಸ್ವತಃ ಶಾಪಗ್ರಸ್ತನಾಗುತ್ತಾನೆ ಎಂದು ನಾನು ಘನತೆಯಿಂದ ಹೇಳುತ್ತೇನೆ.

**(ನಸೀಮೆ ದಅ್‌ವತ್; ರೂಹಾನೀ ಖಝಾಇನ್ ಸಂಪುಟ 19, ಪುಟ 453–454)**

نزول المسیح

## ನುಝೂಲುಲ್ ಮಸೀಹ್

ಪ್ರತಿಯೊಂದು ವಸ್ತುನಿನ ಮಾಲಿಕ ದೇವನಾಗಿರುವುದರಿಂದ ಯಾವುದಾದರೂ ಪುಸ್ತಕದ ಒಂದು ಉತ್ತಮ ವಾಕ್ಯ ಅಥವಾ ಯಾವುದಾದರೂ ಕಾವ್ಯ ಸಂಗ್ರಹದಿಂದ ಒಂದು ಉತ್ತಮ ಪಂಕ್ತಿ ನನಗೆ ಇಲ್‌ಹಾಮ್ ಮೂಲಕ ಅವತೀರ್ಣ ಮಾಡುವ ಅಧಿಕಾರ ಅವನಿಗಿದೆ. ಇದು ಅರಬಿ ಭಾಷೆಗೆ ಸಂಬಂಧಪಟ್ಟ ವಿಷಯವಾಗಿದೆ. ಆಶ್ಚರ್ಯಕರವಾದುದೇ ನೆಂದರೆ, ನನಗೆ ಕೆಲವು ಇಲ್‌ಹಾಮ್‌ಗಳು ನನಗೆ ತಿಳಿಯದ ಇತರ ಭಾಷೆಗಳಲ್ಲೂ ಅವತೀರ್ಣಗೊಂಡಿವೆ. ಇಂಗ್ಲಿಷ್, ಸಂಸ್ಕೃತ, ಹೀಬ್ರೂ ಇತ್ಯಾದಿ ಭಾಷೆಗಳಲ್ಲೂ ನನಗೆ ಸಂದೇಶವಾಣಿ ಲಭಿಸಿವೆ. ಬರಾಹೀನೆ ಅಹ್ಮದಿಯಾದಲ್ಲಿ ಇದರ ಕೆಲವು ಉದಾಹರಣೆ ಕೊಡಲಾಗಿದೆ. ನನ್ನೊಂದಿಗೆ ಅಲ್ಲಾಹನ ನಡೆವಳಿಕೆ ಈ ರೀತಿಯದ್ದಾಗಿದೆ ಎಂದು ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ಇದು ನನಗೆ ನೀಡಲಾದ ದೃಷ್ಟಾಂತಗಳ ವಿಧಗಳಲ್ಲಿ ಒಂದಾಗಿದೆ.

**(ನಝೂಲುಲ್ ಮಸೀಹ್; ರೂಹಾನೀ ಖಝಾಇನ್, ಸಂಪುಟ 18, ಪುಟ 435)**

ನಾನು ಇದಕ್ಕೆ ಮುಂಚೆಯೂ ನನ್ನ ಪುಸ್ತಕಗಳಲ್ಲಿ ನನ್ನ ವಾದಗಳ ಬಗ್ಗೆ ಸವಿಸ್ತಾರವಾಗಿ ದೇವನ ಹೆಸರಲ್ಲಿ ಆಣೆ ಹಾಕಿ ಬರೆದಿರುವೆನು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ದೇವನ ಹೆಸರಲ್ಲಿ ಆಣೆ ಹಾಕಿ ಈಗ ಸಹ ಬರೆಯುತ್ತೇನೆ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಮಸೀಹ್ ಮೌಊದರ ಬಗ್ಗೆ ಹದೀಸುಗಳಲ್ಲಿ ಸುವಾರ್ತೆ ನೀಡಿರುವರೋ ಆ ಮಸೀಹ್ ಮೌಊದ್ ನಾನಾಗಿರುವೆನು. ಈ ಸುವಾರ್ತೆ ಸಹೀಹ್ ಬುಖಾರಿ, ಸಹೀಹ್ ಮುಸ್ಲಿಮ್ ಮತ್ತು ಇತರ ಸಹೀಹ್ ಹದೀಸ್ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. وَكَفٰى بِاللّٰهِ شَهِيْدًا ವ ಕಫಾ ಬಿಲ್ಲಾಹಿ ಶಹೀದ. (ಸಾಕ್ಷಿಯಾಗಿ ಅಲ್ಲಾಹನೇ ಸಾಕು)."

**(ಅಖಾಇದೋ ತಅ್‌ಲೀಮಾತ್ ಪುಟ 137 ಮುದ್ರಣ: ನಝಾರತ್**

**ದಅ್‌ವತೋ ತಬ್ಲೀಗ್ ಖಾದಿಯಾನ್ ಅಕ್ಟೋಬರ್ 1955)**

## ایک غلطی کا ازالہ

## ಪುಸ್ತಕ: ಏಕ್ ಗ಼ಲತೀ ಕಾ ಇಝ಼ಾಲ

ನನ್ನನ್ನು ಯಾರು ಕಳುಹಿಸಿರುವನೋ ಆ ದೇವನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ. ಅವನ ಹೆಸರಲ್ಲಿ ಸುಳ್ಳು ಹೇಳುವುದು ಶಪಿಸಲ್ಪಟ್ಟವರ ಕೆಲಸವಾಗಿದೆ. ಅವನು ನನ್ನನ್ನು ಮಸೀಹ್ ಮೌಊದ್ ಆಗಿ ಕಳುಹಿಸಿರುವನು. ನಾನು ಪವಿತ್ರ ಖುರ್‌ಆನನ್ನು ಹೇಗೆ ನಂಬುತ್ತೇನೋ ಹಾಗೆಯೇ ಒಂದಿಷ್ಟು ವ್ಯತ್ಯಾಸವಿಲ್ಲದೆ ಅಲ್ಲಾಹನು ನನಗೆ ಅವತೀರ್ಣಗೊಳಿಸಿದ ಸ್ಪಷ್ಟ ಸಂದೇಶವಾಣಿಗಳನ್ನು ನಂಬುತ್ತೇನೆ. ಅವುಗಳ ಸತ್ಯತೆಯೂ ನಿರಂತರ ದೃಷ್ಟಾಂತಗಳ ಮೂಲಕ ನನಗೆ ಸ್ಪಷ್ಟವಾಯಿತು. ಹಝ್‌ರತ್ ಮೂಸಾ(ಅ), ಹಝ್‌ರತ್ ಈಸಾ(ಅ) ಮತ್ತು ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ತನ್ನ ವಚನಗಳನ್ನು ಅವತೀರ್ಣಗೊಳಿಸಿದ ಅದೇ ದೇವನೇ ನನಗೆ ತನ್ನ ಪರಿಶುದ್ಧ ವಚನಗಳನ್ನು ಅವತೀರ್ಣಗೊಳಿಸುತ್ತಾನೆ ಎಂದು ನಾನು ದೇವನ ಭವನವಾದ ಕಅ್‌ಬದಲ್ಲಿ ನಿಂತು ಪ್ರಮಾಣ ಮಾಡಬಲ್ಲೆನು.

**(ಏಕ್ ಗ಼ಲತೀ ಕಾ ಇಝ಼ಾಲಾ; ರೂಹಾನೀ ಖ಼ಝ಼ಾಇನ್, ಸಂಪುಟ 18, ಪುಟ 210)**

## كرامات الصادقين

## ಪುಸ್ತಕ: ಕರಾಮಾತುಸ್ಸಾಧಿಖೀನ್

ಪ್ರತಾಪವಂತನಾದ ಅಲ್ಲಾಹನಾಣೆ, ನಾನು ಕಾಫಿರ್ ಅಲ್ಲ ಎಂದು ನಾನು ಜನರಿಗೆ ವ್ಯಕ್ತಪಡಿಸುತ್ತಿದ್ದೇನೆ. ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್ ಎಂಬುದು ನನ್ನ ವಿಶ್ವಾಸವಾಗಿದೆ. **ವಲಾಕಿರ್ರಸೂಲಲ್ಲಾಹಿ ವ ಖಾತಮುನ್ನಬಿಯ್ಯೀನ್** (ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ.) [ಪವಿತ್ರ ಖುರ್‌ಆನ್ 33:41] ಎಂಬುದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ನನ್ನ ನಂಬಿಕೆಯಾಗಿದೆ. ನಾನು ನನ್ನ ಈ ವಿಶ್ವಾಸದ ದೃಢತೆಯ ಬಗ್ಗೆ ಅಲ್ಲಾಹನ ಪರಿಶುದ್ಧ ಗುಣನಾಮಗಳಷ್ಟು ಸಲ, ಪವಿತ್ರ ಖುರ್‌ಆನಿನಲ್ಲಿರುವ ಅಕ್ಷರಗಳಷ್ಟು ಸಾರಿ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೇವನ ದೃಷ್ಟಿಯಲ್ಲಿರುವ ಪರಿಪೂರ್ಣತೆಗಳಷ್ಟು ಸಾರಿ ಪ್ರಮಾಣ ಮಾಡುತ್ತೇನೆ. ನನ್ನ ಯಾವುದೇ ನಂಬಿಕೆ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶಗಳಿಗೆ ವಿರುದ್ಧವಾಗಿಲ್ಲ. ಯಾರಾದರೂ ಹಾಗೆ ಭಾವಿಸುವರಾದರೆ ಅದು ಅವನದೇ ತಪ್ಪು ಕಲ್ಪನೆಯಾಗಿದೆ. ಈಗಲೂ ನನ್ನನ್ನು ಕಾಫಿರ್ ಎಂದು ಭಾವಿಸುವವನು ಮತ್ತು ನನ್ನನ್ನು ಕಾಫಿರ್ ಎಂದು ಹೇಳುವುದರಿಂದ ಹಿಂದೆಸರಿಯದವನು ತನ್ನ ಮರಣದ ನಂತರ ಅದರ ಬಗ್ಗೆ ಪ್ರಶ್ನಿಸಲ್ಪಡುವನು. ನನಗೆ ದೇವನ ಬಗ್ಗೆ ಮತ್ತು ಅವನ ಸಂದೇಶವಾಹಕರ ಬಗ್ಗೆ ಎಷ್ಟು ವಿಶ್ವಾಸವಿದೆ ಎಂದರೆ, ಈಗಿನ ಕಾಲದ ಎಲ್ಲ ಜನರ ವಿಶ್ವಾಸವನ್ನು ತ್ರಾಸಿನ ಒಂದು ತಟ್ಟೆಯಲ್ಲಿ ಇರಿಸಿ ನನ್ನ ವಿಶ್ವಾಸವನ್ನು ಇನ್ನೊಂದರಲ್ಲಿ ಇರಿಸಿದರೆ, ನನ್ನ ವಿಶ್ವಾಸವನ್ನು ಇರಿಸಿದ ತಟ್ಟೆ ಅಲ್ಲಾಹನ ಅನುಗ್ರಹದಿಂದ ಹೆಚ್ಚು ಭಾರವುಳ್ಳದಾಗಿರುವುದು ಎಂದು ನಾನು ವೈಭವಶಾಲಿ ಅಲ್ಲಾಹನ ನಾಮದಲ್ಲಿ ಆಣೆ ಹಾಕಿ ಹೇಳುತ್ತೇನೆ.

**(ಕರಾಮಾತುಸ್ಸಾಧಿಖೀನ್; ರೂಹಾನೀ ಖಝಾಇನ್ ಸಂಪುಟ 7, ಪುಟ 68)**

ترياق القلوب

## ಪುಸ್ತಕ: ತಿರ್‌ಯಾಖುಲ್ ಖುಲೂಬ್

ನನ್ನನ್ನು ಕಳುಹಿಸಿದ ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ: ನಿರ್ದಯಿಯಾದ ಒಬ್ಬ ಕ್ರೈಸ್ತ, ಹಿಂದೂ ಅಥವಾ ಆರ್ಯಸಮಾಜಿ ಹಗಲು ಬೆಳಕಿನಂತೆ ಪ್ರಕಾಶಮಾನವಾಗಿ ಪ್ರಕಟವಾದ ನನ್ನ ಹಿಂದಿನ ದೃಷ್ಟಾಂತಗಳನ್ನು ನಿರಾಕರಿಸಿ ಮುಸ್ಲಿಮನಾಗಲು ಹೊಸದಾದ ಒಂದು ದೃಷ್ಟಾಂತ ಬಯಸುವನಾದರೆ, ಅವನು ನಿರರ್ಥಕ ತರ್ಕ ಮಾಡುವವನಾಗದೆ, ಕೆಟ್ಟ ಸಂಕಲ್ಪ ಹೊಂದದೆ ಸರಳವಾದ ರೀತಿಯಲ್ಲಿ "ಮನುಷ್ಯ ಶಕ್ತಿಗೆ ಅತೀತವಾದ ಯಾವುದೇ ದೃಷ್ಟಾಂತ ಕಂಡರೂ ಇಸ್ಲಾಮ್ ಧರ್ಮವನ್ನು ನಾನು ಸ್ವೀಕರಿಸುವೆನು" ಎಂಬ ತನ್ನ ಹೇಳಿಕೆಯನ್ನು ಯಾವುದಾದರೂ ಪತ್ರಿಕೆಯಲ್ಲಿ ಪ್ರಕಟಿಸಬೇಕು. ಹೀಗೆ ಮಾಡಿದರೆ ಒಂದು ವರ್ಷ ಪೂರ್ಣವಾಗುವುದರೊಳಗೆ ಅವನು ದೃಷ್ಟಾಂತ ಕಾಣುವನು ಎಂದು ನಾನು ದೃಢವಾಗಿ ನಂಬುತ್ತೇನೆ. ಏಕೆಂದರೆ ನಾನು ನನ್ನ ನೇತಾರನಾದ ಹಝ್ರತ್ ಪೈಗಂಬರರಿಗೆ(ಸ) ಲಭಿಸಿದ ಜೀವಿತದಿಂದ ಪ್ರಕಾಶ ಪಡೆಯುತ್ತಿದ್ದೇನೆ. ಇದನ್ನು ಎದುರಿಸಬಲ್ಲವನು ಯಾರೂ ಇಲ್ಲ.

**(ತಿರ್‌ಯಾಖುಲ್ ಖುಲೂಬ್; ರೂಹಾನೀ ಖಝಾಇನ್ ಸಂಪುಟ 15, ಪುಟ 140)**

ಲೋಕದಲ್ಲಿ ಕೇವಲ ಎರಡು ಜೀವಿತಗಳು ಪ್ರಶಾಂಸಾರ್ಹವಾಗಿವೆ. ಒಂದು, ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ ಎಲ್ಲವನ್ನೂ ನೆಲೆನಿಲ್ಲಿಸುವವನೂ ಅನುಗ್ರಹಗಳ ಮೂಲ ಸ್ಥಾನವೂ ಆದ ಅಲ್ಲಾಹನ ಜೀವಿತ. ಎರಡು, ಅನುಗ್ರಹ ನೀಡಬಲ್ಲ ಮತ್ತು ದೇವದರ್ಶನ ಮಾಡಬಲ್ಲ ಜೀವಿತ. ಬನ್ನಿರಿ, ಅಂತಹ ಜೀವಿತ ಕೇವಲ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದ್ದಾಗಿದೆ ಎಂದು ನಾವು ತೋರಿಸಿ ಕೊಡುವೆವು. ಅದರ ಬಗ್ಗೆ ಎಲ್ಲ ಕಾಲಗಳಲ್ಲೂ ಆಕಾಶ ಸಾಕ್ಷ್ಯ ನೀಡುತ್ತಾ ಬಂದಿದೆ, ಈಗಲೂ ನೀಡುತ್ತಿದೆ. ಅನುಗ್ರಹದಾಯಕವಲ್ಲದ ಬದುಕು ಜೀವಂತವಲ್ಲ, ನಿರ್ಜೀವವಾದುದಾಗಿದೆ. ನನ್ನ ಹಿರಿಯರಾದ, ನಾನು ಅನುಸರಿಸಬೇಕಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಧ್ಯಾತ್ಮಿಕ ಶಾಶ್ವತ ಜೀವಿತ, ವೈಭವ ಮತ್ತು ಪರಿಪೂರ್ಣತೆ ಬಗ್ಗೆ ಅಲ್ಲಾಹನು ನನಗೆ ನೀಡಿರುವ ಪುರಾವೆಯೇನೆಂದರೆ, ನಾನು ಅವರನ್ನು ಅನುಸರಿಸುವ ಮೂಲಕ ಮತ್ತು ಅವರನ್ನು ಪ್ರೀತಿಸುವ ಕಾರಣ ದೈವಿಕ ದೃಷ್ಟಾಂತಗಳು ನನ್ನ ಮೇಲೆ ಇಳಿಯುವುದನ್ನು ಮತ್ತು ನನ್ನ ಹೃದಯ ದೃಢವಿಶ್ವಾಸದ ಪ್ರಕಾಶದಿಂದ ತುಂಬುವುದನ್ನು ಕಂಡೆನು. ಅವುಗಳ ಸ್ಪಷ್ಟ ಪ್ರಕಾಶಗಳ ಮೂಲಕ ನಾನು ನನ್ನ ದೇವನನ್ನು ನೋಡಲು ಸಾಧ್ಯವಾಗುವಷ್ಟು ಅದೃಶ್ಯ ದೃಷ್ಟಾಂತಗಳನ್ನು ಕಂಡೆನು

ಎಂದು ಯಾರ ಹೆಸರಲ್ಲಿ ಸುಳ್ಳು ಹೇಳುವುದು ಅತ್ಯಂತ ನೀಚ ಕೆಲಸವಾಗಿದೆಯೋ ಆ ದೇವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ.

**(ತಿರ್‌ಯಾಖುಲ್ ಖುಲೂಬ್ ರೂಹಾನೀ ಖ಼ಝ಼ಾಇನ್ ಸಂಪುಟ 15, ಪುಟ 140)**

تحفہ گولڑویہ

## ಪುಸ್ತಕ: ತುಹ್‌ಫ ಗೋಲ್ಡವಿಯ

ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ದೇವನ ಆಣೆ ಹಾಕಿ ಹೇಳುತ್ತೇನೆ: ಮೌಲವಿಗಳು ನನಗೆ ದಜ್ಜಾಲ್, ಕದ್ದಾಬ್, ಕಾಫಿರ್ ಮತ್ತು ಅಕ್‌ಫರ್ ಎಂದು ಹೆಸರು ನೀಡುತ್ತಾ ಇದ್ದಾಗ ನನ್ನ ಸತ್ಯಸಾಕ್ಷ್ಯಕ್ಕಾಗಿ ಅಲ್ಲಾಹನು ಆಕಾಶದಲ್ಲಿ ಒಂದು ದೃಷ್ಟಾಂತ ತೋರಿಸಿದನು. ಬರಾಹೀನೆ ಅಹ್ಮದಿಯಾದಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಭವಿಷ್ಯವಾಣಿ ರೂಪದಲ್ಲಿ ಈ ವಾಗ್ದಾನ ನೀಡಲಾಗಿತ್ತು. ಅದು ಹೀಗೆ:

قُلْ عِنْدِیْ شَهَادَةٌ مِّنَ اللّٰهِ فَهَلْ اَنْتُمْ مُؤْمِنُوْن

قُلْ عِنْدِیْ شَهَادَةٌ مِّنَ اللّٰهِ فَهَلْ اَنْتُمْ مُسْلِمُوْن

**ಖುಲ್ ಇಂದೀ ಶಹಾದತುನ್ ಮಿನಲ್ಲಾಹಿ**

**ಫಹಲ್ ಅನ್‌ತುಮ್ ಮೂಮಿನೂನ್.**

**ಖುಲ್ ಇಂದೀ ಶಹಾದತುನ್ ಮಿನಲ್ಲಾಹಿ**

**ಫಹಲ್ ಅನ್‌ತುಮ್ ಮುಸ್ಲಿಮೂನ್.**

ಅರ್ಥ: ಹೇಳು, ನನ್ನ ಬಳಿ ಅಲ್ಲಾಹನ ಒಂದು ಸಾಕ್ಷ್ಯವಿದೆ;

ಅದನ್ನು ನೀವು ನಂಬುವಿರೋ ಇಲ್ಲವೋ?

ಪುನಃ ಹೇಳು, ನನ್ನ ಬಳಿ ಅಲ್ಲಾಹನ ಒಂದು ಸಾಕ್ಷ್ಯವಿದೆ;

ನೀವು ಅದನ್ನು ಸ್ವೀಕರಿಸುವಿರೋ ಇಲ್ಲವೋ?

ನಿಮಗೆ ನೆನಪಿರಲಿ. ನನ್ನ ಸತ್ಯತೆಯ ದೃಢೀಕರಣಕ್ಕಾಗಿ ಅಲ್ಲಾಹನ ಕಡೆಯಿಂದ ಹಲವು ಸಾಕ್ಷ್ಯಗಳಿವೆ, ಒಂದುನೂರಕ್ಕಿಂತ ಮೇಲ್ಪಟ್ಟು ಈಡೇರಿದ ಭವಿಷ್ಯವಾಣಿಗಳಿವೆ, ಅವುಗಳಿಗೆ ಲಕ್ಷಗಟ್ಟಲೆ ಜನರು ಸಾಕ್ಷಿಗಳಾಗಿದ್ದಾರೆ. ಆದರೂ ಮೇಲಿನ ಇಲ್‌ಹಾಮ್‌ನಲ್ಲಿ ಈ ಭವಿಷ್ಯವಾಣಿಯನ್ನು ಅದರ ವೈಶಿಷ್ಟ್ಯದ ಕಾರಣ ಪ್ರಸ್ತಾಪಿಸಲಾಗಿದೆ. ಎಂದರೆ ಆದಮ್‌ರಿಂದ ಮೊದಲುಗೊಂಡು ಇಷ್ಟರ ತನಕ ಯಾರ ಪರವಾಗಿಯೂ ಈ ದೃಷ್ಟಾಂತವನ್ನು ತೋರಿಸಲಾಗಿಲ್ಲ. ಯಾರ ಬಗ್ಗೆ ಈಗ ಕಾಫಿರ್ ಎಂದು ಬೊಬ್ಬೆ ಹಾಕಲಾಗಿಲ್ಲವೋ, ಯಾರನ್ನು ಸುಳ್ಳಾಗಿಸಲಾಗಿಲ್ಲವೋ ಮತ್ತು ಯಾರ ಬಗ್ಗೆ ಧಿಕ್ಕಾರಿಯೆಂದು ಎಂದು ಹೇಳಲಾಗಿಲ್ಲವೋ ಅಂತಹವನ ಸತ್ಯತೆಗೆ ಈ ದೃಷ್ಟಾಂತವನ್ನು ತೋರಿಸಲಾಗಿಲ್ಲ; ಬದಲಾಗಿ, ಈ ದೃಷ್ಟಾಂತ

ನನ್ನ ಸತ್ಯಸಾಕ್ಷ್ಯಕ್ಕಾಗಿ ತೋರಿಸಲಾಗಿದೆ ಎಂದು ನಾನು ಕಅ್‌ಬದಲ್ಲಿ ನಿಂತು ಆಣೆ ಹಾಕಿ ಹೇಳಬಲ್ಲೆನು. ನಾನು ಕಅ್‌ಬದಲ್ಲಿ ನಿಂತು ಹೀಗೆ ಸಹ ಆಣೆ ಹಾಕಿ ಹೇಳಬಲ್ಲೆನು. ಈ ದೃಷ್ಟಾಂತದ ಮೂಲಕ (ವಾಗ್ದತ್ತ ಮಸೀಹರ ನಿಯೋಗದ) ಶತಮಾನವು ಗುರುತಿಸಲ್ಪಟ್ಟಿತು.

**(ತುಹ್‌ಫ ಗೋಲ್ಡವಿಯ; ರೂಹಾನೀ ಖಝಾಇನ್ ಸಂಪುಟ 17, ಪುಟ 143)**

كتاب البريه

## ಪುಸ್ತಕ: ಕಿತಾಬುಲ್ ಬರಿಯ್ಯ

محمد است امام و چراغ ہر دو جہاں

محمد است فروزندۂ زمین و زماں

خدا نہ گویمش از ترسِ حق مگر بخدا

خدا نما ست وجودش برائے عالمیاں

**ಮುಹಮ್ಮದ್ ಅಸ್ತ್ ಇಮಾಮೋ ಚಿರಾಗ್ ಬರ್ ದೋ ಜಹಾ(೦)**

**ಮುಹಮ್ಮದ್ ಅಸ್ತ್ ಫರೋಝಿಂದಹೆ ಝಮೀನ್ ವ ಝಮಾ(ನ್)**

**ಖುದಾ ನ ಗೊಯಮಶ್ ಅಝ್ ತರ್ಸೆ ಹಖ್ ಮಗರ್ ಬಖುದಾ**

**ಖುದಾ ನುಮಾಸ್ತ್ ವಜೂದಶ್ ಬರಾಯೆ ಆಲಿಮಿಯಾ(ನ್)**

ಅರ್ಥ: ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಇಹಪರ ಲೋಕಗಳ ಇಮಾಮರೂ ಬೆಳಕೂ ಆಗಿದ್ದಾರೆ. ಭೂಮ್ಯಾಕಾಶಗಳನ್ನು ಪ್ರಕಾಶಿಸುವವರಾಗಿದ್ದಾರೆ.

ದೇವನ ಭಯದ ಕಾರಣ ನಾನು ಅವರನ್ನು ದೇವನೆಂದು ಕರೆಯಲಾರೆ. ಆದರೆ ದೇವನಾಣೆ ಅವರು ಭೂಮಿಯ ನಿವಾಸಿಗಳಿಗೆ ದೇವದರ್ಶಕರಾಗಿದ್ದಾರೆ.

**(ಕಿತಾಬುಲ್ ಬರಿಯ್ಯ; ರೂಹಾನೀ ಖಝಾಇನ್ ಸಂಪುಟ 13, ಪುಟ 157)**

# الحکم 31/ مئی 1902ء

## ಅಲ್‌ಹಕಮ್ ಪತ್ರಿಕೆ

ದೇವನಾಣೆ, ಎಲ್ಲ ಪ್ರಶಂಸೆಗಳನ್ನೂ ಎಲ್ಲ ಪದವಿಗಳನ್ನೂ ಎಲ್ಲ ಸದ್ಗುಣಗಳನ್ನೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಲ್ಲಬೇಕು ಎಂಬುದು ನನ್ನ ಹೃದಯದಲ್ಲಿರುವ ನೈಜ ಮತ್ತು ವಾಸ್ತವಿಕ ಆವೇಶವಾಗಿದೆ. ಅಲ್ಲಾಹನ ಏಕತ್ವ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಘನತೆ ಲೋಕದಲ್ಲಿ ಸ್ಥಾಪನೆಯಾಗುವುದರಲ್ಲಿಯೇ ನನ್ನ ಎಲ್ಲ ವಿಧ ಸಂತೋಷಗಳು ಅಡಗಿವೆ. ನನ್ನ ಆಗಮನದ ಮೂಲೋದ್ದೇಶ ಇದಾಗಿದೆ. ಅಲ್ಲಾಹನು ನನ್ನ ಬಗ್ಗೆ ನುಡಿದ ಎಲ್ಲ ಪ್ರಶಂಸಾತ್ಮಕ ಮತ್ತು ಮಹಿಮೆಯ ಮಾತುಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಲ್ಲುತ್ತವೆ ಎಂದು ನಾನು ಖಚಿತವಾಗಿ ಬಲ್ಲೆನು. ಏಕೆಂದರೆ, ನಾನು ಅವರ ಗುಲಾಮನಾಗಿರುವೆನು ಮತ್ತು ಅವರದೇ ನುಬುವ್ವತಿನ ದೀಪದಿಂದ ಪ್ರಕಾಶ ಗಳಿಸದವನಾಗಿರುವೆನು. ಸ್ವತಂತ್ರವಾಗಿ ನಮ್ಮದೇನೂ ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ, ಸ್ವತಂತ್ರವಾಗಿ ಮತ್ತು ಅವರಿಂದ ಯಾವುದೇ ಅನುಗ್ರಹ ಪಡೆಯದೇ ದೇವನಿಂದ ನಿಯೋಜಿತನಾಗಿರುವೆನು ಹಾಗು ದೇವನೊಂದಿಗೆ ಸಂಬಂಧ ಸ್ಥಾಪಿಸಿರುವೆನು ಎಂದು ಯಾರಾದರೂ ವಾದಿಸುವುದಾದರೆ ಅಂತಹ ವ್ಯಕ್ತಿ ತಿರಸ್ಕೃತನೂ ಹೀನೈಸಲ್ಪಟ್ಟವನೂ ಆಗಿರುವನು ಎಂಬುದು ನನ್ನ ದೃಢವಾದ ನಂಬಿಕೆಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದೆ ಅಲ್ಲಾಹನ ಸಾಮೀಪ್ಯ ಪಡೆಯುವ ಬಾಗಿಲನ್ನು ಪ್ರವೇಶಿಸಲಾರ ಎಂಬ ಸ್ಥಾಯಿಯಾದ ಮುದ್ರೆಯನ್ನು ಅಲ್ಲಾಹನು ಹಾಕಿರುವನು.

**(ಅಲ್ ಹಕಮ್ ಮೇ 31, 1902)**

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಯಹೂದಿಯರನ್ನು ಸಂಬೋಧಿಸುತ್ತಾ ಹೇಳುತ್ತಾನೆ:

قُلْ يَا أَيُّهَا الَّذِينَ هَادُوا إِنْ زَعَمْتُمْ أَنَّكُمْ أَوْلِيَاءُ لِلَّهِ

مِنْ دُونِ النَّاسِ فَتَمَنَّوُا الْمَوْتَ إِنْ كُنْتُمْ صَادِقِينَ

**ಖುಲ್ ಯಾ ಅಯ್ಯುಹಲ್ಲಧೀನ ಹಾದೂ ಇನ್‌ಝುಅಮ್‌ತುಮ್ ಅನ್ನಕುಮ್ ಔಲಿಯಾಉ ಲಿಲ್ಲಾಹಿ ಮಿನ್‌ದೂನಿನ್ನಾಸಿ ಫತಮನ್ನವುಲ್ ಮೌತ ಇನ್‌ಕುನ್ ತುಮ್ ಸಾದಿಖೀನ್.**

ಹೇಳು: "ಎಲೈ ಯಹೂದ್ಯರೇ, ಬೇರೆ ಜನರಿಗಿಂತ ನೀವು ಅಲ್ಲಾಹನ ಮಿತ್ರತ್ವ ಹೊಂದಿರುವಿರೆಂದು ನೀವು ವಾದಿಸುತ್ತೀರಾದರೆ (ನಿಜವಾಗಿಯೂ) ನೀವು ಸತ್ಯವಂತರೆಂದಾದರೆ ಮರಣವನ್ನು ಬಯಸಿರಿ." **(62:7)**

ಈ ವಚನದಿಂದ ಸಾಬೀತಾಗುವುದೇನೆಂದರೆ, ಮೃತ್ಯುವನ್ನು ಬಯಸುವವನು ಹೀಗೆ ಬಯಸಿದ ನಂತರ ಬೇಗನೆ ಮರಣ ಹೊಂದುವುದರಿಂದ ರಕ್ಷಿಸಲ್ಪಟ್ಟರೆ ಇದು ಅವನ ಸತ್ಯತೆಗೆ ಸಾಕ್ಷ್ಯವಾಗಿದೆ. ಯಾರಾದರೂ ತನ್ನನ್ನು ದೇವನಿಗೆ ಪ್ರಿಯನೆಂದು ತಪ್ಪಾಗಿ ಭಾವಿಸಿ ಮೃತ್ಯುವನ್ನು ಬಯಸಿದರೆ ಅವನ ಮೃತ್ಯು ದೃಷ್ಟಾಂತವಾಗುವುದು. ಉದಾಹರಣೆಗೆ, ಬದ್ರ್ ಯುದ್ಧದ ಸಂದರ್ಭದಲ್ಲಿ ಅಬೂಜಹಲ್ ಹೀಗೆ ಆಶಿಸಿದ್ದನು: “ದೇವಾ, ನಮ್ಮ ಪೈಕಿ ಸುಳ್ಳುಗಾರನು ಈ ಯುದ್ಧದಲ್ಲಿ ಸಾಯಲಿ.” ಅವನು ಬದ್ರ್ ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಅವನ ಮೃತ್ಯು ಇಸ್ಲಾಮಿನ ಸತ್ಯತೆಗೆ ಸಾಕ್ಷ್ಯವಾಯಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸುಳ್ಳುವಾದಿ ಎಂದು ಗಣಿಸಿ ಸ್ವತಃ ಅವರೆದುರಿಗೆ ಸತ್ಯವಂತರೆಂದು ಭಾವಿಸಿ ಯಾರೆಲ್ಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಪ್ರಾರ್ಥಿಸಿದರೋ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಯವಂತರಾದರೆ ತಾವು ಸಾಯಬೇಕೆಂದು ಪ್ರಾರ್ಥಿಸಿದರೋ ಅವರೆಲ್ಲರೂ ನಾಶವಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ಸತ್ಯವಾದಿ ಎಂದು ಜನರಿಗೆ ದೃಢನಂಬಿಕೆ ಉಂಟಾಗಲು ದೇವನ ಸನ್ನಿಧಿಯಲ್ಲಿ ಹೀಗೆ ಪ್ರಾರ್ಥಿಸಿದರು:

بسم الله الرّحمٰن الرّحيم

نحمدہ و نصلی علی رسولہ الکریم

رَبَّنَا افْتَحْ بَيْنَنَا وَبَيْنَ قَوْمِنَا بِالْحَقِّ وَأَنْتَ خَيْرُ الْفَاتِحِينَ

ನಮ್ಮ ಪ್ರಭೂ, ನಮ್ಮ ಮತ್ತು ನಮ್ಮ ಜನಾಂಗದ ಮಧ್ಯೆ ಸತ್ಯಾಧಾರದಲ್ಲಿ ನೀನು ತೀರ್ಮಾನ ಮಾಡು. ತೀರ್ಮಾನ ಮಾಡುವವರಲ್ಲಿ ನೀನು ಅತ್ಯುತ್ತಮನಷ್ಟೆ.

ಸರ್ವಶಕ್ತನೂ ಭೂಮ್ಯಾಕಾಶಗಳ ಸೃಷ್ಟಿಕರ್ತನೂ ಆಗಿರುವವನೇ, ಕಾರುಣ್ಯನಿಧಿಯೂ ಸಹಾನುಭೂತಿಯುಳ್ಳವನೂ ಮಾರ್ಗದರ್ಶಕನೂ ಆಗಿರುವವನೇ, ಹೃದಯಗಳ ಮೇಲೆ ದೃಷ್ಟಿ ಇರಿಸಿರುವವನೇ, ನಿನ್ನಿಂದ ಯಾವ ವಸ್ತುವೂ ಮರೆಯಾಗಿಲ್ಲ, ನಾನು ಅವಿಧೇಯ, ನೀಚ ಮತ್ತು ದುಷ್ಟನೆಂದು ನೀನು ಕಾಣುವಿಯಾದರೆ, ದುರಾಚಾರಿಯಾದ ನನ್ನನ್ನು ತುಂಡು ತುಂಡಾಗಿಸು. ನನ್ನ ವಿರೋಧಿಗಳ ಗುಂಪಿಗೆ ಸಂತೋಷ ನೀಡು. ಅವರ ಹೃದಯಗಳ ಮೇಲೆ ನಿನ್ನ ಅನುಗ್ರಹದ ಮಳೆ ಸುರಿಸು. ನಿನ್ನ ಕೃಪೆಯಿಂದ ಅವರ ಎಲ್ಲ ಆಶೆಗಳನ್ನು ಈಡೇರಿಸು. ನನ್ನ ಮನೆಯ ಮೇಲೆ ಬೆಂಕಿ ಸುರಿಸು. ನನ್ನ ಶತ್ರುವಾಗು, ನನ್ನ ಕೆಲಸಗಳನ್ನು ಹಾಳುಗೆಡವು. ಆದರೆ ನೀನು ನನ್ನನ್ನು ನಿನಗೆ ವಿಧೇಯನಾಗಿ ಕಂಡಿದ್ದರೆ, ಲೋಕದಿಂದ ನೀನು ಗೋಪ್ಯವಾಗಿರಿಸಿರುವ ನಿನ್ನ ಮೇಲಿನ ನನ್ನ ರಹಸ್ಯವಾದ ಸ್ನೇಹವನ್ನು ನನ್ನ ಹೃದಯದಲ್ಲಿ ನೀನು ಕಾಣುವಿಯಾದರೆ, ನೀನು ನನ್ನೊಂದಿಗೆ ಪ್ರೀತಿಯಿಂದ ವರ್ತಿಸು. ಈ ರಹಸ್ಯಗಳನ್ನು ಸ್ವಲ್ಪ ಪ್ರಕಟಿಸು.

**(ಹಖೀಖತುಲ್ ಮಹ್‌ದೀ; ರೂಹಾನೀ ಖ಼ಝಾಇನ್, ಸಂಪುಟ 14, ಪುಟ 434)**

ಈ ಪ್ರಾರ್ಥನೆಯ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪರವಾಗಿ ಅನೇಕ ದೃಷ್ಟಾಂತಗಳು ಪ್ರಕಟವಾದುವು. ಅವರಿಗೆ ಅಲ್ಲಾಹನು ಲೋಕದಲ್ಲಿ ಪ್ರಸಿದ್ಧಿ ನೀಡಿದರು. ಅವರನ್ನು ನಾಶಮಾಡುವುದರ ಬದಲಾಗಿ ಎಲ್ಲ ರೀತಿಯಲ್ಲಿ ಅಭಿವೃದ್ಧಿ ನೀಡಿ ತನ್ನ ಪ್ರೀತಿ ಮತ್ತು ಸಹಾಯವನ್ನು ಪ್ರಕಟಿಸಿದನು. ಯೋಚಿಸುವರಿಗೆ ಇದರಲ್ಲಿ ದೊಡ್ಡ ದೃಷ್ಟಾಂತವಿದೆ.

**(ಅಹ್ಮದಿಯಾ ಪಾಕೆಟ್ ಬುಕ್, ಭಾಗ 1, ಪುಟ 210 –212 ನಝ್ಝಾರತ್ ಇಶಾಅತ್ ರಬ್ವ 2012)**

## ವೈಭವಶಾಲಿ ಭವಿಷ್ಯವಾಣಿ

## ಇಸ್ಲಾಮಿನ ವೈಭವಶಾಲಿ ಭವಿಷ್ಯತ್‌ಕಾಲ

### ಕೊನೆಯ ಮತ್ತು ಸಂಪೂರ್ಣ ವಿಜಯದ ದಿನ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ದೇವನು ನನಗೆ ಹಲವು ಬಾರಿ ಹೀಗೆ ಸುವಾರ್ತೆ ಅರುಹಿದ್ದಾನೆ: ಅವನು ನನಗೆ ಬಹಳ ಗೌರವ ನೀಡುವನು, ಜನರ ಹೃದಯಗಳಲ್ಲಿ ನನ್ನ ಬಗ್ಗೆ ಪ್ರೀತಿ ಹುಟ್ಟಿಸುವನು, ನನ್ನ ಜಮಾಅತನ್ನು ಭೂಲೋಕದಲ್ಲಿ ಹರಡುವನು, ಎಲ್ಲ ಪಂಗಡಗಳ ಮೇಲೆ ನನ್ನ ಪಂಗಡಕ್ಕೆ ವಿಜಯ ನೀಡುವನು, ತಮ್ಮ ಸತ್ಯದ ಪ್ರಕಾಶ, ಪುರಾವೆಗಳು ಮತ್ತು ದೃಷ್ಟಾಂತಗಳ ಮೂಲಕ ಎಲ್ಲರ ಬಾಯಿ ಮುಚ್ಚಿಸುವಂತಹ ಉನ್ನತ ವಿದ್ಯೆ ಮತ್ತು ಜ್ಞಾನವನ್ನು ನನ್ನ ಪಂಗಡದ ಜನರು ಗಳಿಸುವರು, ಪ್ರತಿಯೊಂದು ಜನಾಂಗ ಈ ನೀರಧಾರೆಯಿಂದ ಕುಡಿಯುವರು, ಈ ಜಮಾಅತ್ ವೇಗವಾಗಿ ಅಭಿವೃದ್ಧಿ ಹೊಂದುವುದು, ಬೆಳೆಯುವುದು ಮತ್ತು ಭೂಮಿಯನ್ನು ಆವರಿಸುವುದು. ಅನೇಕ ತಡೆಗಳು ಉಂಟಾಗುವುವು, ವಿಷಮ ಪರೀಕ್ಷೆ ಗಳುಂಟಾಗುವುವು. ಆದರೆ ದೇವನು ಅವುಗಳನ್ನೆಲ್ಲ ನಿವಾರಿಸುವನು ಮತ್ತು ತನ್ನ ವಾಗ್ದಾನ ಈಡೇರಿಸುವನು.

ದೇವನು ನನ್ನನ್ನು ಸಂಬೋಧಿಸಿ ಹೇಳಿದನು: ನಾನು ನಿನಗೆ ಅನುಗ್ರಹದ ಮೇಲೆ ಅನುಗ್ರಹ ನೀಡುವೆನು. ಎಲ್ಲಿಯವರೆಗೆ ಎಂದರೆ ದೊರೆಗಳು ನಿನ್ನ ಬಟ್ಟೆಗಳಿಂದ ಅನುಗ್ರಹವನ್ನು ಹುಡುಕುವರು. ಆದುದರಿಂದ ಎಲೈ ಆಲಿಸುವವರೇ, ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ ಈ ಭವಿಷ್ಯವಾಣಿಗಳನ್ನು ನಿಮ್ಮ ಪೆಟ್ಟಿಗೆಗಳಲ್ಲಿ ಭದ್ರವಾಗಿ ಇರಿಸಿರಿ. ಇವು ಅಲ್ಲಾಹನ ಮಾತುಗಳಾಗಿವೆ. ಅವು ಈಡೇರಲಿರುವುವು.

**(ತಜಲ್ಲಿಯಾತೆ ಇಲಾಹಿಯ್ಯ; ರೂಹಾನೀ ಖಝಾಇನ್, ಸಂಪುಟ 20, ಪುಟ 409)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಎಲೈ ಜನರೇ, ನೀವು ಆಲಿಸಿರಿ. ಇದು ಭೂಮ್ಯಾಕಾಶಗಳನ್ನು ಸೃಷ್ಟಿಸಿದವನ ಭವಿಷ್ಯವಾಣಿಯಾಗಿದೆ. ಅವನು ತನ್ನ ಈ ಜಮಾಅತನ್ನು ಎಲ್ಲ ದೇಶಗಳಲ್ಲೂ ಹರಡುವನು. ತರ್ಕಬದ್ಧವಾಗಿ ಮತ್ತು ಸಾಕ್ಷ್ಯಾಧಾರಗಳ ಮೂಲಕ ಎಲ್ಲದರ ಮೇಲೆ ಇದಕ್ಕೆ ವಿಜಯ ನೀಡುವನು. ಆ ದಿನ ಬರಲಿದೆ, ಅವು ಸಮೀಪವಾಗಿಯೇ ಇವೆ. ಲೋಕದಲ್ಲಿ ಈ ಒಂದು ಧರ್ಮ ಮಾತ್ರ ಗೌರವದೊಂದಿಗೆ ಸ್ಮರಿಸಲ್ಪಡುವುದು. ದೇವನು ಈ ಧರ್ಮ ಮತ್ತು ಈ ಜಮಾಅತಿನಲ್ಲಿ ಅತ್ಯಧಿಕ

ಹಾಗು ಅಸಾಧಾರಣ ಅನುಗ್ರಹ ಹಾಕುವನು ಮತ್ತು ಇದನ್ನು ನಾಶ ಮಾಡಲು ಯೋಚಿಸುವ ಪ್ರತಿಯೊಬ್ಬನನ್ನು ವಿಫಲಗೊಳಿಸುವನು. ಖಿಯಾಮತ್ ತನಕ ಈ ವಿಜಯ ಜಾರಿಯಲ್ಲಿ ರುವುದು....... ಇಂದಿನಿಂದ ಮೂರನೆಯ ಶತಮಾನ ಪೂರ್ಣವಾಗು ವುದರೊಳಗೆ ಹಝ್ರತ್ ಈಸಾರನ್ನು ಕಾಯುತ್ತಾ ಇರುವ ಮುಸ್ಲಿಮರೂ ಕ್ರೈಸ್ತರೂ ತೀವ್ರ ನಿರಾಶರೂ ಸಂಶಯಗ್ರಸ್ತರೂ ಆಗಿ ಈ ಸುಳ್ಳು ನಂಬಿಕೆಯನ್ನು ಬಿಟ್ಟು ಬಿಡುವರು. ಲೋಕದಲ್ಲಿ ಒಂದೇ ಧರ್ಮವೂ ಒಬ್ಬನೇ ನೇತಾರರೂ ಇರುವರು. ನಾನು ಒಂದು ಬೀಜ ಬಿತ್ತಲು ಬಂದಿರುವೆನು. ನನ್ನ ಕೈಯಿಂದ ಆ ಬೀಜ ಬಿತ್ತಲ್ಪಟ್ಟಿದೆ. ಅದು ಈಗ ಬೆಳೆಯುವುದು, ಪುಷ್ಪಿಸುವುದು, ಅದನ್ನು ತಡೆಯಬಲ್ಲವನು ಯಾರೂ ಇಲ್ಲ.

**(ತಧ್‌ಕಿರತುಶ್ಶಹಾದತೈನ್; ರೂಹಾನೀ ಖಝಾಇನ್, ಸಂಪುಟ 20, ಪುಟ 66 – 67)**

## ಸತ್ಯವಾದದ ಬಗ್ಗೆ ಪಂಥಾಹ್ವಾನ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಯಾರಿಗೆ ದೇವನು ಅದೃಶ್ಯ ಸಮಾಚಾರ ನೀಡುತ್ತಾನೆ, ಯಾರ ಪ್ರಾರ್ಥನೆ ಸ್ವೀಕರಿಸುತ್ತಾನೆ, ಯಾರಿಗೆ ಸಹಾಯ ಮಾಡುತ್ತಾನೆ ಮತ್ತು ಯಾರ ಪರವಾಗಿ ದೊಡ್ಡ ದೊಡ್ಡ ದೃಷ್ಟಾಂತ ತೋರಿಸುತ್ತಾನೆ ಎಂದು ನನ್ನ ಎದುರಿಗೆ ಲೋಕದ ಎಲ್ಲ ಜನಾಂಗಗಳು ಜಮಾಯಿಸಿ ಪರೀಕ್ಷೆ ನಡೆಸುವುದಾದರೆ, ನಾನೇ ಜಯಶಾಲಿ ಆಗುವೆನೆಂದು ನಾನು ದೇವನ ಆಣೆ ಹಾಕಿ ಹೇಳುತ್ತೇನೆ. ಯಾರಾದರೂ ಈ ಪರೀಕ್ಷೆ ಮಾಡಲು ನನ್ನ ಎದುರಿಗೆ ಬರಲು ಸಿದ್ಧರಾಗಿದ್ದಾರೆಯೇ? ಇಸ್ಲಾಮ್ ಧರ್ಮ ಸತ್ಯವೆಂದು ಶತ್ರುಗಳು ಮನಗಾಣಲು ನನಗೆ ದೇವನು ಸಾವಿರಾರು ದೃಷ್ಟಾಂತಗಳನ್ನು ನೀಡಿದನು. ನಾನು ನನಗಾಗಿ ಯಾವುದೇ ಗೌರವವನ್ನು ಆಶಿಸುವುದಿಲ್ಲ. ಯಾರಿಗೆ ಬೇಕಾಗಿ ನಾನು ಕಳುಹಿಸಲ್ಪಟ್ಟಿರುವೆನೋ ಅವನ ಗೌರವವನ್ನು ಆಶಿಸುತ್ತೇನೆ.

**(ಹಖೀಖತುಲ್ ವಹ್ಯ್; ರೂಹಾನೀ ಖ಼ಝ಼ಾಇನ್, ಸಂಪುಟ 22, ಪುಟ 181)**

# ಮುಕ್ತ ಪಂಥಾಹ್ವಾನ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಾನು ಅಲ್ಲಾಹನ ವದನದ ಆಣೆ ಹಾಕಿ ಹೇಳುತ್ತೇನೆ: ನಾನು ಈಗಲೂ ಅವನನ್ನು ನೋಡುತ್ತಿದ್ದೇನೆ. ಲೋಕ ನನ್ನನ್ನು ಗುರುತಿಸುವುದಿಲ್ಲ. ಆದರೆ ನನ್ನನ್ನು ಕಳುಹಿಸಿದ ಅವನು ನನ್ನನ್ನು ಗುರುತಿಸುತ್ತಾನೆ. ನನ್ನ ನಾಶವನ್ನು ಇಚ್ಛಿಸುವುದು ಅವರ ತಪ್ಪು ಮತ್ತು ದೌರ್ಭಾಗ್ಯ. ನೈಜ ಮಾಲಿಕನಾದವನು ತನ್ನ ಕೈಯಿಂದ ನೆಟ್ಟ ಮರ ನಾನಾಗಿರುವೆನು. ನನ್ನನ್ನು ಕಡಿದು ಹಾಕಲು ಬಯಸುವವನ ಸ್ಥಿತಿ ಖಾರೂನ್, ಯಹೂದ, ಇಸ್ಕರಿಯೋತ ಮತ್ತು ಅಬೂಜಹಲನ ಸ್ಥಿತಿಯಂತೆ ಆಗುವುದು. ನುಬುವ್ವತಿನ ಮಾರ್ಗದಲ್ಲಿ ಯಾರಾದರೂ ನನ್ನಿಂದ ತೀರ್ಪು ಪಡೆದು ದೇವನು ಯಾರ ಪರವಾಗಿದ್ದಾನೆ ಎಂದು ಕಾಣಲಿ ಎಂದು ನಾನು ಪ್ರತಿದಿನ ತೀವ್ರ ದುಃಖಿತನಾಗಿ ಪ್ರಾರ್ಥಿಸುತ್ತೇನೆ. ಆದರೆ ರಣರಂಗಕ್ಕೆ ಧುಮುಕುವುದು ನಪುಂಸಕನ ಕೆಲಸವಲ್ಲ. ನಮ್ಮ ಪಂಜಾಬ್ ರಾಜ್ಯದಲ್ಲಿ ಕುಫ್ರ್ ಸೈನ್ಯದ ಒಬ್ಬನೇ ಸೈನಿಕ ಗ್ಘುಲಾಮ್ ದಸ್ತಗೀರ್ ಕಾರ್ಯನಿರತನಾಗಿದ್ದನು. ಈಗ ಅವನ ಹಾಗಿರುವ ಒಬ್ಬ ಕೂಡ ಅವರ ಪೈಕಿ ಮುಂದೆ ಬರುವುದು ಅಸಂಭಾವ್ಯವೂ ಅಸಾಧ್ಯವೂ ಆಗಿದೆ.

ಎಲೈ ಜನರೇ, ಕೊನೆಯ ತನಕ ನಿಷ್ಠಾವಂತವಾಗಿರುವ ಕೈ ನನ್ನ ಜೊತೆ ಇದೆಯೆಂದು ನೀವು ದೃಢವಾಗಿ ತಿಳಿದುಕೊಳ್ಳಿರಿ. ನಿಮ್ಮ ಪುರುಷರು, ನಿಮ್ಮ ಸ್ತ್ರೀಯರು, ನಿಮ್ಮ ತರುಣರು, ನಿಮ್ಮ ವೃದ್ಧರು, ನಿಮ್ಮ ಕಿರಿಯರು ಮತ್ತು ನಿಮ್ಮ ಹಿರಿಯರೆಲ್ಲರೂ ಸೇರಿಕೊಂಡು ನನ್ನನ್ನು ನಾಶಮಾಡಬೇಕೆಂದು ನಿರಂತರ ಸಾಷ್ಟಾಂಗ ಪ್ರಣಾಮ ಮಾಡುತ್ತಾ ನಿಮ್ಮ ಮೂಗು ಸವೆದು ಹೋಗುವ ತನಕ ಮತ್ತು ನಿಮ್ಮ ಕೈ ಮರಗಟ್ಟುವ ವರೆಗೆ ಪ್ರಾರ್ಥಿಸಿದರೂ ದೇವನು ನಿಮ್ಮ ಪ್ರಾರ್ಥನೆಯನ್ನು ಖಂಡಿತವಾಗಿಯೂ ಆಲಿಸಲಾರನು ಹಾಗು ತನ್ನ ಕೆಲಸ ಪೂರ್ಣಗೊಳಿಸದೆ ನಿಂತುಬಿಡಲಾರನು. ಮನುಷ್ಯರಲ್ಲಿ ಒಬ್ಬನು ಕೂಡ ನನ್ನ ಜೊತೆಗಿರದಿದ್ದರೆ ದೇವದೂತರು ನನ್ನ ಜೊತೆಗಿರುವರು. ನೀವು ಸಾಕ್ಷ್ಯವನ್ನು ಅಡಗಿಸಿದರೆ ನನ್ನ ಪರವಾಗಿ ಕಲ್ಲುಗಳು ಸಾಕ್ಷ್ಯ ನೀಡುವುವು. ನೀವು ನಿಮ್ಮ ಜೀವಗಳ ಮೇಲೆಯೇ ದೌರ್ಜನ್ಯ ಮಾಡಬೇಡಿರಿ. ಸುಳ್ಳುಗಾರರ ಮತ್ತು ಸತ್ಯಸಂಧರ ಮುಖಗಳು ಬೇರೆ ಬೇರೆಯಾಗಿರುತ್ತವೆ. ದೇವನು ಯಾವುದೇ ಕಾರ್ಯವನ್ನು ತೀರ್ಮಾನಿಸದೆ ಬಿಟ್ಟು ಬಿಡುವುದಿಲ್ಲ.

**(ಅರ್‌ಬಈನ್; ರೂಹಾನೀ ಖ಼ಝಾಇನ್, ಸಂಪುಟ 17, ಪುಟ 399 – 400)**